ಸಂಪುಟ: 06 ಸಂಚಿಕೆ: 216 ಪುಟಗಳು: 08 ಗುರುವಾರ 22 ಅಕ್ಟೋಬರ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
RNI No. KARKAN/2021/80833
9448225696 +91 8035621249 ₹5
ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಕುಮಾರಸ್ವಾಮಿ ಪರವಾಗಿ ಪ್ರಿಯಾಂಕ್ ಖರ್ಗೆಗೆ ಕರಾವಳಿಯು

• ಉದಯವಾಹಿನಿ, ಬೆಂಗಳೂರು

ಸ್ಟಿಂಗ್ ಆಪರೇಷನ್ ಕುರಿತಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ನಡುವೆ ವಾಗ್ಸಮರ ಮುಂದುವರೆದಿದೆ. ಈ ಮಧ್ಯೆ ಕರಾವಳಿ ಜನತೆ ಕುಮಾರಸ್ವಾಮಿ ಪರವಾಗಿ ಪ್ರಿಯಾಂಕ್ ಖರ್ಗೆಗೆ ಸವಾಲು ಹಾಕಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆ ನಿಮಗೆ ಹಾಕಿರುವ ಸವಾಲನ್ನು ಕೇವಲ ನೀವಲ್ಲ, ಕರಾವಳಿಯ ಜನತೆಯಾದ ನಾವು ನೇರವಾಗಿ ಸ್ವೀಕರಿಸಿದ್ದೇವೆ. ನೀವು ಕೇವಲ ಒಂದು ಕ್ಷೇತ್ರಕ್ಕೋ ಅಥವಾ ಒಂದು ಜಿಲ್ಲೆಗೋ ಸೀಮಿತರಾದ ನಾಯಕರಲ್ಲ. ಇಡೀ ನಾಡಿಗೆ ಬೇಕಾದ ಜನನಾಯಕರು ಎಂಬುದನ್ನು ಸಾಬೀತುಪಡಿಸಲು ಕರಾವಳಿಯ ಕನ್ನಡಿಗರು, ತುಳುವರು ಸಜ್ಜಾಗಿದ್ದಾರೆ ಎಂದು ಬ್ಯಾನರ್ ಹಾಕಲಾಗಿದೆ.ಇಷ್ಟು ದಶಕಗಳ ಕಾಲ ಕರಾವಳಿ ಕೇವಲ ಭಾವನಾತ್ಮಕ ಮತ್ತು ರಾಜಕೀಯ ಜಿದ್ದಾಜಿದ್ದಿಗೆ ಮಾತ್ರ ಬಳಕೆಯಾಗುತ್ತಿದೆ. ಆದರೆ ಇಲ್ಲಿನ ಮೀನುಗಾರರ ಬವಣೆ, ಅಡಿಕೆ ಬೆಳೆಗಾರರ ಸಂಕಷ್ಟ, ಯುವಜನತೆಯ ನಿರುದ್ಯೋಗ ಮತ್ತು ನೈಜ ಅಭಿವೃದ್ಧಿಯ ವಿಚಾರಗಳು ಮೂಲೆಗುಂಪಾಗಿದೆ.

ನಮಗೆ ಈ ಬೇಕಿರುವುದು ದ್ವೇಷದ ರಾಜಕಾರಮವಲ್ಲ, ಬದಲಾಗಿ ನಿಮ್ಮಂತಹ ಅಭಿವೃದ್ಧಿಪರ, ಸರ್ವರನ್ನೂ ಸಮನಾಗಿ ಕಾಣುವ, ದೂರದೃಷ್ಟಿಯುಳ್ಳ ನಾಯಕತ್ವದ ಸ್ಪರ್ಶ, ನಿಮ್ಮ ಜನಪರ ಆಡಳಿತದ ಶೈಲಿ ಕರಾವಳಿಯ ಮನೆಮನೆಗೂ ತಲುಪಿದೆ ಎಂದು ಬ್ಯಾನರ್‌ನಲ್ಲಿ ಬರೆಯಲಾಗಿದೆ.

ಕರ್ನಾಟಕ ಅರಣ್ಯ ಇಲಾಖೆ ನೇಮಕಾತಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸರ್ಕಾರಿ ವಲಯದಲ್ಲಿ ಉದ್ಯೋಗ ಪಡೆಯಲು ಬಯಸುತ್ತಿರುವ ಉದ್ಯೋಗಾಕಾಂಕ್ಷಿಗಳಿಗೆ ಅತ್ಯುತ್ತಮ ಅವಕಾಶ ಸಿಕ್ಕಿದೆ. ಕರ್ನಾಟಕ ಅರಣ್ಯ ಇಲಾಖೆಯು ರಾಜ್ಯಾದ್ಯಂತ ಖಾಲಿ ಇರುವ 750 ಫಾರೆಸ್ಟ್ ವಾಚರ್ ಅರಣ್ಯ ವೀಕ್ಷಕರು) ಹುದ್ದೆಗಳ ಭರ್ತಿಗೆ ಅಧಿಕೃತ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿದೆ. ಈ ಹಿಂದೆ ನಿಗದಿಪಡಿಸಲಾಗಿದ್ದ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕವನ್ನು ಇದೀಗ ಅಕ್ಟೋಬರ್ 30 ರವರೆಗೆ ವಿಸ್ತರಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮತ್ತೊಂದು ಅವಕಾಶ ಕಲ್ಪಿಸಲಾಗಿದೆ. ಈ ನೇಮಕಾತಿ ಪ್ರಕ್ರಿಯೆಯ ಮೂಲಕ ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಅರಣ್ಯ ವೃತ್ತಗಳಲ್ಲಿ ಒಟ್ಟು 750 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ವೃತ್ತವಾರು ಹುದ್ದೆಗಳ ವಿವರಗಳನ್ನು ನೋಡುವುದಾದರೆ: ಚಾಮರಾಜನಗರ (169), ಮೈಸೂರು (120), ಬೆಂಗಳೂರು (70), ಬಳ್ಳಾರಿ (62), ಕೆನರಾ–ಉತ್ತರ ಕನ್ನಡ (60), ಚಿಕ್ಕಬಳ್ಳಾಪುರ (56), ಮಂಗಳೂರು (54), ಬೆಳಗಾವಿ (42), ಶಿವಮೊಗ್ಗ (38), ಕೊಡಗು (32), ಹಾಸನ (30), ಧಾರವಾಡ (12) ಮತ್ತು ಕಲಬುರಗಿ (04) ವೃತ್ತಗಳಲ್ಲಿ ಅರಣ್ಯ ವೀಕ್ಷಕರ ಹುದ್ದೆಗಳು ಲಭ್ಯವಿವೆ.

ಪುಲಿಕೇಶಿನಗರ ಅನುಮಾನಾಸ್ಪದ ಸ್ಫೋಟ

• ಉದಯವಾಹಿನಿ, ಬೆಂಗಳೂರು

ಪುಲಿಕೇಶಿನಗರದಲ್ಲಿ ಅನುಮಾನಾಸ್ಪದ ವಸ್ತು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಬೆಂಗಳೂರಿನ ಪುಲಿಕೇಶಿನಗರ ಠಾಣೆಯಲ್ಲಿ ಸ್ಫೋಟಕ ವಸ್ತು ಕಾಯ್ದೆ 3, 5ರಡಿ ಎಫ್ಐಆರ್ ದಾಖಲಾಗಿದೆ. ಪ್ರಕರಣದ ತನಿಖೆಯನ್ನು ಪೊಲೀಸರು ಆರಂಭಿಸಿದ್ದು, ಸ್ಫೋಟಕ್ಕೆ ಕಾರಣವಾದ ವಸ್ತುವಿನ ಕುರಿತು ತೀವ್ರ ಪರಿಶೀಲನೆ ನಡೆಸುತ್ತಿದ್ದಾರೆ. ಬಿಎನ್‌ಎಸ್ ಸೆಕ್ಷನ್ 61: ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಸೇರಿ ಅಪರಾಧಿಕ ಸಂಚು ರೂಪಿಸುವುದು. ಬಿಎನ್‌ಎಸ್ ಸೆಕ್ಷನ್ 3(5): ಸಾಮಾನ ಉದ್ದೇಶದಿಂದ ಹಲವಾರು ವ್ಯಕ್ತಿಗಳು ಸೇರಿಕೊಂಡು ಅಪರಾಧ ಕೃತ್ಯ ಎಸಗುವುದು. ಸ್ಫೋಟಕ ವಸ್ತುಗಳ ಕಾಯ್ದೆ ಸೆಕ್ಷನ್ 3 ಮತ್ತು 5 ಏನು ಹೇಳುತ್ತದೆ ಎಂದು ನೋಡುವುದಾರೆ, ಸೆಕ್ಷನ್ 3 – ಸ್ಫೋಟಕ ವಸ್ತುಗಳ ಮೂಲಕ ಜೀವ ಅಥವಾ ಆಸ್ತಿಗೆ ಹಾನಿಯುಂಟು ಮಾಡುವುದು. ಸೆಕ್ಷನ್ 5 – ಯಾವುದೇ ಪರವಾನಗಿ ಇಲ್ಲದೆ ಅನುಮಾನಸ್ಪದ ವಸ್ತು ಅಥವಾ ಸ್ಫೋಟಕ ವಸ್ತುಗಳ ತಯಾರಿ ಅಥವಾ ಸಂಗ್ರಹಿಸುವುದು. ಇನ್ನು ಸ್ಫೋಟ ಸಂಭವಿಸಿದ ಸ್ಥಳಕ್ಕೆ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಭೇಟಿ ನೀಡಿ ಸ್ಫೋಟದ ಮಾದರಿಗಳನ್ನು ಸಂಗ್ರಹಿಸಿದ್ದಾರೆ.

ನೀವು ಈಗಲೇ ಮಹಿಳಾ ಮೀಸಲಾತಿ ಜಾರಿಗೊಳಿಸಬಹುದು ಮಲ್ಲಿಕಾರ್ಜುನ ಖರ್ಗೆ

• ಉದಯವಾಹಿನಿ, ಬೆಂಗಳೂರು

ಮಹಿಳಾ ಮೀಸಲಾತಿಯ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕರನ್ನು ದಾರಿತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕ್ಷೇತ್ರ ಮರುವಿಂಗಡಣೆಗಾಗಿ ಕಾಯುವ ಅಗತ್ಯವಿಲ್ಲದೆ, ಸಂಸತ್ತಿನ ಹಾಲಿ ಸದಸ್ಯ ಬಲವನ್ನೇ ಬಳಸಿಕೊಂಡು ಸರ್ಕಾರವು ಶೇ 33ರಷ್ಟು ಮೀಸಲಾತಿಯನ್ನು ಜಾರಿಗೊಳಿಸಬಹುದು ಎಂದು ಬುಧವಾರ ಪ್ರತಿಪಾದಿಸಿದ್ದಾರೆ. ನೀವು ಈಗಲೇ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿಯನ್ನು ಜಾರಿಗೊಳಿಸಬಹುದು. ಸದನದ ಸದ್ಯದ ಬಲ ಅಥವಾ ಈಗಿರುವ ಕ್ಷೇತ್ರ ವಿಂಗಡಣೆಯ ಆಧಾರದ ಮೇಲೆಯೇ, ನೀವು ಆ ಸ್ಥಾನಗಳಲ್ಲಿ ಮೂರನೇ ಒಂದು ಭಾಗವನ್ನು ಮಹಿಳೆಯರಿಗಾಗಿ ಮೀಸಲಿಡಬಹುದು. ನಿಮ್ಮನ್ನು ತಡೆಯುತ್ತಿರುವುದು ಏನು?' ಎಂದು ಖರ್ಗೆ ಹೇಳಿದರು. ಸರ್ಕಾರ ಈ ವಿಷಯವನ್ನು ವಿರೋಧ ಪಕ್ಷವನ್ನು ದೂಷಿಸಲು ಬಳಸಿಕೊಳ್ಳುತ್ತಿದೆ. ಅಲ್ಲದೆ, ಈ ಹಿಂದೆ ಕಾಂಗ್ರೆಸ್ ಪಕ್ಷವು ಈ ಶಾಸನವನ್ನು ಬೆಂಬಲಿಸಿತ್ತು ಎಂದು ಅವರು ಪ್ರತಿಪಾದಿಸಿದರು.

ಸೆ.2023ರಲ್ಲಿ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಅಂಗೀಕರಿಸಲ್ಪಟ್ಟ ನಾರಿ ಶಕ್ತಿ ವಂದನ ಅಧಿನಿಯಮ'ವು, ಲೋಕಸಭೆ, ರಾಜ್ಯ ವಿಧಾನಸಭೆ ಮತ್ತು ದೆಹಲಿ ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನಗಳನ್ನು ಮೀಸಲಿಡುವ ಸಲುವಾಗಿ ಸಂವಿಧಾನಕ್ಕೆ ತಿದ್ದುಪಡಿ ತಂದಿತು. ಯಾವುದೇ ವ್ಯಕ್ತಿ ಅಥವಾ ಪಕ್ಷಕ್ಕಾಗಿ ಅಲ್ಲ, ಬದಲಾಗಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತ್ತು ಸಾಂವಿಧಾನಿಕ ಸಂಸ್ಥೆಗಳ ಘನತೆಯನ್ನು ಕಾಪಾಡಲು ವಿರೋಧ ಪಕ್ಷಗಳು ಹೋರಾಡುತ್ತಿವೆ ಎಂದು ಅವರು ಪ್ರತಿಪಾದಿಸಿದರು.ಪ್ರಧಾನಿ ಮೋದಿ ಅವರಿಗೆ ವಿರೋಧ ಪಕ್ಷದ ನಾಯಕರು ಬರೆದ ಪತ್ರಗಳಿಗೆ ಅವರು ನೇರವಾಗಿ ಉತ್ತರಿಸದೆ, ಬೇರೆಯವರ ಮೂಲಕ ಉತ್ತರ ಕೊಡಿಸುತ್ತಿದ್ದಾರೆ ಎಂದು ಖರ್ಗೆ ಟೀಕಿಸಿದರು. ಮೋದಿ ಅವರಿಗೆ ತಾವು ಬರೆದ ಪತ್ರಕ್ಕೆ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನೀಡಿರುವ ಪ್ರತಿಕ್ರಿಯೆಯನ್ನು ಉಲ್ಲೇಖಿಸಿದ ಖರ್ಗೆ, ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳದ ಹೊರತು, ಇಂತಹ ಉತ್ತರಗಳಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ ಎಂದು ಅವರು ಹೇಳಿದರು.

ದಸರಾ ಕಲರವ ನಾಡ ಅಧಿದೇವತೆ ವೈಭವ

• ಉದಯವಾಹಿನಿ, ಬೆಂಗಳೂರು

ವಿಶ್ವವಿಖ್ಯಾತ ಜಂಬೂ ಸವಾರಿಗೆ ಮೀನ ಲಗ್ನದಲ್ಲಿ ಪುಷ್ಪಾರ್ಚನೆ ಮಾಡುವ ಮೂಲಕ ಗಣ್ಯರು ಚಾಲನೆ ನೀಡಿದರು. ದಸರಾ ಅಂತಿಮ ಹಂತಕ್ಕೆ ಬಂದಿದ್ದು, ಅರಮನೆ ಮುಂಭಾಗದ ವೇದಿಕೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಗಣ್ಯರು ಬುಧವಾರ ಸಂಜೆ 4:10 ರಿಂದ 4:35ರ ಮೀನ ಲಗ್ನದಲ್ಲಿ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ನಾಡ ಅಧಿದೇವತೆ, ಚಾಮುಂಡೇಶ್ವರಿ ತಾಯಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಜಂಬೂ ಸವಾರಿಗೆ ಚಾಲನೆ ನೀಡಿದರು.

ಇದಕ್ಕೂ ಮುನ್ನ ಮಧ್ಯಾಹ್ನ 1:36 ರಿಂದ 1:56ರ ಶುಭ ಮಕರ ಲಗ್ನದಲ್ಲಿ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ನಂದಿ ಕಂಬಗಳಿಗೆ ಸಿಎಂ ಡಿಕೆಶಿ ಪೂಜೆ ಸಲ್ಲಿಸಿದರು. ನಂತರ ದಸರಾ ಮೆರವಣಿಗೆಗೆ ಚಾಲನೆ ಸಿಕ್ಕಿತು. ಇದಾದ ಬಳಿಕ ಅರಮನೆಯ ಮುಂಭಾಗದಲ್ಲಿ ನಿಶಾನೆ ಆನೆಯಾಗಿ ಅಭಿಮನ್ಯು ಮೆರವಣಿಗೆಯ ನೇತೃತ್ವ ವಹಿಸಿತು. ಅದಾದ ಬಳಿಕ ನೌಪತ್ ಆನೆ, ನಂತರ ಮೂರು ಸಾಲಾನೆಗಳು ಮೆರವಣಿಗೆಯಲ್ಲಿ ಹೊರಟು ಬಳಿಕ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿದವು. ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಸಾಗಿದವು. ಬಳಿಕ ಪೊಲೀಸ್ ಬ್ಯಾಂಡ್ ಸೇರಿದಂತೆ ವಾದ್ಯವೃಂದ ಹಾಗೂ ಅಶ್ವದಳ ಹೊರಟಿತು. ಪ್ರಶಾಂತ ಆನೆ ಮೊದಲ ಬಾರಿಗೆ ಚಿನ್ನದ ಅಂಬಾರಿಯನ್ನು ಹೊತ್ತು ಸಾಗಿತು. ಬನ್ನಿಮಂಟಪದವರೆಗೆ ಹೊರಟು ಜಂಬೂ ಸವಾರಿ ಮುಕ್ತಾಯಗೊಂಡಿತು. ಜಂಬೂ ಸವಾರಿಯ ಪ್ರಮುಖ ಆಕರ್ಷಣೆಯಾದ ಗಜಪಡೆಯನ್ನು ಬಣ್ಣ ಬಣ್ಣದ ಚಿತ್ತಾರಗಳಿಂದ ಕಲಾವಿದರು ಸಿಂಗರಿಸಿದ್ದರು. ಸೊಂಡಿಲು, ಕಿವಿ, ದಂತ, ಕಾಲು ಹಾಗೂ ಅದರ ಬಾಲದ ಮೇಲೆ ಗಂಡುಬೇರುಂಡ, ಶಂಖ, ಎಲೆ ಆಕಾರ ಸೇರಿದಂತೆ ವಿವಿಧ ರೀತಿಯ ಚಿತ್ತಾರವನ್ನು ಬಿಡಿಸಿ ಸಜ್ಜುಗೊಳಿಸಿದ್ದರು. **ಬಿಗಿ ಭದ್ರತೆ:** ಮೈಸೂರು ನಗರದಲ್ಲಿ ಆಯಕಟ್ಟಿನ ಸ್ಥಳಗಳು, ಸರ್ಕಲ್‌ಗಳಲ್ಲಿ ಹಾಗೂ ಜಂಬೂ ಸವಾರಿ ಸಾಗುವ ಮಾರ್ಗ ಸೇರಿದಂತೆ ನಗರದ ಹಲವೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ನಗರದಲ್ಲಿ 5,000ಕ್ಕೂ ಹೆಚ್ಚು ಪೊಲೀಸರು, 33 ಕೆಎಸ್‌ಆರ್‌ಪಿ, ಸಿಎಆರ್, ಡಿಎಆರ್ ತುಕಡಿಗಳನ್ನು ನಿಯೋಜಿಸಲಾಗಿತ್ತು. ಮೆರವಣಿಗೆ ಸಾಗುವ ದಾರಿಯ ಉದ್ದಕ್ಕೂ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಅರಮನೆಯಿಂದ ಹೊರಡಲಿರುವ ಮೆರವಣಿಗೆಯ ಸುಗಮ ನಿರ್ವಹಣೆಗಾಗಿ ಬ್ಯಾರಿಕೇಡ್‌ಗಳು ಮತ್ತು ಪೊಲೀಸ್ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ರಾಜಮಾರ್ಗದ ಇಕ್ಕೆಲಗಳಲ್ಲಿ ಸಾರ್ವಜನಿಕರು ನೂಕುನುಗ್ಗಲು ಉಂಟಾಗದಂತೆ ಬ್ಯಾರಿಕೇಡ್ ಅಳವಡಿಸಲಾಗಿದೆ. ಮೆರವಣಿಗೆ ಸಾಗುವ ಮಾರ್ಗದಲ್ಲಿ ಕುಡಿಯುವ ನೀರು, ಶೌಚಾಲಯ, ವೈದ್ಯಕೀಯ ತಂಡಗಳ ವ್ಯವಸ್ಥೆಯನ್ನೂ ಮಾಡಲಾಗಿದೆ.

ನಂದಿ ಧ್ವಜಕ್ಕೆ ಸಿಎಂ ಪೂಜೆ

ಇದಕ್ಕೂ ಮೊದಲು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು, ಅರಮನೆಯ ಬಲರಾಮ ದ್ವಾರದಲ್ಲಿ ನಂದಿಧ್ವಜಕ್ಕೆ ಪೂಜೆ ಸಲ್ಲಿಸಿದರು. ಈ ವೇಳೆ ಸಿಎಂ ರಾಜ್ಯದ ಸಮೃದ್ಧಿ, ಸುಖ-ಶಾಂತಿ ಹಾಗೂ ಎಲ್ಲರ ಕಲ್ಯಾಣಕ್ಕಾಗಿ ಪ್ರಾರ್ಥಿಸಿದರು. ಸಚಿವರು, ಶಾಸಕರು ಮತ್ತು ಹಲವು ಗಣ್ಯರು ನಂದಿಧ್ವಜ ಪೂಜೆಯಲ್ಲಿ ಭಾಗವಹಿಸಿದ್ದರು. ವಿಜಯದಶಮಿ ಮೆರವಣಿಗೆಯಲ್ಲಿ ವಿವಿಧ ಜಿಲ್ಲೆಗಳ 16, ಕೇಂದ್ರ ಸರ್ಕಾರದ 9, ರಾಜ್ಯಮಟ್ಟದ ವಿವಿಧ ಇಲಾಖೆಗಳು, ನಿಗಮ ಮಂಡಳಿಗಳ 11 ಸೇರಿದಂತೆ ಒಟ್ಟು 40 ಸ್ತಬ್ಧಚಿತ್ರಗಳು, ಹೆಸರಾಂತ 100ಕ್ಕೂ ಹೆಚ್ಚು ಕಲಾತಂಡಗಳು ಭಾಗವಹಿಸಿದ್ದವು. ಇದರೊಂದಿಗೆ ಗಜಪಡೆ, ಅಶ್ವಾರೋಹಿ ಪಡೆಗಳು, ಆನೆಗಾಡಿಗಳು ಪಾಲ್ಗೊಂಡು ದಸರಾ ಉತ್ಸವಕ್ಕೆ ಮೆರಗು ತಂದವು.

ಸ್ಯಾಂಡಲ್‌ವುಡ್ ಕಲರವ

ಇದೇ ಮೊದಲ ಬಾರಿಗೆ ಸ್ಯಾಂಡಲ್‌ವುಡ್‌ನ 100ಕ್ಕೂ ಹೆಚ್ಚು ಕಲಾವಿದರು ಮೈಸೂರು ದಸರಾದ ಜಂಬೂ ಸವಾರಿಯಲ್ಲಿ ಭಾಗವಹಿಸಿ ಗಮನ ಸೆಳೆದಿದ್ದಾರೆ. ಅಲ್ಲದೇ 11 ದೇಶಗಳ 60ಕ್ಕೂ ಹೆಚ್ಚು ರಾಯಭಾರಿಗಳು ಹಾಗೂ ರಾಜತಾಂತ್ರಿಕ ಅಧಿಕಾರಿಗಳು ಈ ಉತ್ಸವವನ್ನು ಕಣ್ತುಂಬಿಕೊಂಡರು. ಒಟ್ಟಿನಲ್ಲಿ 2026ರ ಮೈಸೂರು ದಸರಾ ಉತ್ಸವ ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಭಕ್ತಿಯನ್ನು ಇಡೀ ಜಗತ್ತಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.

ಈ ಬಾರಿಯ ಜಂಬೂ ಸವಾರಿಯ ವಿಶೇಷ ಆಕರ್ಷಣೆ ಕ್ಯಾಪ್ಟನ್ ಪ್ರಶಾಂತ ಆನೆ ಚಿನ್ನದ ಅಂಬಾರಿಯನ್ನು ಹೊತ್ತು ಸಾಗಿದ್ದು. ಮೊದಲ ಬಾರಿಗೆ ಈ ಜವಾಬ್ದಾರಿ ನಿರ್ವಹಿಸಿದ ಪ್ರಶಾಂತ, ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿಯ ಉತ್ಸವಮೂರ್ತಿಯನ್ನು ಹೊತ್ತು ಸಾಗುವ ಮೂಲಕ ದಸರಾ ಮಹೋತ್ಸವದ ಪ್ರಮುಖ ಕೇಂದ್ರಬಿಂದುವಾಯಿತು. ಈ ಹಿಂದೆ ಚಿನ್ನದ ಅಂಬಾರಿ ಹೊತ್ತಿದ್ದ ಅಭಿಮನ್ಯು ಆನೆ ನಿಶಾನೆ ಆನೆಯಾಗಿ ಮೆರವಣಿಗೆಯಲ್ಲಿ ಭಾಗವಹಿಸಿತು.

ಜಂಬೂ ಸವಾರಿಗೆ ಚಾಲನೆ

ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂ ಸವಾರಿಗೂ ಮುನ್ನ ನಡೆದ ಸ್ತಬ್ಧ ಚಿತ್ರಗಳ ಮೆರವಣಿಗೆ ನೋಡುಗರ ಕಣ್ಮನ ಸೆಳೆದಿವೆ. ಮೆರವಣಿಗೆಯಲ್ಲಿ 16 ಜಿಲ್ಲೆಗಳ, ರಾಜ್ಯ ಸರ್ಕಾರದ 18 ಮತ್ತು ಕೇಂದ್ರ ಸರ್ಕಾರದ 11 ಸೇರಿ ಒಟ್ಟು 60 ಸ್ತಬ್ಧಚಿತ್ರಗಳು ಪ್ರದರ್ಶನಗೊಂಡಿವೆ. ದಸರಾ ಮೆರವಣಿಗೆಯಲ್ಲಿ ಹೊರ ರಾಜ್ಯದ ಸ್ತಬ್ಧ ಚಿತ್ರಗಳಿಗೂ ಅವಕಾಶ ನೀಡಲಾಗಿದ್ದು, ಕೀಲುಕುದುರೆ, ಗೊರವರ ಕುಣಿತ, ಡೊಳ್ಳು ಕುಣಿತ, ಯಕ್ಷಗಾನ, ಕೀಲುಗೊಂಬೆ, ಮರಗಾಲು, ವೀರಗಾಸೆ, ಹಾಡಿಮಕ್ಕಳ ನೃತ್ಯ ಸೇರಿ ಹಲವು ಸಾಂಸ್ಕೃತಿಕ ಪ್ರದರ್ಶನಗಳು ನೆರವೇರಿವೆ.

ವಿವಿಧ ರೀತಿಯ ಚಿತ್ತಾರ

ಗಣ್ಯರು ಹಾಗೂ ಅತಿಗಣ್ಯರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ. ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ನ್ಯಾಯಮೂರ್ತಿಗಳು, ಸಂಸದರು, ಶಾಸಕರು ಹಾಗೂ ವಿದೇಶಿ ಗಣ್ಯರಿಗಾಗಿ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಅವರಿಗೆ ಅರಮನೆಯ ಮುಂಭಾಗದಲ್ಲಿ ವಿಶೇಷ ಗ್ಯಾಲರಿ ನಿರ್ಮಿಸಲಾಗಿದೆ. ಜಂಬೂ ಸವಾರಿಯ ಪ್ರಮುಖ ಆಕರ್ಷಣೆಯಾದ ಗಜಪಡೆಯನ್ನು ಬಣ್ಣ ಬಣ್ಣದ ಚಿತ್ತಾರಗಳಿಂದ ಕಲಾವಿದರು ಸಿಂಗರಿಸಿದ್ದಾರೆ. ಸೊಂಡಿಲು, ಕಿವಿ, ದಂತ, ಕಾಲು ಹಾಗೂ ಅದರ ಬಾಲದ ಮೇಲೆ ಗಂಡುಬೇರುಂಡ, ಶಂಖ, ಎಲೆ ಆಕಾರ ಸೇರಿದಂತೆ ವಿವಿಧ ರೀತಿಯ ಚಿತ್ತಾರವನ್ನು ಬಿಡಿಸಿದ್ದಾರೆ.

ಮೈಸೂರಿನಲ್ಲಿ ಜನರ ಸಂಭ್ರಮ

ದಸರಾ ವೈಭವದಲ್ಲಿ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಗೆ ಆನೆಗಳ ತಾಲೀಮು ಆರಂಭಗೊಂಡಿದೆ. ಮೈಸೂರಿನ ಐತಿಹಾಸಿಕ ದಸರಾ ಮಹೋತ್ಸವದಲ್ಲಿ ಭಾಗವಹಿಸುವ ಆನೆಗಳು ಈಗಾಗಲೇ ಮೈಸೂರು ಅರಮನೆ ಆವರಣಕ್ಕೆ ಆಗಮಿಸಿವೆ. ಈ ಆನೆಗಳಲ್ಲಿ ಪಟ್ಟದಾನೆ ಶ್ರೀಕಂಠ ಮುಖ್ಯ ಆಕರ್ಷಣೆಯಾಗಿದೆ. ಶ್ರೀಕಂಠ ತನ್ನ ಗಾಂಭೀರ್ಯದ ಹೆಜ್ಜೆಗಳನ್ನು ಹಾಕುತ್ತಾ ಸಾಗುತ್ತಿದ್ದಾಗ, ಅದನ್ನು ಕಣ್ತುಂಬಿಕೊಳ್ಳಲು ನೆರೆದಿದ್ದ ಸಹಸ್ರಾರು ಮಂದಿ ಸಾರ್ವಜನಿಕರು ಹರ್ಷೋದ್ಗಾರ ಮಾಡಿ ಸಂಭ್ರಮಿಸಿದರು. ಶ್ರೀಕಂಠನ ಆಗಮನವು ದಸರಾ ಆಚರಣೆಯ ವಾತಾವರಣಕ್ಕೆ ಮತ್ತಷ್ಟು ಹುರುಪು ನೀಡಿದೆ. ಚಾಮುಂಡಿ ಬೆಟ್ಟದಿಂದ ಹಿಡಿದು ಮೈಸೂರು ಅರಮನೆಯವರೆಗೂ ಆನೆಗಳ ತಾಲೀಮು ನಡೆಯುತ್ತಿದ್ದು, ಈಗಾಗಲೇ ದಸರಾ ಜಂಬೂಸವಾರಿಗೆ ಚಾಲನೆ ಸಿಕ್ಕಿದೆ. ಪ್ರಶಾಂತ ಆನೆಯು ಚಾಮುಂಡಿ ಹೊತ್ತು ಮುಂದೆ ಸಾಗಿದರೆ, ಹಿಂದೆಯಿಂದ ಉಳಿದ ಆನೆಗಳು ಬರುತ್ತದೆ.

ಜಂಬೂಸವಾರಿ ವೈಭವ ಕಣ್ತುಂಬಿಕೊಂಡ ತೆಲಂಗಾಣ, ಕೇರಳ ಮುಖ್ಯಮಂತ್ರಿಗಳು

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆದ ಐತಿಹಾಸಿಕ ಮೈಸೂರು ದಸರಾ 2026ರ ಸಂಭ್ರಮಕ್ಕೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮತ್ತು ಕೇರಳ ಮುಖ್ಯಮಂತ್ರಿ ಸತೀಶನ್ ಅವರು ಕೂಡ ಸಾಕ್ಷಿಯಾದರು. ಪ್ರಶಾಂತ ಆನೆಯ ಮೇಲೆ ಅಂಬಾರಿಯಲ್ಲಿ ವಿರಾಜಮಾನಳಾಗಿರುವ ಚಾಮುಂಡೇಶ್ವರಿಗೆ ಸಂಜೆ 4.28ರ ಶುಭ ಮೀನ ಲಗ್ನದಲ್ಲಿ ಕರ್ನಾಟಕ ಸಿಎಂ ಡಿಕೆ ಶಿವಕುಮಾರ್ ಪುಷ್ಪಾರ್ಚನೆಗೂದ ಬಳಿಕ, ನೆರೆ ರಾಜ್ಯಗಳ ಮುಖ್ಯಮಂತ್ರಿಗಳು ಸಹ ಚಾಮುಂಡೇಶ್ವರಿಗೆ ಹೂಮಳೆ ಗೈದಿದ್ದು ವಿಶೇಷವಾಗಿತ್ತು.

ಈ ಸಂದರ್ಭ ವೇದಿಕೆಯಲ್ಲಿ ಸಂಸದ ಮತ್ತು ರಾಜವಂಶಸ್ಥ ಯದುವೀರ್ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಯತೀಂದ್ರ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಮೈಸೂರು ಡಿಸಿ ಲಕ್ಷ್ಮೀಕಾಂತರೆಡ್ಡಿ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೇರದಂತೆ ಗಣ್ಯಾತಿ ಗಣ್ಯರು ಉಪಸ್ಥಿತರಿದ್ದರು.

ಅಂಬಾರಿ ಹೊತ್ತ ಆನೆಯ ರಂಪಾಟ

ಶಿವಮೊಗ್ಗ ನಗರದಲ್ಲಿ ದಸರಾ ಜಂಬೂಸವಾರಿ ವೇಳೆ 450 ಕೆಜಿ ಬೆಳ್ಳಿ ಅಂಬಾರಿಯನ್ನು ಹೊತ್ತಿದ್ದ ಸೋಮಣ್ಣ ಆನೆ ದಿಕ್ಕಾಪಾಲಾಗಿ ಓಡಿದೆ. ಇದರಿಂದ ಕಂಗಾಲಾದ ಜನ ಸ್ಥಳದಿಂದ ದಿಕ್ಕಾಪಾಲಾಗಿ ಓಡಿದ್ದಾರೆ. ನಗರದ ಶಿವಪ್ಪನಾಯಕ ಅರಮನೆಯಿಂದ ಜಂಬೂ ಸವಾರಿ ಆರಂಭವಾಗಿತ್ತು. ಸ್ವಲ್ಪ ದೂರ ಹೋಗುತ್ತಿದ್ದಂತೆ ಕೋಟೆ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಸೋಮಣ್ಣ ಆನೆ ಅಡ್ಡಾದಿಡ್ಡಿಯಾಗಿ ಓಡಿದೆ. ಆನೆಯ ಆರ್ಭಟಕ್ಕೆ ಕಾರುಗಳು ಜಖಂ ಆಗಿವೆ. ಅಂಬಾರಿ ಜಾರಿ ಬಿದ್ದ ಕಾರಣ ಅಂಬಾರಿಗೂ ಸಣ್ಣ ಪ್ರಮಾಣದ ಹಾನಿಯಾಗಿದೆ.

ಮೊದಲು ದಸರಾ ಅಂಬಾರಿ ಹೊರಲು ಸಾಗರ್ ಆನೆಗೆ ತರಬೇತಿ ನೀಡಲಾಗಿತ್ತು. ಆದರೆ ಕೊನೆಯ ಕ್ಷಣದಲ್ಲಿ ಸಾಗರ್ ಆನೆಗೆ ಕಾಲು ನೋವಿನ ಕಾರಣದಿಂದ ಸೋಮಣ್ಣ ಆನೆಗೆ ಮೊದಲ ಬಾರಿಗೆ ಅಂಬಾರಿ ಹೊರಿಸಲು ನಿರ್ಧರಿಸಲಾಗಿದೆ. ಇದರಿಂದ ಆನೆಗೆ ತಾಲೀಮು ಸರಿಯಾಗದ ಕಾರಣ ಈ ಅವಘಡ ನಡೆದಿದೆ ಎನ್ನಲಾಗಿದೆ. ಈ ಬಗ್ಗೆ ನಮ್ಮ ಪ್ರತಿನಿಧಿ ಮಾಹಿತಿ ನೀಡಿದ್ದಾರೆ.

ಮುಂದಿನ ವರ್ಷದಿಂದ ಹೊಸ ಮಾರ್ಗಸೂಚಿ

ಮೈಸೂರು ದಸರಾದಲ್ಲಿ ಆನೆಗಳಿಗೆ ತಿಂಗಳುಗಟ್ಟಲೆ ಕಠಿಣ ತಾಲೀಮು ನೀಡಿ ಸಜ್ಜುಗೊಳಿಸುವ ಮಾದರಿಯನ್ನೇ ಇನ್ಮುಂದೆ ಶಿವಮೊಗ್ಗ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದ ದಸರಾ ಉತ್ಸವಗಳಲ್ಲೂ ಕಡ್ಡಾಯವಾಗಿ ಜಾರಿಗೆ ತರಲು ಸಚಿವರು ಕಟ್ಟುನಿಟ್ಟಿನ ಸೂಚನೆ ಹೊರಡಿಸಿದ್ದಾರೆ. ಮುಂದಿನ ವರ್ಷದಿಂದ ಜಂಬೂಸವಾರಿ ಆರಂಭವಾಗುವ ಕನಿಷ್ಠ 20 ದಿನಗಳಿಂದ ಒಂದು ತಿಂಗಳ ಮುಂಚಿತವಾಗಿಯೇ, ನಿಯೋಜಿತ ಆನೆಗಳಿಗೆ ನುರಿತ ಮಾವುತರು ಮತ್ತು ಕಾವಾಡಿಗರ ಸಮ್ಮುಖದಲ್ಲಿ ನಿರಂತರ ತಾಲೀಮು ನಡೆಸಬೇಕು. ಭಾರೀ ಜನಸಂದಣಿ, ವಾದ್ಯಗಳ ಕರ್ಕಶ ಸದ್ದು, ಬ್ಯಾಂಡ್‌ಸೆಟ್, ಹೂಮಾಲೆಗಳ ಭಾರ ಹಾಗೂ ರಾತ್ರಿಯ ಬೆಳಕಿನ ಝುಗಮಗಿಸುವಿಕೆಗೆ ಆನೆಗಳು ಹೆದರದಂತೆ ನಗರದ ರಸ್ತೆಗಳಲ್ಲೇ ಮುಂಚಿತವಾಗಿ ತಾಲೀಮು ನಡೆಸಿ, ಆನೆಗಳನ್ನು ಮಾನಸಿಕವಾಗಿ ಸಿದ್ಧಗೊಳಿಸಬೇಕು. ಅಂಬಾರಿಯ ಭಾರವನ್ನು ಸುಲಭವಾಗಿ ಹೊರಲು ಸಾಧ್ಯವಾಗುವಂತೆ ಮರಳಿನ ಮೂಟೆಗಳನ್ನು ಆನೆಗಳ ಬೆನ್ನಿನ ಮೇಲೆ ಹೊರಿಸಿ ದಿನಂಪ್ರತಿ ನಡಿಗೆ ತಾಲೀಮು ಮಾಡಿಸಬೇಕು.

ಆನೆಗಳ ದೈಹಿಕ ಮತ್ತು ಮಾನಸಿಕ ಫಿಟ್‌ನೆಸ್ ಪರೀಕ್ಷೆ ಕಡ್ಡಾಯ

ಆನೆಗಳು ಕಾಡು ಪ್ರಾಣಿಗಳಾಗಿದ್ದು, ಅವುಗಳ ನಡವಳಿಕೆಯನ್ನು ಸಂಪೂರ್ಣವಾಗಿ ಊಹಿಸಲು ಸಾಧ್ಯವಿಲ್ಲ. ಹೀಗಾಗಿ, ಪ್ರತಿಯೊಂದು ಆನೆಯ ಆರೋಗ್ಯ ಸ್ಥಿತಿ ಅತ್ಯಂತ ಪ್ರಮುಖವಾಗಿದೆ ಎಂದು ಸಚಿವರು ಹೇಳಿದರು. ಮೆರವಣಿಗೆಗೆ ಆಯ್ಕೆ ಮಾಡುವ ಮುನ್ನ ಗಂಡಾನೆಗಳಲ್ಲಿ ಮದದ ಲಕ್ಷಣಗಳಿವೆಯೇ ಅಥವಾ ಇತ್ತೀಚೆಗಷ್ಟೇ ಮದದಿಂದ ಹೊರಬಂದಿವೆಯೇ ಎಂಬುದನ್ನು ಮುಖ್ಯ ಪಶುವೈದ್ಯಾಧಿಕಾರಿಗಳಿಂದ ಕಡ್ಡಾಯವಾಗಿ ಪ್ರಮಾಣೀಕರಿಸಬೇಕು. ಆನೆಯ ರಕ್ತ ಪರೀಕ್ಷೆ, ಕಾಲಿ ಉಗುರುಗಳ ಆರೋಗ್ಯ, ಜೀರ್ಣಕ್ರಿಯೆ ಹಾಗೂ ನಿರ್ಜಲೀಕರಣದ ಸಮಸ್ಯೆಗಳಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಮೆರವಣಿಗೆಯ ಒತ್ತಡವನ್ನು ತಡೆದುಕೊಳ್ಳುವ ಮಾನಸಿಕ ಧೈರ್ಯ ಹೊಂದಿರುವ ಆನೆಗಳನ್ನು ಮಾತ್ರವೇ ಅಂಬಾರಿ ಹೊರಲು ಆಯ್ಕೆ ಮಾಡಬೇಕು. ಕೇವಲ ಬಲಶಾಲಿಯಾಗಿದ್ದರೆ ಸಾಲದು, ಆನೆಯು ಜನಸ್ನೇಹಿಯಾಗಿರಬೇಕು ಎಂದು ನಿರ್ದೇಶಿಸಿದರು. ದಸರಾ ಜಂಬೂಸವಾರಿ ಎಂಬುದು ಕೇವಲ ಸರ್ಕಾರದ ವಾರ್ಷಿಕ ಉತ್ಸವವಲ್ಲ. ಅದು ಕೋಟ್ಯಂತರ ಕನ್ನಡಿಗರ ಭಕ್ತಿ, ಸಂಪ್ರದಾಯ ಮತ್ತು ಧಾರ್ಮಿಕ ನಂಬಿಕೆಗಳ ಪ್ರತೀಕ. ಇಂತಹ ಪವಿತ್ರ ಮೆರವಣಿಗೆಯಲ್ಲಿ ಆನೆಗಳು ಬೆದರಿ ಓಡುವುದು ಅಂಬಾರಿ ಅಲುಗಾಡುವುದು ಅಥವಾ ಮೆರವಣಿಗೆ ಅರ್ಧಕ್ಕೆ ನಿಲ್ಲುವುದು ಸಾರ್ವಜನಿಕರಲ್ಲಿ ತೀವ್ರ ಆತಂಕ ಉಂಟುಮಾಡುತ್ತದೆ.

ಈ ದಿನದ ದರ ಪೆಟ್ರೋಲ್: 111.68 ₹/L | ಡೀಸೆಲ್ : 99.56 ₹/L | ಬಂಗಾರ: ₹14,608/Gram24ct ₹13,390/Gram22ct | ಬೆಳ್ಳಿ: ₹235.00/Gram

ತಪಾಸಣೆ ಬಾಕಿ ತೆರವಿಗೆ ಖಾಸಗಿ ಏಜೆನ್ಸಿಗಳ ಬಳಕೆ! ಮಹತ್ವದ ಕ್ರಮ

• **ಉದಯವಾಹಿನಿ, ಬೆಂಗಳೂರು:**

ವಿವಿಧ ಸರ್ಕಾರಿ ಇಲಾಖೆಗಳಲ್ಲಿ ತಪಾಸಣಾ ಸಿಬ್ಬಂದಿ ಕೊರತೆಯಿಂದಾಗಿ ಬಾಕಿ ಉಳಿದಿರುವ ಪರಿಶೀಲನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕರ್ನಾಟಕ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದೆ. ಇನ್ಮುಂದೆ ಅಗತ್ಯವಿರುವ ಇಲಾಖೆಗಳು ಅಧಿಕೃತ ಅನುಮತಿ ಪಡೆದ ಖಾಸಗಿ ಮೂರನೇ ವ್ಯಕ್ತಿ ಏಜೆನ್ಸಿಗಳ ನೆರವು ಪಡೆದು ನಿಗದಿತ ತಪಾಸಣೆ, ಲೆಕ್ಕಪರಿಶೋಧನೆ ಮತ್ತು ಪ್ರಮಾಣೀಕರಣ ಕಾರ್ಯಗಳನ್ನು ಕೈಗೊಳ್ಳುವಂತೆ ಸರ್ಕಾರ ನಿರ್ದೇಶನ ನೀಡಿದೆ.

ಉದಯವಾಹಿನಿ ಚಿತ್ರ

ಕ್ಷೇತ್ರಮಟ್ಟದಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ನಿಯಮಿತ ತಪಾಸಣೆಗಳು ಬಾಕಿ ಉಳಿದಿರುವ ಇಲಾಖೆಗಳಲ್ಲಿ ಮೊದಲ ಹಂತದಲ್ಲಿ ಈ ವ್ಯವಸ್ಥೆ ಜಾರಿಗೊಳ್ಳಲಿದೆ. ಈ ಕುರಿತು ಬುಧವಾರ (ಅ.21) ಸರ್ಕಾರದ ಅಧಿಕೃತ ಪ್ರಕಟಣೆ ಹೊರಡಿಸಲಾಗಿದೆ.ಕಾನೂನು ಮಾಪನಶಾಸ್ತ್ರ ಇಲಾಖೆ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಹಾಗೂ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆಗಳು ಈ ಕ್ರಮದ ವ್ಯಾಪ್ತಿಗೆ ಬರಲಿವೆ.

ಕಾನೂನು ಮಾಪನಶಾಸ್ತ್ರ ಇಲಾಖೆ: ತೂಕದ ಯಂತ್ರಗಳು ಮತ್ತು ಅಳತೆ ಉಪಕರಣಗಳ ವಾರ್ಷಿಕ ಪರಿಶೀಲನೆ ಹಾಗೂ ಮುದ್ರೆ ಹಾಕುವ ಕಾರ್ಯ.

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ: ಆಹಾರ ವಹಿವಾಟು ಕೇಂದ್ರಗಳು, ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ವೈದ್ಯಕೀಯ ಮಳಿಗೆಗಳು ಮತ್ತು ಔಷಧ ಅಂಗಡಿಗಳ ತಪಾಸಣೆ.**ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆ:** ಕೈಗಾರಿಕಾ ಬಾಯ್ಲರ್‌ಗಳ ಸುರಕ್ಷತಾ ಪರಿಶೀಲನೆ ಹಾಗೂ ವಾರ್ಷಿಕ ಪ್ರಮಾಣೀಕರಣ. ಈ ಇಲಾಖೆಗಳಲ್ಲಿನ ಸಿಬ್ಬಂದಿ ಕೊರತೆಯಿಂದಾಗಿ ತಪಾಸಣೆಗಳು ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಖಾಸಗಿ ಏಜೆನ್ಸಿಗಳ ನೆರವು ಪಡೆಯಲು ಸರ್ಕಾರ ಮುಂದಾಗಿದೆ.

ಲೋಕಭವನದ ಬಾಗಿಲು ಸಾರ್ವಜನಿಕರಿಗೆ ಮುಕ್ತವಾಗಿರಿಸಿ

• **ಉದಯವಾಹಿನಿ, ಬೆಂಗಳೂರು:**

ಉದಯವಾಹಿನಿ ಚಿತ್ರ

ರಾಜ್ಯದ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು, ಸಾಮಾಜಿಕ ಸಂಸ್ಥೆಗಳು ಮತ್ತು ನಾಗರಿಕರಿಗೆ ಸಂಘಟಿತ ಭೇಟಿಗಳ ಮೂಲಕ ಲೋಕಭವನವನ್ನು ಸಾರ್ವಜನಿಕರಿಗೆ ತೆರೆಯುವಂತೆ ಮಾಜಿ ವಿಧಾನ ಪರಿಷತ್ ಸದಸ್ಯ ರಮೇಶ್ ಬಾಬು ಅವರು ಕರ್ನಾಟಕ ರಾಜ್ಯಪಾಲ ಡಾ. ಸುಧಾ ಯಾದವ್ ಅವರನ್ನು ಒತ್ತಾಯಿಸಿದ್ದಾರೆ. ರಾಜ್ಯಪಾಲರಿಗೆ ಬರೆದ ಪತ್ರದಲ್ಲಿ, ಈ ಕ್ರಮದಿಂದ ಸಾಂವಿಧಾನಿಕ ಜಾಗೃತಿಯನ್ನು ಉತ್ತೇಜಿಸುತ್ತದೆ, ಯುವ ಪೀಳಿಗೆಗೆ ಪ್ರಜಾಪ್ರಭುತ್ವ ಸಂಸ್ಥೆಗಳೊಂದಿಗೆ ಪರಿಚಿತರಾಗುವಂತೆ ಮಾಡುತ್ತದೆ. ಸಾರ್ವಜನಿಕ ಸಂಸ್ಥೆಗಳು ಮತ್ತು ನಾಗರಿಕರ ನಡುವಿನ ಸಂಪರ್ಕವನ್ನು ಬಲಪಡಿಸುತ್ತದೆ ಎಂದು ಬಾಬು ಹೇಳಿದ್ದಾರೆ. ಕರ್ನಾಟಕದ ಮಾಜಿ ರಾಜ್ಯಪಾಲೆ ವಿ.ಎಸ್. ರಮಾದೇವಿ ನಡೆಸಿಕೊಂಡು ಬಂದಿದ್ದ ಕ್ರಮವನ್ನು ನೆನಪಿಸಿಕೊಳ್ಳುತ್ತಾ, ಈಗ ಲೋಕಭವನ ಎಂದು ಕರೆಯಲ್ಪಡುವ ರಾಜಭವನವನ್ನು ಸಾರ್ವಜನಿಕರಿಗೆ ಪ್ರವೇಶಿಸುವಂತೆ ಮಾಡಲು ಅವರು ಕ್ರಮವನ್ನು ತೆಗೆದುಕೊಂಡಿದ್ದರು ಎಂದು ರಮೇಶ್ ಬಾಬು ಹೇಳಿದರು. ರಾಜಭವನ (ಲೋಕಭವನ) ಕೇವಲ ರಾಜ್ಯಪಾಲರ ಅಧಿಕೃತ ನಿವಾಸವಲ್ಲ, ಇದು ರಾಜ್ಯದ ಪ್ರಜಾಪ್ರಭುತ್ವ ಜೀವನಕ್ಕೆ ಸೇರಿದ ಒಂದು ಪ್ರಮುಖ ಸಾರ್ವಜನಿಕ ಮತ್ತು ಸಾಂವಿಧಾನಿಕ ಸಂಸ್ಥೆಯಾಗಿದೆ ಎಂದು ಅವರು ಹೇಳಿದರು. ಇಂತಹ ಕ್ರಮವು ಸಾಂವಿಧಾನಿಕ ಅರಿವನ್ನು ಉತ್ತೇಜಿಸುತ್ತದೆ, ಪ್ರಜಾಪ್ರಭುತ್ವ ಸಂಸ್ಥೆಗಳ ಬಗ್ಗೆ ಯುವ ಪೀಳಿಗೆಗೆ ಶಿಕ್ಷಣ ನೀಡುತ್ತದೆ ಮತ್ತು ಸಾರ್ವಜನಿಕ ಸಂಸ್ಥೆಗಳು ತಾವು ಸೇವೆ ಸಲ್ಲಿಸುವ ಜನರೊಂದಿಗೆ ಸಂಪರ್ಕದಲ್ಲಿರಬೇಕು ಎಂಬ ಪ್ರಬಲ ಸಂದೇಶವನ್ನು ನೀಡುತ್ತದೆ ಎಂದು ಅವರು ಹೇಳಿದರು.

ವಿಧಾನಸೌಧವನ್ನೇ ಸ್ಫೋಟಿಸಿದೆ ಎಂದ ಕಿಡಿಗೇಡಿ

• **ಉದಯವಾಹಿನಿ, ಬೆಂಗಳೂರು:**

ಕರ್ನಾಟಕದ ಶಕ್ತಿಕೇಂದ್ರ, ವಿಧಾನಸೌಧಕ್ಕೆ ಬಾಂಬ್ ಇಟ್ಟು ಉಡಾಯಿಸಿದಂತೆ ಎಐ ಬಳಸಿ ಎಡಿಟ್ ಮಾಡಿದ ವಿಡಿಯೊವೊಂದು ಇನ್‌ಸ್ಟಾಗ್ರಾಮ್‌ನಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. Jnx king Hg ಎಂಬ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಕಿಡಿಗೇಡಿಯೊಬ್ಬ ಈ ವೀಡಿಯೊವನ್ನು ಅಪ್‌ಲೋಡ್ ಮಾಡಿದ್ದಾನೆ. ವಿಧಾನಸೌಧದ ಮುಂದೆ ನಿಂತ ವಿಡಿಯೋ ಶೂಟ್ ಮಾಡಿಕೊಂಡಿದ್ದು ಅದನ್ನು ಎಐ ತಂತ್ರಜ್ಞಾನ ಬಳಸಿ ಬಾಂಬ್ ಬ್ಲಾಸ್ಟ್ ಮಾಡಿದಂತೆ ಎಡಿಟ್ ಮಾಡಿ ವಿಡಿಯೋ ಪೋಸ್ಟ್ ಮಾಡಿದ್ದಾನೆ. ಅಲ್ಲದೆ ವಿಧಾನಸೌಧವನ್ನು ಬಾಂಬ್‌ನಿಂದ ಉಡಾಯಿಸಿದ್ದಾಗಿ ಬರೆದುಕೊಂಡಿದ್ದಾನೆ.

ಈ ವಿಡಿಯೋ ವಿರುದ್ಧ ನೆಟ್ಟಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿಧಾನಸೌಧಕ್ಕೆ ಈ ರೀತಿ ಬೆದರಿಕೆ ಒಡ್ಡುವ ವಿಡಿಯೋ ಪ್ರಸಾರ ಮಾಡಿರುವ ಯುವಕನ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬೆಂಗಳೂರಿಗೆ ಬರುತ್ತಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಕ್ಕೆ ಹಕ್ಕಿ ಡಿಕ್ಕಿ!

• **ಉದಯವಾಹಿನಿ, ಬೆಂಗಳೂರು:**

ವಿಶಾಖಪಟ್ಟಣಂನಿಂದ ಬೆಂಗಳೂರಿಗೆ ಬರುತ್ತಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಕ್ಕೆ ಹಕ್ಕಿ ಡಿಕ್ಕಿ ಹೊಡೆದಿದೆ. ಪರಿಣಾಮ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಲ್ಯಾಂಡಿಂಗ್ ಮಾಡಿದೆ. ವಿಮಾನದಲ್ಲಿದ್ದ ಎಲ್ಲಾ 148 ಪ್ರಯಾಣಿಕರು ಯಾವುದೇ ಗಾಯಗಳಾಗದೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಘಟನೆಯ ಹೊರತಾಗಿಯೂ ವಿಮಾನ ತನ್ನ ಪ್ರಯಾಣವನ್ನು ಪೂರ್ಣಗೊಳಿಸಿದ್ದು, ಲ್ಯಾಂಡಿಂಗ್ ನಂತರ ಪಾರ್ಕಿಂಗ್ ಸ್ಟ್ಯಾಂಡ್‌ಗೆ ಸ್ಥಳಾಂತರಿಸಲಾಯಿತು.

ಪ್ರಮಾಣಿತ ಸುರಕ್ಷತಾ ಕಾರ್ಯವಿಧಾನಗಳನ್ನು ಅನುಸರಿಸಿ, ವಿಮಾನ ನಿಲ್ದಾಣದಲ್ಲಿದ್ದ ಇಂಜಿನಿಯರ್‌ಗಳು ಮತ್ತು ತಾಂತ್ರಿಕ ತಂಡಗಳು ವಿಮಾನ ಅಥವಾ ಎಂಜಿನ್‌ಗಳಿಗೆ ಯಾವುದೇ ಸಂಭಾವ್ಯ ಹಾನಿಯಾಗದಂತೆ ಕ್ರಮ ವಹಿಸಿದ್ದಾರೆ. ಪ್ರಯಾಣಿಕರು ಅಥವಾ ಸಿಬ್ಬಂದಿಗೆ ಯಾವುದೇ ಗಾಯಗಳಾಗಿಲ್ಲ ಎಂದು ವರದಿಯಾಗಿದೆ.

ಶನಿವಾರ ಕೂಡಾ ಇಂತಹುದೇ ಘಟನೆ ನಡೆದಿತ್ತು. ದುಬೈನಿಂದ ಹೊರಟ ಎಮಿರೇಟ್ಸ್ ವಿಮಾನ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುವಾಗ ಹಕ್ಕಿ ಡಿಕ್ಕಿ ಹೊಡೆದ ಬಳಿಕ ವಿಳಂಬವಾಗಿತ್ತು. ಮಧ್ಯಾಹ್ನ 3.10 ರ ಸುಮಾರಿಗೆ ಟರ್ಮಿನಲ್ 3 ಬಳಿ ರನ್‌ವೇಯಲ್ಲಿ ಲ್ಯಾಂಡಿಂಗ್ ಮಾಡುವಾಗ ಈ ಘಟನೆ ನಡೆದಿತ್ತು.

ಹೆಚ್‌ಡಿಕೆ ಪದ ಬಳಕೆ ಘನತೆಯಲ್ಲ

• **ಉದಯವಾಹಿನಿ, ಬೆಂಗಳೂರು,**

ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿಯವರು ಇತ್ತೀಚಿನ ದಿನಗಳಲ್ಲಿ ಬಳಸುತ್ತಿರುವ ಅಸಂಬದ್ಧ ಹಾಗೂ ಅಸಂಸದೀಯ ಪದಪ್ರಯೋಗಗಳು ಅವರ ವ್ಯಕ್ತಿತ್ವಕ್ಕೆ ಮತ್ತು ಅವರು ಹೊಂದಿರುವ ಸಾಂವಿಧಾನಿಕ ಹುದ್ದೆಯ ಘನತೆಗೆ ಶೋಭೆ ತರುವುದಿಲ್ಲ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ತಿಳಿಸಿದ್ದಾರೆ.

ಭ್ರಷ್ಟಾಚಾರ ಮತ್ತು ಸ್ಟಿಂಗ್ ಆಪರೇಷನ್ ಕುರಿತು ನಿರಂತರವಾಗಿ ಆರೋಪಗಳನ್ನು ಮಾಡುತ್ತಿರುವ ಕುಮಾರಸ್ವಾಮಿಯವರು, ತಮ್ಮ ಆರೋಪಗಳಿಗೆ ಸಂಬಂಧಿಸಿದಂತೆ ನಿಖರವಾದ ದಾಖಲೆಗಳು ಹಾಗೂ ಸಾಕ್ಷ್ಯಾಧಾರಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬೇಕು. ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಹೋರಾಟ ನಡೆಸಲಿ.

ಅದನ್ನು ಬಿಟ್ಟು, ರಾಜಕೀಯ ಲಾಭಕ್ಕಾಗಿ ಆರೋಪಗಳನ್ನು ಮಾಡುತ್ತಾ, ಬಿಜೆಪಿ ಜೊತೆ ಕೈಜೋಡಿಸಿರುವುದು ಮತ್ತು ತಮ್ಮ ರಾಜಕೀಯ ನಿಲುವುಗಳನ್ನು ಸಮರ್ಥಿಸಿಕೊಳ್ಳಲು ಕೆಳಮಟ್ಟದ ರಾಜಕಾರಣ ನಡೆಸುತ್ತಿರುವುದು ಸರಿಯಲ್ಲ ಎಂದು ಅವರು ಹೇಳಿದ್ದಾರೆ. ನಗರದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸ್ಟಿಂಗ್ ಆಪರೇಷನ್ ಬಗ್ಗೆ ಪ್ರಶ್ನಿಸುವ ಕುಮಾರಸ್ವಾಮಿಯವರು ಮೊದಲು ತಮ್ಮ ಆರೋಪಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಬಹಿರಂಗಪಡಿಸಲಿ. ಆರೋಪ ಮಾಡುವುದು ಸುಲಭ ಆದರೆ ಆರೋಪಗಳಿಗೆ ಸಾಕ್ಷ್ಯ ಒದಗಿಸಿ, ಸತ್ಯಾಂಶವನ್ನು ಜನತೆಯ ಮುಂದೆ ಇಡುವುದು ಜವಾಬ್ದಾರಿಯುತ ರಾಜಕಾರಣಿಯ ಕರ್ತವ್ಯವಾಗಿದೆ.

ರೈತರಿಗೆ ಮೊದಲು SDRFD ಪರಿಹಾರ ನೀಡಿ: ಛಲವಾದಿ ನಾರಾಯಣಸ್ವಾಮಿ

• **ಉದಯವಾಹಿನಿ, ಬೆಂಗಳೂರು:**

ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಕೇವಲ 2,500 ರೂ. ಪರಿಹಾರ ಧನ ಘೋಷಿಸಿದ ಸರ್ಕಾರವು ಒಂದು ರೂಪಾಯಿಯನ್ನೂ ಅವರ ಖಾತೆಗೆ ಹಾಕದೇ ಇರುವುದು ರಾಜಕೀಯವೇ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಪ್ರಶ್ನಿಸಿದ್ದಾರೆ. ನಗರದಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾವು ಒಂದು ಹೆಕ್ಟೇರ್‌ಗೆ 25 ಸಾವಿರ ಕೊಡಬೇಕೆಂದು ಬೇಡಿಕೆ ಇಟ್ಟರೆ ಅದು ರಾಜಕೀಯವೇ ಎಂದು ಕೇಳಿದ್ದರು. ಮೊದಲು 25 ಸಾವಿರ ರೂಪಾಯಿ ಪರಿಹಾರ ಘೋಷಿಸಿ ಬಳಿಕ ಕೇಂದ್ರದ ಬಳಿ ಹೋಗೋಣ. ಈ ಪರಿಹಾರ ಮೊದಲು ಕೊಡಲಿ ಬಳಿಕ ಈ ಹಣ ಕೇಳೋಣ ಎಂದರು.

ಭಿಕ್ಷಾಪಾತ್ರೆ ಹಿಡಿದು ನಿಂತಿದ್ದಾರೆ: ನಿಯೋಗದಲ್ಲಿ ಹೋಗುವುದಿಲ್ಲ ಎಂದು ನಾವು ಹೇಳಿಲ್ಲ ಒಂದು ರೂಪಾಯಿಯೂ ಕೊಟ್ಟಿಲ್ಲ ಸರ್ಕಾರ ದಿವಾಳಿ ಆಗಿದೆಯೇ ಎಂದು ಪ್ರಶ್ನಿಸಿದ ಛಲವಾದಿ, ಶ್ರೀಮಂತಿಕೆ ಮೆರೆಯುವ ರೀತಿಯಲ್ಲಿ ಮಾತನಾಡುತ್ತಾರೆ. ಇಲ್ಲಿ ಭಿಕ್ಷೆ ಪಾತ್ರೆ ಹಿಡಿದು ನಿಂತಿರುವುದು; ಕಾಂಗ್ರೆಸ್ ಬಂಡವಾಳ ನಮಗೆ ಗೊತ್ತಿದೆ ಎಂದು ಟೀಕಿಸಿದರು.ಭಿಕ್ಷೆಯಾದರೂ ಎತ್ತಿ ಆದರೆ ರೈತರ ಸಮಸ್ಯೆಗೆ ಸ್ಪಂದಿಸಿ ಎಂದು ಇದೇ ವೇಳೆ ಛಲವಾದಿ ಆಗ್ರಹಿಸಿದರು.ಕಬ್ಬು ಬೆಳೆಗಾರರ ವಿಚಾರದಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿಯವರು ಕೂಡಲೇ ಸ್ಪಂದಿಸಿ ಸಭೆ, ಮಾತುಕತೆ ನಡೆಸಿದ್ದಾರೆ. ಹೋರಾಟವೂ ಸ್ಥಗಿತವಾಗಿದೆ. ನಿಮ್ಮದು ಕೇವಲ ಹೇಳಿಕೆ ಮತ್ತು ಪತ್ರ ಮಾತ್ರ ಎಂದು ದೂರಿದರು. ನಾಟಕ ಮಾಡುವ ಸರ್ಕಾರ ಆಗಬಾರದು ರೈತರ ಆತ್ಮಹತ್ಯೆ ತಡೆಯಲು 10 ಸಾವಿರ ರೂಪಾಯಿ ಕೊಡಿ. ಅವರಿಗೆ ಒಂದು ರೂಪಾಯಿ ಕೊಡುತ್ತಿಲ್ಲ. ಈ ಸರ್ಕಾರ ನಾಟಕ ಮಾಡುವ ಸರ್ಕಾರ ಆಗಬಾರದು. ಸಮಸ್ಯೆ ಪರಿಹರಿಸುವ ಸರ್ಕಾರ ಆಗಬೇಕು ಎಂದು ಒತ್ತಾಯಿಸಿದರು. ಅವರು ನಿಷ್ಪಕ್ಷಪಾತವಾಗಿ ಇದ್ದಾರಾ? ಸ್ಟಿಂಗ್ ವಿಚಾರದಲ್ಲಿ ಗೃಹ ಸಚಿವರು ಕೇವಲ ಮಾತನಾಡಿದರೆ ಸಾಲದು. ಯಾರನ್ನು ರಕ್ಷಿಸಲು ಹೋಗಿದ್ದಾರೆ ಅವರು ಎಂದು ಪ್ರಶ್ನಿಸಿದರು. ಗೃಹ ಸಚಿವ ಸ್ಥಾನ ಇಟ್ಟುಕೊಂಡವರು ಬಹಳ ಶ್ರದ್ಧೆಯಿಂದ, ನಿಷ್ಪಕ್ಷಪಾತದಿಂದ ನಡೆದುಕೊಳ್ಳಬೇಕು ಎಂದರು ನಾರಾಯಣಸ್ವಾಮಿ.

ಎಲ್ಲರೂ ಒಟ್ಟಾಗಿ ಸೇರಿ ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಬೇಕು

ಕಾರ್ಖಾನೆಗಳು ಸಹ ನಷ್ಟವಾಗದಂತೆ ಕಬ್ಬನ್ನು ಅರೆಯಬೇಕಿದೆ. ಆಗ ಇಬ್ಬರೂ ಉಳಿಯುತ್ತಾರೆ. ಇದು ಎಲ್ಲರ ಬದುಕಿನ ಪ್ರಶ್ನೆ.

• **ಉದಯವಾಹಿನಿ, ಬೆಂಗಳೂರು:**

ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಎಲ್ಲರೂ ಒಟ್ಟಾಗಿ ಸೇರಿ ಬಗೆಹರಿಸಬೇಕು. ಇದು ಯಾರದೋ ಒಬ್ಬರ ಜವಾಬ್ದಾರಿಯಲ್ಲ. ಇದು ಎಲ್ಲರ ಜವಾಬ್ದಾರಿ. ನಾನು ಒಬ್ಬರ ಮೇಲೆಯೇ ಹೊರೆ ಹಾಕಲು ಇಷ್ಟಪಡುವುದಿಲ್ಲ ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಹೇಳಿದರು.

ಸದಾಶಿವನಗರದ ನಿವಾಸದ ಬಳಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ರೈತರು ಕಬ್ಬು ಬೆಳೆದರೆ ಕಾರ್ಖಾನೆ ಇರಲಿದೆ.

1 : ಕೇಂದ್ರ ಸರ್ಕಾರದ ಬಳಿ ಸಮಯ ಕೇಳಿದ್ದೇನೆ
2 : ರೈತರ ಬಳಿಯು ಪ್ರತ್ಯೇಕವಾಗಿ ಮಾತಾಡಬೇಕಿದೆ
3 : ತಮ್ಮ ಕೈಲಾದಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ

ಉದಯವಾಹಿನಿ ಚಿತ್ರ

ಕಾರ್ಖಾನೆಗಳು ಸಹ ನಷ್ಟವಾಗದಂತೆ ಕಬ್ಬನ್ನು ಅರೆಯಬೇಕಿದೆ. ಆಗ ಇಬ್ಬರೂ ಉಳಿಯುತ್ತಾರೆ. ಇದು ಎಲ್ಲರ ಬದುಕಿನ ಪ್ರಶ್ನೆ. ರೈತರ, ಸಕ್ಕರೆ ಕಾರ್ಖಾನೆಗಳ, ಸರ್ಕಾರದ ಸಮಸ್ಯೆಗಳು ಏನಿವೆ ಎಂದು ನಾವು ಒಟ್ಟಾಗಿ ಚರ್ಚಿಸಬೇಕಿದೆ ಎಂದರು.

ಬರ ಪರಿಹಾರ ವಿಚಾರವಾಗಿ ಚರ್ಚಿಸಲು ಕೇಂದ್ರ ಸರ್ಕಾರದ ಬಳಿ ಸಮಯ ಕೇಳಿದ್ದೇನೆ. ಆದರೆ ಇನ್ನೂ ಸಮಯ ನಿಗದಿಯಾಗಿಲ್ಲ. ಜನಪ್ರತಿನಿಧಿಗಳಿಗೆ ಕಬ್ಬು ಬೆಳೆಗಾರರ ಸಮಸ್ಯೆಗಳ ಚರ್ಚೆಯ ವಿಚಾರ ತಿಳಿಸಿದ್ದೇನೆ. ಸಕ್ಕರೆ ಕಾರ್ಖಾನೆಗಳ ಮಾಲೀಕರು, ರೈತರ ಬಳಿಯು ಪ್ರತ್ಯೇಕವಾಗಿ ಮಾತಾಡಬೇಕಿದೆ. ಕೇಂದ್ರ ಮಂತ್ರಿಗಳ ಬಳಿಯೂ ಮಾತನಾಡುತ್ತೇನೆ. ಅವರೂ ಸಹ ತಮ್ಮ ಕೈಲಾದಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ. ಈ ಸಮಸ್ಯೆಯನ್ನು ಶಾಂತಿ ಹಾಗೂ ಸೌಹಾರ್ದತೆಯಿಂದ ಬಗೆಹರಿಸಬೇಕಿದೆ ಎಂದು ಹೇಳಿದರು.

> ಸಭೆ ನಡೆಸಲು ಎಲ್ಲರ ಅನುಕೂಲಗಳಿಗೆ ಹೊಂದಿಕೆಯಾಗುವ ದಿನಾಂಕವನ್ನು ನಿಗದಿ ಮಾಡಲಾಗುವುದು. ಬೆಳಗಾವಿಯಲ್ಲಿ ರೈತರಿಗೆ ಮಾತು ಕೊಟ್ಟು ಬಂದಿದ್ದೇನೆ. ಕೇಂದ್ರ ಸಚಿವರು, ಸಂಸದರು ಆ ಭಾಗದ ಮಂತ್ರಿಗಳಿಗೆ ಆಹ್ವಾನಿಸಲಾಗುವುದು ಎಂದು ಹೇಳಿದರು.
> - ಸಿಎಂ ಡಿ ಕೆ ಶಿವಕುಮಾರ್

ರೈತರು ಕಬ್ಬು ಬೆಳೆದರೆ ಕಾರ್ಖಾನೆ ಇರಲಿದೆ

ಸಚಿವರೊಂದಿಗೆ ಸೋಮವಾರ ಸಭೆ ನಡೆಸಿದ ವಿಚಾರದ ಬಗ್ಗೆ ಕೇಳಿದಾಗ, ಸ್ಥಳೀಯ ಸಂಸ್ಥೆ ಚುನಾವಣೆ ಇದೆ. ಚುನಾವಣಾ ಆಯೋಗದವರು 27 ರಂದು ಸಹ ಹೊಸ ಮತದಾರರ ಪಟ್ಟಿ ನೀಡುತ್ತಾರೆ. ಡಿ. 31ರೊಳಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಬಗ್ಗೆ ಸುಪ್ರೀಂಕೋರ್ಟ್‌ನ ಸುಪ್ರೀಂ ಕೋರ್ಟ್ ನಿರ್ದೇಶನವಿದೆ.

ನಗರದಲ್ಲಿ ಸಿದ್ದತೆ ಮಾಡಿಕೊಳ್ಳಬೇಕಲ್ಲವೇ?

ಬೆಂಗಳೂರು ನಗರದಲ್ಲಿ ಸಿದ್ಧತೆ ಮಾಡಿಕೊಳ್ಳಬೇಕಲ್ಲವೇ? ಚುನಾವಣಾ ಆಯೋಗ ಯಾವಾಗ ಬೇಕಾದರೂ ಚುನಾವಣೆ ಘೋಷಣೆ ಮಾಡಬಹುದು. ಹೀಗಾಗಿ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಸಚಿವರಿಗೆ ಹೇಳಿದ್ದೇನೆ ಎಂದರು.

ಪಂಚಾಯತ್ ಮಟ್ಟದಲ್ಲಿ ರಸ್ತೆ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಹಣ ಕೊಡಬೇಕೆಂದು ಮಂಗಳೂರಿನಲ್ಲಿ ನಡೆದ ಕ್ಯಾಬಿನೆಟ್ ವೇಳೆ ತೀರ್ಮಾನವಾಗಿತ್ತು. ಹೀಗಾಗಿ ಶಾಸಕರಿಗೆ ಅನುದಾನಕ್ಕೆ ವರದಿ ಸಲ್ಲಿಸಲು ಹೇಳಿದ್ದೇನೆ ಹಾಗೂ ಕರೆ ಮಾಡಿ ಹಬ್ಬಕ್ಕೆ ಶುಭಕೋರಿದ್ದೇನೆ. ಅನುದಾನ ವಿಚಾರ ಬೆಂಗಳೂರು ಶಾಸಕರನ್ನ ಕರೆದು ಮಾತಾಡಿದ್ದೇನೆ ಎಂದರು. ರಾಜ್ಯದ ಸಮಸ್ತ ಜನತೆಗೂ ಆಯುಧ ಪೂಜೆಯ ಶುಭಾಶಯಗಳು. ನಾಡಿನ ಜನರಿಗೆ ಒಳಿತಾಗಲಿ. ರೈತ, ಕಾರ್ಮಿಕ, ಶ್ರಮಿಕ ವರ್ಗಗಳ ಪರಿಕರಗಳಿಗೆ ಪೂಜೆ ಸಲ್ಲಿಸಲಾಗಿದೆ. ಸರ್ಕಾರಿ, ಖಾಸಗಿ ವಾಹನಗಳಿಗೆ ಪೂಜೆ ಸಲ್ಲಿಸಲಾಗಿದೆ. ಎಲ್ಲರ ಪ್ರಯಾಣ ಸುಖಕರವಾಗಿ, ಸುರಕ್ಷಿತವಾಗಿರಲಿ ಎಂದು ಚಾಮುಂಡಿಯ ಆಶೀರ್ವಾದ ಅನುಗ್ರಹ ದೊರೆಯಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಭಕ್ತಿಭಾವದಲ್ಲಿ ಮಿಂದೆದ್ದ ಶ್ರೀನಿವಾಸ ಕಲ್ಯಾಣೋತ್ಸವ

• **ಉದಯವಾಹಿನಿ, ಬೆಂಗಳೂರು:**

ವಿಜಯದಶಮಿಯ ಶುಭ ಸಂದರ್ಭದಲ್ಲಿ ಶ್ರೀನಿವಾಸ ಉತ್ಸವ ಬಳಗದ ವತಿಯಿಂದ ಚಿಕ್ಕಲಸಂದ್ರದ ಬೃಂದಾವನ ಗೋಶಾಲೆಯಲ್ಲಿ ಶ್ರೀನಿವಾಸ ಕಲ್ಯಾಣೋತ್ಸವವನ್ನು ಭಕ್ತಿಭಾವದಿಂದ ಆಯೋಜಿಸಲಾಗಿತ್ತು. ಶ್ರೀನಿವಾಸ ಸ್ವಾಮಿಯ ದಿವ್ಯಾನುಗ್ರಹದೊಂದಿಗೆ ನಡೆದ ಈ ಕಾರ್ಯಕ್ರಮದಲ್ಲಿ ವೇದಮಂತ್ರಗಳ ಪಠಣ, ದಾಸಸಾಹಿತ್ಯದ ಗಾಯನ ಹಾಗೂ ಭಕ್ತಿಪೂರ್ಣ ನಿರೂಪಣೆಯ ಮೂಲಕ ಶ್ರೀನಿವಾಸ ಸ್ವಾಮಿ ಮತ್ತು ಪದ್ಮಾವತಿ ಅಮ್ಮನವರ ದಿವ್ಯ ಕಲ್ಯಾಣದ ಮಹಿಮೆಯನ್ನು ಸ್ಮರಿಸಲಾಯಿತು.

ಉದಯವಾಹಿನಿ ಚಿತ್ರ

ವಿದುಷಿ ಶುಭ ಸಂತೋಷ್,ಅಪೂರ್ವ ಲಕ್ಷ್ಮಿ ರವರ ಸುಮಧುರ ಗಾಯನ , ಸಂಸ್ಕೃತಿ ಚಿಂತಕ ಡಾ.ಗುರುರಾಜ ಪೋಶೆಟ್ಟಿಹಳ್ಳಿ ಅವರ ನಿರೂಪಣೆಯಲ್ಲಿ ಭಕ್ತಿ, ಸಂಪ್ರದಾಯ ಮತ್ತು ಆಧ್ಯಾತ್ಮಿಕ ಚಿಂತನೆಗಳ ಸಮ್ಮಿಲನವು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತು. ಸನಾತನ ಧಾರ್ಮಿಕ ಪರಂಪರೆಯ ಮಹತ್ವವನ್ನು ಸಾರಿದ ಕಲ್ಯಾಣೋತ್ಸವವು ಭಕ್ತರಲ್ಲಿ ಭಗವಂತನ ಮೇಲಿನ ಶ್ರದ್ಧೆ, ಭಕ್ತಿ ಮತ್ತು ಸತ್ಸಂಗದ ಮಹತ್ವವನ್ನು ಬಿಂಬಿಸಿತು. ಇಂತಹ ಧಾರ್ಮಿಕ ಕಾರ್ಯಕ್ರಮಗಳು ಭಾರತೀಯ ಸಂಸ್ಕೃತಿ, ದಾಸ ಸಾಹಿತ್ಯ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಶ್ರೀನಿವಾಸ ಉತ್ಸವ ಬಳಗದ ಸಂಸ್ಥಾಪಕ ಅಧ್ಯಕ್ಷ ಡಾ.ವಾದಿರಾಜ ತಾಯಲೂರು ತಿಳಿಸಿದರು .

ಬ್ರಿಟಿಷರ ಗುಲಾಮ ಆರ್‌ಎಸ್‌ಎಸ್‌ನಿಂದ ನಾವ್ ಕಲೀಬೇಕಾ

• **ಉದಯವಾಹಿನಿ, ಬೆಂಗಳೂರು:**

ಪೊಲೀಸ್ ಇಲಾಖೆ ಅವರ ಮನೆ ಆಳು ಮಕ್ಕಳಾ? ಮಾಹಿತಿ ಕೊಟ್ಟಿದ್ದೇವೆ, ಎಲ್ಲಾ ಸಿದ್ಧತೆ ಮಾಡಿಕೊಳ್ಳಿ ಅನ್ನೋದಲ್ಲ ಎಂದು ಪ್ರಿಯಾಂಕ್ ಖರ್ಗೆ ಕಿಡಿಕಾರಿದ್ದಾರೆ. ಮಾಧ್ಯಮದವರೊಂದಿಗೆ ಆರ್‌ಎಸ್‌ಎಸ್‌ಗೆ ಪತ್ರ ಬರೆದ ವಿಚಾರವಾಗಿ ಮಾತನಾಡಿದ ಅವರು, ನಾವು ಕೇಳಿರೋದರಲ್ಲಿ ತಪ್ಪೇನಿದೆ? ಏನಾದರೂ ಲೋಪ ಇದ್ರೆ ನಾವು ತಿದ್ದಿಕೊಳ್ಳುತ್ತೇವೆ. ಬಹಳಷ್ಟು ಕಡೆ ಆರ್‌ಎಸ್‌ಎಸ್ ಪಥಸಂಚಲದ ಬಗ್ಗೆ ಮಾಹಿತಿಗಾಗಿ ಅಂತ ಕೊಡ್ತಾ ಇದ್ದಾರೆ.

ಮಾಹಿತಿಗಾಗಿ ಬೇಡ, ದಯವಿಟ್ಟು ಅನುಮತಿಗಾಗಿ ಅಂತ ಕೇಳಿ, ನಾವು ಮಾಡುತ್ತೇವೆ. ಅನುಮತಿ ಕೇಳಲಿ. ಅದರಲ್ಲಿ ಮಾಹಿತಿಗಾಗಿ ಅಂತ ಬರೆದಿದೆ, ಪೊಲೀಸ್ ಇಲಾಖೆ ಅವರ ಮನೆ ಆಳು ಏನ್ರಿ? ಎಂದು ಆಗ್ರಹಿಸಿದ್ದಾರೆ. ಮಾಹಿತಿ ಕೊಟ್ಟಿದ್ದೇವೆ. ಎಲ್ಲಾ ಸಿದ್ಧತೆ ಮಾಡಿಕೊಳ್ಳಿ ಎಂದು ಹೇಳೋದಲ್ಲ, ಬಹಳ ಜನ ಹಬ್ಬದ ಆಚರಣೆ ಮಾಡುತ್ತಿದ್ದಾರೆ. ನೀವು ಅನುಮತಿ ಕೇಳಿ, ಸೂಕ್ತ ಅನಿಸಿದ್ರೆ ಭದ್ರತೆ ಕೊಡ್ತೀವಿ. ಗಣಪತಿ ಹಬ್ಬ, ಮನೆ ಕಾರ್ಯಕ್ರಮ ಅಂತ ಅನುಮತಿ ಕೇಳ್ತೀರಾ ಅಲ್ವಾ? ನಿಮಗೆ ಏನು ಕಾನೂನು ಅನ್ವಯಿಸುತ್ತದೆ, ಅದೇ ಆರ್‌ಎಸ್‌ಎಸ್‌ಗೂ ಕೂಡ ಅನ್ವಯಿಸುತ್ತದೆ ಎಂದು ಹೇಳಿದ್ದಾರೆ.

ಉದಯವಾಹಿನಿ ಚಿತ್ರ

> ಪೊಲೀಸ್ ಇಲಾಖೆ ಆರ್ ಎಸ್ ಎಸ್‌ನ ಆಳು ಮಕ್ಕಳಲ್ಲ. ಮಾಹಿತಿ ಕೊಟ್ಟಿದ್ದೇವೆ, ವ್ಯವಸ್ಥೆ ಮಾಡಿ ಎಂದು ಹೇಳಿದರೆ ಪೊಲೀಸ್ ಇಲಾಖೆ ಮಾಡಲ್ಲ. ಬಹಳಷ್ಟು ಜನ ಹಬ್ಬ ಆಚರಿಸುತ್ತಾರೆ. ಆರ್‌ಎಸ್‌ಎಸ್ ಕಾನೂನು, ಸಂವಿಧಾನಕ್ಕಿಂತ ಮೇಲಲ್ಲ. ಮೊದಲು ಅನುಮತಿ ಕೇಳಿ, ಸೂಕ್ತ ಅನಿಸಿದರೆ ಕೊಡುತ್ತೇವೆ ಎಂದು ಹೇಳಿದ್ದಾರೆ.
> - ಪ್ರಿಯಾಂಕ್ ಖರ್ಗೆ

ಆರ್‌ಎಸ್‌ಎಸ್ ಪಥಸಂಚಲನಕ್ಕೆ ಸೂಕ್ತವಾಗಿ ಅನುಮತಿ ಕೇಳಬೇಕು. ಬಾಯಿಮಾತಿನಲ್ಲಿ ಹೇಳಿದರೆ ಆಗುವುದಿಲ್ಲ. ನಾನು ಕೇಳಿದ್ರಲ್ಲಿ ತಪ್ಪಿದ್ದರೆ, ಲೋಪ ಇದ್ದರೆ ತಿದ್ದಿಕೊಳ್ಳೋಕೆ ತಯಾರಿದ್ದೀನಿ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಆರ್‌ಎಸ್‌ಎಸ್ ಪಥಸಂಚಲನ ಮಾಡುವಾಗ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದರು. ಮಾಹಿತಿ ಬೇಡ, ಅನುಮತಿ ಕೇಳಿ ಪಡೆದುಕೊಳ್ಳಿ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಪಥ ಸಂಚಲನದ ಮಾಹಿತಿ ಕೊಟ್ರೆ ಸಾಲದು, ಅನುಮತಿಗಾಗಿ ಕಾಯಬೇಕು

• **ಉದಯವಾಹಿನಿ, ಬೆಂಗಳೂರು:**

ರಾಷ್ಟ್ರೀಯ ಸ್ವಯಂಸೇವಕ ಸಂಘ ವಿಜಯ ದಶಮಿಯಂದು ನಡೆಸುವ ಪಥಸಂಚಲನಕ್ಕೆ ನಿಗದಿತ ಅರ್ಜಿಯನ್ನು ಭರ್ತಿ ಮಾಡಿ, ಅಗತ್ಯ ವಿವರಗಳನ್ನು ಒದಗಿಸಿ ಮತ್ತು ಔಪಚಾರಿಕ ಅನುಮತಿಗಾಗಿ ಕಾಯಿರಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದ್ದಾರೆ. ಬೆಂಗಳೂರಿನ ಪಥಸಂಚಲನ ಸಂಬಂಧ ಆರ್‌ಎಸ್‌ಎಸ್ ಕಾರ್ಯಕರ್ತರು ಪೊಲೀಸ್ ಠಾಣೆಗೆ ಮಾಹಿತಿ ನೀಡಿರುವ ಪತ್ರ ಪೋಸ್ಟ್ ಮಾಡಿದ ಪ್ರಿಯಾಂಕ್ ಖರ್ಗೆ, ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಅನುಮತಿಗಾಗಿ ಕಾಯಬೇಕು ಎಂದು ಹೇಳಿದ್ದಾರೆ.

ನನ್ನ ಆತ್ಮೀಯ ಸ್ವಯಂಸೇವಕರೇ, ವಿಜಯ ದಶಮಿ ಹಬ್ಬದ ಸಂಭ್ರಮ ಜೋರಾಗಿ ನಡೆಯುತ್ತಿದೆ ಎಂದು ಭಾವಿಸುತ್ತೇನೆ.

ನಿಮ್ಮ ಉತ್ಸಾಹಕ್ಕೆ ತಣ್ಣೀರು ಎರಚುವ ಉದ್ದೇಶವಿಲ್ಲ. ಆದರೆ ಒಂದು ಸಣ್ಣ ಜ್ಞಾಪನೆ, ಕೇವಲ 'ಮಾಹಿತಿ ನೀಡುವುದು' ಅಥವಾ 'ಸಹಕರಿಸಿ' ಅಥವಾ 'ಅಗತ್ಯ ವ್ಯವಸ್ಥೆ ಮಾಡಿ' ಎಂದು ಗೃಹ ಇಲಾಖೆಗೆ ತಿಳಿಸುವುದು ಅನುಮತಿ ಪಡೆದಂತೆ ಆಗುವುದಿಲ್ಲ. ದಯವಿಟ್ಟು ಎಲ್ಲಾ ಸಂಘಟನೆಗಳಿಗೆ ಅನ್ವಯಿಸುವ ನಿಗದಿತ ಕಾರ್ಯವಿಧಾನದ ಪ್ರಕಾರ ನಿಮ್ಮ ಅರ್ಜಿಯನ್ನು ಸಲ್ಲಿಸಿ ಮತ್ತು ಸಕ್ಷಮ ಪ್ರಾಧಿಕಾರಗಳಿಂದ ಔಪಚಾರಿಕ ಅನುಮೋದನೆಗಾಗಿ ಕಾಯಿರಿ ಎಂದು ಟ್ವೀಟ್ ಮಾಡಿದ್ದಾರೆ.

ಅಖಿಲ ಭಾರತೀಯ ಪ್ರತಿನಿಧಿ ಸಭಾ ವಾರ್ಷಿಕ ವರದಿ 2025-26ರಲ್ಲಿ ಕರ್ನಾಟಕದಾದ್ಯಂತ 2,21,963 ಸಮವಸ್ತ್ರಧಾರಿ ಸ್ವಯಂಸೇವಕರನ್ನು ಒಳಗೊಂಡ 562 ಪಥಸಂಚಲನಗಳನ್ನು ನಡೆಸಿದೆ ಎಂದು ಹೇಳಿದೆ ಎಂದು ನೀವು ಓದಿದ್ದೀರಿ ಎಂದು ನನಗೆ ಖಾತರಿಯಿದೆ. ಈಗ ಲಕ್ಷಾಂತರ ಮಂದಿ ಒಂದೇ ದಿನ ಒಂದೇ ಸಮಯದಲ್ಲಿ ಕರ್ನಾಟಕದ ಬೀದಿಗಳಲ್ಲಿ ಮೆರವಣಿಗೆ ನಡೆಸಲು ಉದ್ದೇಶಿಸಿದಾಗ, ಪೊಲೀಸ್ ಇಲಾಖೆಯು ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ರೈಲು ಆರಂಭಕ್ಕೆ ದಿನಾಂಕ ನಿಗದಿ

• **ಉದಯವಾಹಿನಿ, ಬೆಂಗಳೂರು:**

ಬಹುನಿರೀಕ್ಷಿತ ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ರೈಲಿಗೆ ಕನ್ನಡ ರಾಜ್ಯೋತ್ಸವದ ದಿನವಾದ ನವೆಂಬರ್ 1ರಂದು ಚಾಲನೆ ಸಿಗಲಿದೆ.ದಕ್ಷಿಣ ಭಾರತದ ಮೊದಲ ಪ್ರೀಮಿಯಂ ರಾತ್ರಿ ಪ್ರಯಾಣದ ಈ ರೈಲು, ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ನಡುವೆ ಸಂಚರಿಸಲಿದೆ. ನವೆಂಬರ್ 2ರಿಂದ ರೈಲಿನ ನಿಯಮಿತ ಸಂಚಾರ ಆರಂಭವಾಗಲಿದ್ದು, ವಾರದಲ್ಲಿ ಆರು ದಿನ ಸಂಚರಿಸಲಿದೆ. ಈ ಕುರಿತು ರೈಲ್ವೆ ಮಂಡಳಿಯಿಂದ ಅಧಿಕೃತ ಅಧಿಸೂಚನೆ ಹೊರಬಿದ್ದಿದ್ದು, ಸಂಸದ ಪಿ ಸಿ ಮೋಹನ್ ತಿಳಿಸಿದ್ದಾರೆ. ತಾತ್ಕಾಲಿಕ ವೇಳಾಪಟ್ಟಿ ಪ್ರಕಾರ, ರೈಲು ರಾತ್ರಿ 7.50ಕ್ಕೆ ಬೆಂಗಳೂರಿನ ಎಸ್‌ಎಂವಿಟಿಯಿಂದ ಹೊರಟು, ಮರುದಿನ ಬೆಳಗ್ಗೆ 11.55ಕ್ಕೆ ಮುಂಬೈನ ಸಿಎಸ್‌ಎಂಟಿ ತಲುಪಲಿದೆ. ಹಿಂತಿರುಗುವಾಗ ರಾತ್ರಿ 8.10ಕ್ಕೆ ಮುಂಬೈನಿಂದ ಹೊರಟು, ಮರುದಿನ ಬೆಳಗ್ಗೆ 11.55ಕ್ಕೆ ಬೆಂಗಳೂರಿಗೆ ಆಗಮಿಸಲಿದೆ.



ಉದಯವಾಹಿನಿ ಚಿತ್ರ

ಬೆಂಗಳೂರು-ಮುಂಬೈ ನಡುವಿನ ಪ್ರಯಾಣಕ್ಕೆ 16 ಗಂಟೆ 5 ನಿಮಿಷ ಬೇಕಾಗಲಿದ್ದು, ಮುಂಬೈ-ಬೆಂಗಳೂರು ಪ್ರಯಾಣವು ಸ್ವಲ್ಪ ವೇಗವಾಗಿರಲಿದೆ. ಹಿಂತಿರುಗುವ ಪ್ರಯಾಣಕ್ಕೆ 15 ಗಂಟೆ 45 ನಿಮಿಷ ತಗುಲಲಿದೆ.

ಈ ರೈಲು ಗುಂಟಕಲ್ ಮಾರ್ಗವಾಗಿ ಸಂಚರಿಸಲಿದೆ. ಅನಂತಪುರ, ಗುಂತಕಲ್, ರಾಯಚೂರು, ಕಲಬುರಗಿ, ಸೋಲಾಪುರ, ಪುಣೆ ಮತ್ತು ಕಲ್ಯಾಣ್ ನಿಲ್ದಾಣಗಳಲ್ಲಿ ನಿಲುಗಡೆ ನೀಡುವ ನಿರೀಕ್ಷೆಯಿದೆ. ಭಾರತದ ಎರಡು ಪ್ರಮುಖ ನಗರಗಳ ನಡುವಿನ ರೈಲು ಪ್ರಯಾಣದ ಸಮಯವನ್ನು ಈ ಸೇವೆ ಕಡಿಮೆ ಮಾಡಲಿದೆ. ಪ್ರಸ್ತುತ ಈ ಮಾರ್ಗದಲ್ಲಿ ಸೂಪರ್‌ಫಾಸ್ಟ್ ರೈಲು ಸಂಪರ್ಕದ ಕೊರತೆಯಿದ್ದು, ಈಗಿರುವ ರೈಲುಗಳಲ್ಲಿ ಒಂದು ಕಡೆಯ ಪ್ರಯಾಣಕ್ಕೆ 22ರಿಂದ 24 ಗಂಟೆಗಳವರೆಗೆ ಸಮಯ ಬೇಕಾಗುತ್ತದೆ.

ಕರ್ನಾಟಕದಲ್ಲಿ ಬರ ಪರಿಸ್ಥಿತಿ 'ಅತ್ಯಂತ ಗಂಭೀರ'

• **ಉದಯವಾಹಿನಿ, ಬೆಂಗಳೂರು:**

ರಾಜ್ಯದ ಬಹುತೇಕ ಭಾಗಗಳಲ್ಲಿ ಬರ ಪರಿಸ್ಥಿತಿ 'ಅತ್ಯಂತ ಗಂಭೀರ'ವಾಗಿದೆ ಎಂದು ಡಿಸಿಎಂ ಜಿ. ಪರಮೇಶ್ವರ್ ತಿಳಿಸಿದ್ದಾರೆ. ಕೃಷಿ ಉತ್ಪಾದನೆಯಲ್ಲಿ ಭಾರಿ ನಷ್ಟ ಉಂಟಾಗಿದ್ದು, ಜಾನುವಾರುಗಳಿಗೆ ಮೇವು ಮತ್ತು ಜನರಿಗೆ ಕುಡಿಯುವ ನೀರಿನ ಕೊರತೆಯು ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದೆ. ಕೇಂದ್ರ ಸರ್ಕಾರದಿಂದ ಬರ ಪರಿಹಾರ ನಿಧಿಯನ್ನು ಕೋರಿ ರಾಜ್ಯ ಸರ್ಕಾರವು ಮೂರನೇ ಮನವಿ ಪತ್ರವನ್ನು ಸಿದ್ಧಪಡಿಸುತ್ತಿದ್ದು, ಮುಂದಿನ ಎರಡು ದಿನಗಳಲ್ಲಿ ಸಲ್ಲಿಸುತ್ತೇವೆ. ಕೇಂದ್ರದ ನೆರವಿಗಾಗಿ ಕಾಯದೆ ರಾಜ್ಯ ಸರ್ಕಾರವು ತನ್ನದೇ ಆದ ಸಂಪನ್ಮೂಲಗಳನ್ನು ಬಳಸಿಕೊಂಡು ಪರಿಹಾರ ಕಾರ್ಯಗಳನ್ನು ಕೈಗೊಳ್ಳುತ್ತಿದೆ ಎಂದರು. ಕಂದಾಯ ಖಾತೆ ಹೊಂದಿರುವ ಪರಮೇಶ್ವರ್, ತಾವು ಉತ್ತರ ಕರ್ನಾಟಕದ ಕೆಲವು ಭಾಗಗಳು ಸೇರಿದಂತೆ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ರೈತರೊಂದಿಗೆ ಚರ್ಚಿಸಿ ಪರಿಸ್ಥಿತಿಯನ್ನು ಅವಲೋಕಿಸಿದ್ದೇನೆ. ಇತ್ತೀಚೆಗೆ ಕೆಲವು ಪ್ರದೇಶಗಳಲ್ಲಿ ಮಳೆಯಾಗಿದ್ದರೂ, ರಾಜ್ಯದ ಬಹುತೇಕ ಕಡೆಗಳಲ್ಲಿ ಬರಗಾಲದ ತೀವ್ರತೆ ಕಡಿಮೆಯಾಗಿಲ್ಲ. ಕೃಷಿ ಉತ್ಪಾದನೆಯಲ್ಲಿ ಅಂದಾಜು ಶೇಕಡಾ 82ರಷ್ಟು ನಷ್ಟವಾಗಿದೆ. ಜಾನುವಾರುಗಳಿಗೆ ಮೇವಿನ ಲಭ್ಯತೆ ಕಡಿಮೆಯಾಗಿದೆ. ಕುಡಿಯುವ ನೀರಿನ ಕೊರತೆಯು ಅತ್ಯಂತ ಗಂಭೀರ ಸ್ವರೂಪ ಪಡೆದುಕೊಂಡಿದೆ ಎಂದು ವಿವರಿಸಿದರು. ಕಬ್ಬು ರೈತರ 'ಹುಬ್ಬಳ್ಳಿ ಚಲೋ' ಪ್ರತಿಭಟನಾ ಮೆರವಣಿಗೆ ತಾತ್ಕಾಲಿಕ ಸ್ಥಗಿತ ಸರ್ಕಾರಕ್ಕೆ ನವೆಂಬರ್ 26 ಗಡುವು ಹಲವು ಪ್ರದೇಶಗಳಲ್ಲಿ ಟ್ಯಾಂಕರ್‌ಗಳ ಮೂಲಕ ಮತ್ತು ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಆದಾಗ್ಯೂ, ಈಗಿರುವ ನೀರಿನ ಮೂಲಗಳು ಬತ್ತಿಹೋದರೆ ಪರಿಸ್ಥಿತಿ ಇನ್ನಷ್ಟು ಹದಗೆಡಬಹುದು. ಟ್ಯಾಂಕರ್‌ಗಳ ಮೂಲಕ ನೀರು ಪೂರೈಸುವುದು ಕೂಡ ಕಷ್ಟಕರವಾಗಬಹುದು ಎಂದು ಎಚ್ಚರಿಸಿದರು.

ಉದಯವಾಹಿನಿ ಚಿತ್ರ

> ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಬರಪೀಡಿತ ಪ್ರದೇಶಗಳನ್ನು ಗುರುತಿಸಲಾಗಿದೆ. ಬೆಳೆ ನಷ್ಟವನ್ನು ಅಂದಾಜಿಸಲಾಗಿದೆ. ಈ ಮೌಲ್ಯಮಾಪನಗಳ ಆಧಾರದ ಮೇಲೆ, 'ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿ' ನಿಯಮಗಳ ಅಡಿಯಲ್ಲಿ ರಾಜ್ಯವು ನೆರವನ್ನು ಕೋರುತ್ತಿದೆ

ನಿರ್ಮಾಣ ಹಂತದ ಕಟ್ಟಡದಲ್ಲಿ ಸ್ಫೋಟ: ಇಬ್ಬರಿಗೆ ಗಾಯ

ತನಿಖೆ ಪೂರ್ಣಗೊಳ್ಳುವ ಮುನ್ನವೇ ಜನರು ಯಾವುದೇ ಊಹಾಪೋಹಗಳಿಗೆ ಕಿವಿಗೊಡಬಾರದು ಎಂದು ಮನವಿ ಮಾಡಿದ್ದಾರೆ.

• **ಉದಯವಾಹಿನಿ, ಬೆಂಗಳೂರು:**

ಬುಧವಾರ ನಸುಕಿನ ಜಾವ ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡವೊಂದರಲ್ಲಿ ಸಂಭವಿಸಿದ ಸ್ಫೋಟದಲ್ಲಿ ಇಬ್ಬರು ವ್ಯಕ್ತಿಗಳು ಗಾಯಗೊಂಡಿದ್ದಾರೆ. ಬ್ಯಾಟರಿಯೊಂದು ಸ್ಫೋಟಗೊಂಡಿದ್ದೇ ಈ ಘಟನೆಗೆ ಕಾರಣವಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

1 : ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ
2 : ತನಿಖೆ ಈಗಷ್ಟೇ ಆರಂಭವಾಗಿದ್ದು
3 : ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ

ಸ್ಫೋಟಕ್ಕೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ತಿಳಿಸಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ತನಿಖೆ ಪೂರ್ಣಗೊಳ್ಳುವ ಮುನ್ನವೇ ಜನರು ಯಾವುದೇ ಊಹಾಪೋಹಗಳಿಗೆ ಕಿವಿಗೊಡಬಾರದು ಎಂದು ಮನವಿ ಮಾಡಿದ್ದಾರೆ. ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಸುದ್ದಿಗಾರರಿಗೆ ತಿಳಿಸಿದ ಅವರು, ಪ್ರಾಥಮಿಕ ತನಿಖೆ ಈಗಷ್ಟೇ ಆರಂಭವಾಗಿದ್ದು, ಮಾದರಿಗಳನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಬೇಕಿದೆ ಎಂದು ಹೇಳಿದರು. ಪುಲಕೇಶಿನಗರ ಪೊಲೀಸ್ ಠಾಣಾ ವ್ಯಾಪ್ತಿಯ



ಉದಯವಾಹಿನಿ ಚಿತ್ರ

ಜರ್ಮಿಯಾ ರಸ್ತೆಯಲ್ಲಿರುವ ಕಟ್ಟಡವೊಂದರ ನಾಲ್ಕನೇ ಮಹಡಿಯಲ್ಲಿ, ನಿರ್ಮಾಣ ಕಾರ್ಯ ನಡೆಯುತ್ತಿದ್ದಾಗ ಈ ಸ್ಫೋಟ ಸಂಭವಿಸಿದೆ. ಸ್ಫೋಟದ ನಂತರ ಬೆಂಕಿ ಕಾಣಿಸಿಕೊಂಡಿದ್ದು, ಕೂಡಲೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದಾರೆ. ಗಾಯಗೊಂಡವರಲ್ಲಿ ನೇಪಾಳ ಮೂಲದ ಭದ್ರತಾ ಸಿಬ್ಬಂದಿ (ಸೆಕ್ಯೂರಿಟಿ ಗಾರ್ಡ್) ಮತ್ತು ನಿರ್ಮಾಣ ಕಾರ್ಮಿಕರೊಬ್ಬರು ಸೇರಿದ್ದು, ಅವರನ್ನು ಚಿಕಿತ್ಸೆಗಾಗಿ ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಒಬ್ಬ ವ್ಯಕ್ತಿಯ ಬೆರಳು ಕತ್ತರಿಸಿಹೋಗಿದ್ದರೆ, ಇನ್ನೊಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಖರ್ಗೆ ತಿಳಿಸಿದರು. ಒಂದು ಸ್ಫೋಟ ಸಂಭವಿಸಿದೆ,

> ಇದು ರಾಸಾಯನಿಕ ಕ್ರಿಯೆಯೇ, ಐಇಡಿ ಬಳಸಲಾಗಿದೆಯೇ ಅಥವಾ ಬೇರೇನಾದರೂ ಆಗಿದೆಯೇ ಎಂಬ ಬಗ್ಗೆ ನಾವು ತನಿಖೆ ನಡೆಸುತ್ತಿದ್ದೇವೆ. ಯಾರೋ ಏನೋ ಹೇಳಿದ ತಕ್ಷಣ ಅದನ್ನು ನಾನು ಸುಮ್ಮನೆ ಪುನರಾವರ್ತಿಸಲು ಸಾಧ್ಯವಿಲ್ಲ, ಎಂದು ಅವರು ಹೇಳಿದರು. - ಸಚಿವ ಪ್ರಿಯಾಂಕ್ ಖರ್ಗೆ

ಸದ್ಯಕ್ಕೆ ಇಷ್ಟನ್ನಷ್ಟೇ ನಾನು ಹೇಳಬಲ್ಲೆ, ಎಂದ ಅವರು, ತನಿಖಾಧಿಕಾರಿಗಳು ಲಭ್ಯವಿರುವ ಸಾಕ್ಷ್ಯಗಳನ್ನು ಪರಿಶೀಲಿಸುತ್ತಿದ್ದಾರೆ ಎಂದು ಹೇಳಿದರು. ತನಿಖೆಯ ಫಲಿತಾಂಶ ಹೊರಬರುವ ಮುನ್ನ ವದಂತಿಗಳಿಗೆ ಕಿವಿಗೊಡದಂತೆ ಅವರು ಎಚ್ಚರಿಕೆ ನೀಡಿದರು. ಸ್ಫೋಟಕ ವಸ್ತುವನ್ನು ಬಳಸಲಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಖರ್ಗೆ, ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲವಾದರೂ, ಅಧಿಕಾರಿಗಳು ಸ್ವಯಂಪ್ರೇರಿತವಾಗಿ ಪ್ರಕರಣವನ್ನು ಕೈಗೆತ್ತಿಕೊಂಡಿದ್ದಾರೆ ಎಂದು ತಿಳಿಸಿದರು. ಬೆಂಗಳೂರು ಡಿಸಿಪಿ (ಪೂರ್ವ ವಿಭಾಗ) ವಿಕ್ರಮ್ ಆಮ್ಟೆ ಅವರು ಸ್ಥಳಕ್ಕೆ ಭೇಟಿ ನೀಡಿದರು. ಸ್ಫೋಟಕ್ಕೆ ಕಾರಣವನ್ನು ಪತ್ತೆಹಚ್ಚಲು ಪುಲಕೇಶಿನಗರ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮನೆಯ ಒಳಗೂ ಕಂಪನ

ಶಬ್ದವು ಅತ್ಯಂತ ಜೋರಾಗಿತ್ತು. ಒಂದು ಕ್ಷಣ ದೀಪಾವಳಿಯೇ ಬಂದುಬಿಟ್ಟಿತೇನೋ ಎಂದು ನನಗೆ ಅನ್ನಿಸಿತು, ಎಂದು ಪಕ್ಕದ ಕಟ್ಟಡದಲ್ಲಿದ್ದ ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು. ಸ್ಫೋಟದ ತೀವ್ರತೆಯಿಂದ ತಮ್ಮ ಮನೆಯ ಒಳಗೂ ಕಂಪನ ಉಂಟಾಯಿತು ಎಂದು ಅವರು ಹೇಳಿದರು.

ಬಾಂಬ್ ನಿಷ್ಕ್ರಿಯ ದಳ, ಭಯೋತ್ಪಾದನಾ ನಿಗ್ರಹ ದಳ ಮತ್ತು ವಿಧಿವಿಜ್ಞಾನ ತಜ್ಞರು ಸಹ ಸ್ಥಳವನ್ನು ಪರಿಶೀಲಿಸಿದ್ದು, ಸ್ಫೋಟಗೊಂಡಿರಬಹುದು ಎಂದು ಶಂಕಿಸಲಾದ ವಸ್ತುವನ್ನು ಪರಿಶೀಲಿಸಿದ್ದಾರೆ. ಬ್ಯಾಟರಿಯಂತಹ ವಸ್ತುವೊಂದು ಸ್ಫೋಟಗೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ, ಆದರೆ ನಿಖರ ಕಾರಣ ಇನ್ನೂ ದೃಢಪಟ್ಟಿಲ್ಲ. ಬೆಂಗಳೂರಿನಲ್ಲಿ ಈ ಹಿಂದೆ ವರದಿಯಾದ ಸ್ಫೋಟಗಳೊಂದಿಗೆ ಸ್ಫೋಟಕ ವಸ್ತುಗಳ ತಯಾರಿಕೆಗೆ ಸಂಬಂಧಿಸಿದ ಘಟನೆಗಳೂ ಸೇರಿದಂತೆ ಈ ಘಟನೆಗೆ ಏನಾದರೂ ನಂಟಿದೆಯೇ ಎಂದು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ದಸರಾ ಹಬ್ಬದ ಅವಧಿಯಲ್ಲಿ ಈ ಘಟನೆ ನಡೆದಿರುವುದರಿಂದ, ಇದು ವಿಶೇಷ ಗಮನ ಸೆಳೆದಿದೆ.

ಬಟ್ಟೆ ಸುತ್ತಿಕೊಂಡಂತೆ ಸುಕ್ಕುಗಟ್ಟಿದ ರಸ್ತೆ; ಬೈಕ್ ಸವಾರರ ಪ್ರಾಣಪಕ್ಷಿ ಹಾರುವ ಆತಂಕ

• **ಉದಯವಾಹಿನಿ ಹುಳಿಯಾರು:**

ಹುಳಿಯಾರು ಪಟ್ಟಣದ ಎಪಿಎಂಸಿ ಮುಂಭಾಗದಲ್ಲಿರುವ ರಾಷ್ಟ್ರೀಯ ಹೆದ್ದಾರಿಯು ಸಂಪೂರ್ಣವಾಗಿ ಹದಗೆಟ್ಟು ಹೋಗಿದ್ದು, ವಾಹನ ಸವಾರರು ಪ್ರತಿದಿನ ನರಕಯಾತನೆ ಅನುಬವಿಸುವಂತಾಗಿದೆ. ಹೆದ್ದಾರಿಯ ಡಾಂಬರು ಕಿತ್ತುಬಂದು, ಬಟ್ಟೆ ಸುತ್ತಿಕೊಂಡಂತೆ ಸುಕ್ಕುಗಟ್ಟಿದ್ದು, ಈ ಮಾರ್ಗದಲ್ಲಿ ಸಂಚರಿಸುವುದು ಅಕ್ಷರಶಃ ಸಾವಿನೊಂದಿಗೆ ಆಟವಾಡಿದಂತಾಗಿದೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನಗಳು ವೇಗವಾಗಿ ಸಂಚರಿಸಲು ಅವಕಾಶವಿರುತ್ತದೆ. ಆದರೆ, ಹುಳಿಯಾರು ಎಪಿಎಂಸಿ ಗೇಟ್ ಬಳಿ ರಸ್ತೆಯ ಮೇಲ್ಮೈ ಸಂಪೂರ್ಣವಾಗಿ ಏರಿಳಿತಗಳಿಂದ ಕೂಡಿದ್ದು, ಅಲೆಯೋಪಾದಿಯಲ್ಲಿ ಸುಕ್ಕುಗಟ್ಟಿದೆ. ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಸಂಚರಿಸುವಾಗ ನಿಯಂತ್ರಣ ಕಳೆದುಕೊಂಡು ಬಿದ್ದು ಗಾಯಗೊಳ್ಳುವುದು ಖಚಿತ ಎಂದು ಸ್ಥಳೀಯರು ಹಾಗೂ ಸವಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಬೈಕ್‌ನಲ್ಲಿ ಬರುವುದು ಎಂದರೆ ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು


ಉದಯವಾಹಿನಿ ಚಿತ್ರ

ಓಡಾಡಿದ ಹಾಗೆ. ರಸ್ತೆಯ ಈ ಸುಕ್ಕುಗಟ್ಟಿದ ಅವ್ಯವಸ್ಥೆಯಿಂದಾಗಿ ರಾತ್ರಿ ವೇಳೆ ದ್ವಿಚಕ್ರ ವಾಹನಗಳು ಮತ್ತು ಆಟೋಗಳು ನಿಯಂತ್ರಣ ತಪ್ಪಿ ಬೀಳುತ್ತಿವೆ.

ದೊಡ್ಡಮಟ್ಟದ ದುರ್ಘಟನೆ ಸಂಭವಿಸುವ ಮುನ್ನ ಸಂಬಂಧಪಟ್ಟವರು ಎಚ್ಚೆತ್ತುಕೊಳ್ಳಬೇಕು ಎಂದು ವಾಹನ ಸವಾರರು ಒತ್ತಾಯಿಸಿದ್ದಾರೆ.

ಕೋಟಿಗಟ್ಟಲೆ ಅನುದಾನ ಬಳಸಿ ನಿರ್ಮಿಸಲಾಗುವ ರಾಷ್ಟ್ರೀಯ ಹೆದ್ದಾರಿಗಳು ಕೇವಲ ಕೆಲವೇ ತಿಂಗಳುಗಳಲ್ಲಿ ಈ ರೀತಿ ಹದೆಗೆಡುತ್ತಿರುವುದು ಸಾರ್ವಜನಿಕರಲ್ಲಿ ತೀವ್ರ ಆಕ್ರೋಶ ಮೂಡಿಸಿದೆ. ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ನಿರ್ಲಕ್ಷ್ಯವೇ ಈ ದುಸ್ಥಿತಿಗೆ ನೇರ ಕಾರಣ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಪ್ರತಿದಿನ ನೂರಾರು ಶಾಲಾ ವಾಹನಗಳು, ಸರಕು ಸಾಗಣೆ ಲಾರಿಗಳು ಹಾಗೂ ದ್ವಿಚಕ್ರ ವಾಹನಗಳು ಸಂಚರಿಸುವ ಈ ಪ್ರಮುಖ ರಸ್ತೆಯನ್ನು ದುರಸ್ಥಿಪಡಿಸುವಲ್ಲಿ ಅಧಿಕಾರಿಗಳು ಮೀನಮೇಷ ಎಣಿಸುತ್ತಿದ್ದಾರೆ.

ಸಾರ್ವಜನಿಕರ ಜೀವದೊಂದಿಗೆ ಚೆಲ್ಲಾಟವಾಡುತ್ತಿರುವ ಈ ರಾಷ್ಟ್ರೀಯ ಹೆದ್ದಾರಿಯ ಅವ್ಯವಸ್ಥೆಯನ್ನು ಕೂಡಲೇ ಸಂಬಂಧಪಟ್ಟ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಗಮನಹರಿಸಿ, ವೈಜ್ಞಾನಿಕವಾಗಿ ರಸ್ತೆಯನ್ನು ದುರಸ್ಥಿಪಡಿಸಬೇಕು ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.

ನೂರು ವರ್ಷ ಬದುಕಬೇಕೆಂಬ ಆಸೆ; ಮದ್ಯ ಕುಡಿಯುವುದನ್ನು ಬಿಟ್ಟಿದ್ದೆ

ತಮಗೆ ಈ ಗೌರವ ಡಾಕ್ಟರೇಟ್ ಪಡೆಯುವ ಅರ್ಹತೆಯಿದೆಯೇ ಎಂಬುದು ತಮಗೆ ತಿಳಿದಿಲ್ಲವೆಂದೂ, ವೈದ್ಯರೇ ಅದನ್ನು ನಿರ್ಧರಿಸಬೇಕೆಂದೂ ಹೇಳಿದರು.

• **ಉದಯವಾಹಿನಿ ಕೋಲಾರ:**

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ನಡೆದ 'ಸ್ಥಾಪಕರ ದಿನ' ಹಾಗೂ ಆರ್.ಎಲ್. ಜಾಲಪ್ಪ ಅವರ ಜನ್ಮದಿನಾಚರಣೆಯ ಸಂದರ್ಭದಲ್ಲಿ, ದೇವರಾಜ್ ಅರಸು

1 : 17 ಬಾರಿ ಬಜೆಟ್ ಮಂಡಿಸಿರುವುದಾಗಿ ತಿಳಿಸಿದ
2 : ಪ್ರವೇಶಿಸುವ ಮೊದಲು ತಾವು ವಕೀಲರಾಗಿದ್ದೆ
3 : ಭಾಗವಹಿಸಲು ತಮಗೆ ತುಂಬಾ ಸಂತೋಷ

ವೈದ್ಯಕೀಯ ಕಾಲೇಜು ಗೌರವ ಡಾಕ್ಟರೇಟ್ ಪ್ರದಾನ ಮಾಡಿತು. ತಮಗೆ ಈ ಗೌರವ ಡಾಕ್ಟರೇಟ್ ಪಡೆಯುವ ಅರ್ಹತೆಯಿದೆಯೇ ಎಂಬುದು ತಮಗೆ ತಿಳಿದಿಲ್ಲವೆಂದೂ, ಅಲ್ಲಿ ನೆರೆದಿರುವ ವೈದ್ಯರೇ ಅದನ್ನು ನಿರ್ಧರಿಸಬೇಕೆಂದೂ ಸಿದ್ದರಾಮಯ್ಯ ಹೇಳಿದರು.

ತಾವು 17 ಬಾರಿ ಬಜೆಟ್ ಮಂಡಿಸಿರುವುದಾಗಿ ತಿಳಿಸಿದ ಅವರು, ದೇವರಾಜ್ ಅರಸು ಅವರು ಅತಿ ದೀರ್ಘಕಾಲ ಮುಖ್ಯಮಂತ್ರಿಯಾಗಿದ್ದ ದಾಖಲೆಯನ್ನು ತಾವೇ ಮುರಿದಿರುವುದಾಗಿ ಹೇಳಿದರು. ಅತಿ ದೀರ್ಘಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ವ್ಯಕ್ತಿಯಾಗಿ, ತಾನೀಗ ಮಾಜಿ ಮುಖ್ಯಮಂತ್ರಿಯಾಗಿದ್ದೇನೆ ಎಂದು ಅವರು ನುಡಿದರು. ರಾಜಕೀಯ ಪ್ರವೇಶಿಸುವ ಮೊದಲು ತಾವು ವಕೀಲರಾಗಿದ್ದೆ ಎಂದು ಸಿದ್ದರಾಮಯ್ಯ ನೆನಪಿಸಿಕೊಂಡರು.

ಆರ್.ಎಲ್. ಜಾಲಪ್ಪ ಅವರು ದೇಶದ ಹಾಗೂ ಕರ್ನಾಟಕದ ಅತ್ಯಂತ ಪ್ರಮುಖ ನಾಯಕರಲ್ಲಿ ಒಬ್ಬರಾಗಿದ್ದರಿಂದ, ಅವರ ಜನ್ಮದಿನಾಚರಣೆಯಲ್ಲಿ ಭಾಗವಹಿಸಲು ತಮಗೆ ತುಂಬಾ ಸಂತೋಷವಾಗಿದೆ ಎಂದು ಅವರು ತಿಳಿಸಿದರು.

ಜಾಲಪ್ಪ ಅವರ ತತ್ವಗಳನ್ನು ಸಂಸ್ಥೆಯ ಅಧ್ಯಕ್ಷರು ಮತ್ತು ಟ್ರಸ್ಟಿಗಳು ಪಾಲಿಸುತ್ತಿದ್ದಾರೆ. ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ಸಾವಿರಾರು ವೈದ್ಯರು ಇಂದು ಪ್ರಪಂಚದಾದ್ಯಂತ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಇನ್ನೂ ನನಗೂ ನೂರು ವರ್ಷ ಬದುಕಬೇಕು ಅಂತ ಆಸೆ ಇದೆ. ಆದರೆ ಇರ್ತೀನೋ ಇಲ್ವೋ ಗೊತ್ತಿಲ್ಲ ನಾನು ಕಳೆದ 32 ವರ್ಷಗಳಿಂದ ಡಯಾಬಿಟಿಕ್ ಆಗಿದ್ದೇನೆ. ನನಗೆ 1994 ರಲ್ಲಿ ಮಧುಮೇಹ ಶುರುವಾಯಿತು ಎಂದು ಹೇಳಿದರು. ನಾನು ಒಮ್ಮೆ ಮದ್ಯ ಕುಡಿಯುವುದನ್ನು ಬಿಟ್ಟು ಬಿಟ್ಟಿದ್ದೆ. ಮತ್ತೆ ಆರ್.ಎಲ್. ಜಾಲಪ್ಪ ಅವರೇ ಶುರು ಮಾಡಿಸಿದರು. ಅವರು ಯಾವಾಗಲೂ ನೋಡಯ್ಯ ಸತ್ತ ಮೇಲೆ ಸ್ವರ್ಗಕ್ಕೆ ಹೋಗಬೇಕೆಂದರೆ ಇವೆಲ್ಲಾ ಅಭ್ಯಾಸ ಇರಲೇಬೇಕು ಎಂದು ತಮಾಷೆಯಾಗಿ ಹೇಳುತ್ತಿದ್ದರು. ಅವರು ಸದಾ ನನ್ನ ಹಿತವನ್ನು ಬಯಸುತ್ತಿದ್ದರು. ನನಗೆ ಜಾಲಪ್ಪನವರ

ಉದಯವಾಹಿನಿ ಚಿತ್ರ

> ದೇಶಕ್ಕೆ, ವಿಶೇಷವಾಗಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಜಾಲಪ್ಪ ಅವರು ನೀಡಿದ ಕೊಡುಗೆಯನ್ನು ಸದಾ ಸ್ಮರಿಸಲಾಗುತ್ತದೆ. ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಜಾರಿಗೆ ತರಲು ಜಾಲಪ್ಪ ಅವರು ಅವಿರತವಾಗಿ ಶ್ರಮಿಸಿದರು ಎಂದು ಅವರು ಹೇಳಿದರು

> ತಾವು ಮುಖ್ಯಮಂತ್ರಿಯಾಗಲು ಜಾಲಪ್ಪ ಅವರು ಬೆಂಬಲ ನೀಡಿದ್ದರು ಮತ್ತು ಅಗತ್ಯವಿರುವ ಜನರಿಗಾಗಿ (ಬಡವರು ಹಾಗೂ ನಿರ್ಗತಿಕರಿಗಾಗಿ) ಕೆಲಸ ಮಾಡುವಂತೆ ಸಲಹೆ ನೀಡಿದ್ದರು ಎಂಬುದನ್ನು ಮಾಜಿ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಸ್ಮರಿಸಿಕೊಂಡರು.

ಪರಿಚಯ ಆಗಿದ್ದೆ 1983ರಲ್ಲಿ ಎಂದು ಸಿದ್ದರಾಮಯ್ಯ ವಿವರಿಸಿದರು. ಅವರಿಗೆ ನನ್ನನ್ನು ಮುಖ್ಯಮಂತ್ರಿ ಮಾಡಲೇಬೇಕು ಎಂಬ ಮಹದಾಸೆ ಇತ್ತು.

1996ರಲ್ಲಿ ಎಚ್.ಡಿ. ದೇವೇಗೌಡರು ಪ್ರಧಾನಮಂತ್ರಿ ಆದಾಗ ಸಿದ್ದರಾಮಯ್ಯ ಅವರನ್ನೇ ಮುಖ್ಯಮಂತ್ರಿ ಮಾಡಿ ಎಂದು ಸಲಹೆ ಕೊಟ್ಟಿದ್ದರು. ಮುಂದೆ ಕಾಂಗ್ರೆಸ್ ಪಕ್ಷಕ್ಕೆ ನನ್ನನ್ನು ಸೇರಿಸಿಕೊಳ್ಳಲು ಸೋನಿಯ ಗಾಂಧಿ ಅವರಿಗೆ ಅವರೇ ಪತ್ರ ಬರೆದಿದ್ದರು. ಉಪ ಮುಖ್ಯಮಂತ್ರಿ ಆಗಲು ಸಹ ಜಾಲಪ್ಪನವರೇ ಕಾರಣ ಎಂದು ಸ್ಮರಿಸಿದರು. ನಾನು ಡಾಕ್ಟರೇಟ್ ಪಡೆಯಲು ಅರ್ಹನೋ ಇಲ್ಲವೋ ಗೊತ್ತಿಲ್ಲ. ಅತ್ಯಂತ ಹೆಚ್ಚು ಅವಧಿಗೆ ರಾಜ್ಯದ ಮುಖ್ಯಮಂತ್ರಿ ಆಗಿದ್ದ ದೇವರಾಜು ಅವರನ್ನು ಸಹ ಹಿಂದಿಕ್ಕಿದ್ದೇನೆ. 17 ಬಜೆಟ್‌ಗಳನ್ನು ಮಂಡಿಸಿದ್ದೇನೆ. ಹಾಗಾಗಿಯೇ ನನಗೆ ಡಾಕ್ಟರೇಟ್ ಕೊಟ್ಟಿರಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ಚಿಕ್ಕನಾಯಕನಹಳ್ಳಿ ಶಿಲ್ಪಿ ಸಿ.ಪಿ.ವಿಶ್ವನಾಥ್ ಅವರಿಗೆ 'ಶಿಲ್ಪಶ್ರೀ' ಪ್ರಶಸ್ತಿ ಪ್ರದಾನ

• **ಉದಯವಾಹಿನಿ ಹುಳಿಯಾರು:**

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2024–25 ನೇ ಸಾಲಿನ ಗೌರವ ಪ್ರಶಸ್ತಿ, 2024 ನೇ ಸಾಲಿನ 'ಶಿಲ್ಪಶ್ರೀ' ಪ್ರಶಸ್ತಿ ಹಾಗೂ 19 ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಮತ್ತು ಬಹುಮಾನ ವಿತರಣಾ ಸಮಾರಂಭವು ಬೆಂಗಳೂರಿನ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತು.ಈ ಕಾರ್ಯಕ್ರಮದಲ್ಲಿ ಕಲ್ಲು ಮತ್ತು ಕಾಷ್ಠ ಶಿಲ್ಪ ರಚನೆಯಲ್ಲಿ ಸುಮಾರು ಎರಡೂವರೆ ದಶಕಗಳಿಗೂ ಅಧಿಕ ಕಾಲದಿಂದ ತೊಡಗಿಸಿಕೊಂಡು, ಸಾಂಪ್ರದಾಯಿಕ ಮೂರ್ತಿ ಕೆತ್ತನೆಯಲ್ಲಿ ಅಪ್ರತಿಮ ಸಾಧನೆ ಮಾಡಿರುವ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯ ಹಿರಿಯ ಶಿಲ್ಪಿ ಶ್ರೀ ಸಿ.ಪಿ. ವಿಶ್ವನಾಥ್ ಅವರಿಗೆ ಅಕಾಡೆಮಿಯ 2024 ನೇ ಸಾಲಿನ ಪ್ರತಿಷ್ಠಿತ 'ಶಿಲ್ಪಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಿ.ಪಿ. ವಿಶ್ವನಾಥ್ ಅವರು ಸರಸ್ವತಿ, ನಾಟ್ಯ ಶಿವ, ಚನ್ನಕೇಶವ, ಮದನಿಕೆ, ಬ್ರಹ್ಮ, ಬನಶಂಕರಿ ಮುಂತಾದ ಸಾವಿರಕ್ಕೂ ಹೆಚ್ಚು ಅದ್ಭುತ ಕಲಾಕೃತಿಗಳನ್ನು ರಚಿಸಿದ್ದಾರೆ.

ಇವರ ಕೈಯಿಂದ ಮೂಡಿಬಂದ ಕಲಾಕೃತಿಗಳು

ಉದಯವಾಹಿನಿ ಚಿತ್ರ

ಭಾರತದ ಪ್ರಮುಖ ನಗರಗಳಾದ ದೆಹಲಿ, ಗೋವಾ, ಪೂನಾ ಸೇರಿದಂತೆ ಇಂಗ್ಲೆಂಡ್, ಅಮೆರಿಕ, ಜಪಾನ್, ಜರ್ಮನಿ ಮುಂತಾದ ದೇಶ–ವಿದೇಶಗಳಿಗೂ ರವಾನೆಯಾಗಿವೆ ಹಾಗೂ ಅಲ್ಲಿನ ಕಲಾ ಸಂಗ್ರಹಗಳಲ್ಲಿ ಕಂಗೊಳಿಸುತ್ತಿವೆ.

ಇವರ ಈ ಅನನ್ಯ ಕಲಾ ಸೇವೆಗೆ ಈಗಾಗಲೇ ಇಂಗ್ಲೆಂಡ್‌ನ 'ಚೇತನ' ಮತ್ತು ಕೌಶಲ್ಯ ಸಂಸ್ಥೆಯಿಂದ 'ವಾದಿರಾಜ ಸ್ಮೃತಿ ಪ್ರಶಸ್ತಿ', ಜಿಲ್ಲಾ ಕನಕ ಗಣರಾಜ್ಯೋತ್ಸವ ಪ್ರಶಸ್ತಿಗಳು ಸೇರಿದಂತೆ ಹಲವು ಪ್ರತಿಷ್ಠಿತ ಸಂಘ–ಸಂಸ್ಥೆಗಳು ಗೌರವಿಸಿವೆ. ಕಾರ್ಯಕ್ರಮದಲ್ಲಿ ಇಲಾಖೆಯ ನಿರ್ದೇಶಕರಾದ ಡಾ.ಕೆ.ಎಂ.ವಸುಂಧರಾ ಭಾಗವಹಿಸಿ ಪ್ರಶಸ್ತಿ ಪ್ರದಾನ ಮಾಡಿದರು. ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ವಿಶೇಷಾಧಿಕಾರಿ ಕೆ.ಬಿ.ಕಿರಣ್ ಸಿಂಗ್, ವಿಜಯಪುರದ ಮನೋಹರ ಕಾಳಪ್ಪ ಪತ್ತಾರ ಹಾಗೂ ಬೆಂಗಳೂರಿನ ಸುಕನ್ಯಾ ಶ್ರೀನಿವಾಸ್ ಅವರು ಉಪಸ್ಥಿತರಿದ್ದರು.ಈ ಸಮಾರಂಭದ ಅಧ್ಯಕ್ಷತೆಯನ್ನು ಅಕಾಡೆಮಿಯ ಅಧ್ಯಕ್ಷರಾದ ಎಂ.ಸಿ.ರಮೇಶ್ ಅವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್ ಆರ್. ಚಂದ್ರಶೇಖರ್, ಅಕಾಡೆಮಿಯ ಸರ್ವ ಸದಸ್ಯರುಗಳು, ಪ್ರಶಸ್ತಿ ಪುರಸ್ಕೃತರು, ಬಹುಮಾನ ಪಡೆದ ಶಿಲ್ಪಕಲಾವಿದರು, ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಸುಳಿ ಮುರಿದು ಬೀಳುವ ರೋಗ: ತೆಂಗು ಬೆಳೆಗಾರರಲ್ಲಿ ಆತಂಕ

• **ಉದಯವಾಹಿನಿ ತಿಪಟೂರು:**

ತೆಂಗಿನ ಮರಗಳಿಗೆ ಸುಳಿ ಮುರಿದು ಬೀಳುವ ರೋಗ ಕಾಡುತ್ತಿದ್ದು, ತೆಂಗು ಬೆಳೆಗಾರರು ಆತಂಕಗೊಂಡಿದ್ದಾರೆ. ತಾಲ್ಲೂಕಿನ ಮತ್ತಿಹಳ್ಳಿ, ಹೊಸಹಳ್ಳಿ, ಹಾಲ್ಕುರಿಕೆ ಸೇರಿದಂತೆ ನೊಣವಿನಕೆರೆ. ಕಸಬಾ ಹೋಬಳಿಯ ಬಹುತೇಕ ಭಾಗಗಳಲ್ಲಿ ತೆಂಗಿನ ಸುಳಿ ಮುರಿದು ಬೀಳುತ್ತಿದ್ದು. ಕೆಲವು ಭಾಗಗಳಲ್ಲಿ ನುಸಿ ರೋಗದ ಲಕ್ಷಣಗಳು ಹೆಚ್ಚಾಗುತ್ತಿದೆ. ಚೆನ್ನಾಗಿ ಬೆಳೆದಿರುವ ತೆಂಗಿನ ಮರದ ಹಸಿರು ಗರಿಗಳು ಏಕಾಏಕಿ ನೆಲಕ್ಕೆ ಬೀಳುತ್ತಿವೆ. ರೋಗಕ್ಕೆ ತುತ್ತಾದ ಕೆಲವು ದಿನಗಳಲ್ಲಿಯೇ ಮರದ ಸುಳಿ ಮುರಿದು ಬೀಳುತ್ತಿದೆ. ಹಲವು ವರ್ಷಗಳ ಕಾಲ ಕಷ್ಟಪಟ್ಟು ಬೆಳೆಸಿದ ತೆಂಗಿನ ಮರಗಳನ್ನು ಉಳಿಸಿಕೊಳ್ಳುವುದು ಹೇಗೆ ಎಂಬ ಚಿಂತೆ

ಉದಯವಾಹಿನಿ ಚಿತ್ರ

ರೈತರನ್ನು ಕಾಡುತ್ತಿದೆ.

ಸುಳಿ ಮುರಿದ ಮರಗಳಲ್ಲಿ ದಪ್ಪ ಹುಳುಗಳಿರುವುದು ರೈತರ ಗಮನಕ್ಕೆ ಬಂದಿದೆ. ಮರದ ಸುಳಿ ಮುರಿದು ಬಿದ್ದ ಬಳಿಕ ಅದನ್ನು ಪರಿಶೀಲಿಸಿದಾಗ ಸುಳಿಯ ಒಳಭಾಗದಲ್ಲಿ 3 ಇಂಚು ದಪ್ಪವಿರುವ ಕಪ್ಪು ತಲೆಯ, ಬಿಳಿ ಹೊಟ್ಟೆ ಹೊಂದಿರುವ ಹುಳುಗಳು ಕಂಡುಬರುತ್ತಿವೆ ಎಂದು ರೈತರು ತಿಳಿಸಿದ್ದಾರೆ. ಆದರೆ, ಈ ಹುಳುಗಳ ನಿಖರ ಪ್ರಭೇದ ಯಾವುದು, ಸುಳಿ ಮುರಿದು ಬೀಳಲು ಆ ಹುಳುಗಳೇ ಕಾರಣವೇ ಎಂಬುದನ್ನು ತಜ್ಞರು ಪರಿಶೀಲಿಸಿ ದೃಢಪಡಿಸಬೇಕಾಗಿದೆ ಎನ್ನುತ್ತಾರೆ ರೈತರು. ತೋಟಗಾರಿಕೆ ಅಧಿಕಾರಿಗಳು ತಕ್ಷಣವೇ ತೆಂಗಿನ ತೋಟಗಳಿಗೆ ಭೇಟಿ ನೀಡಿ, ಸಮೀಕ್ಷೆ ನಡೆಸಬೇಕು. ರೈತರಿಗೆ ಉಚಿತ ತಾಂತ್ರಿಕ ಮಾರ್ಗದರ್ಶನ ಮತ್ತು ರೋಗ ನಿಯಂತ್ರಣಕ್ಕೆ ಔಷಧೋಪಚಾರ ಕ್ರಮ ತಿಳಿಸಬೇಕು. ಹಾನಿಯ ಪ್ರಮಾಣ ದಾಖಲಿಸಿ, ರೈತರಿಗೆ ಪರಿಹಾರ ನೀಡಬೇಕು ಎಂದು ತೆಂಗು ಬೆಳೆಗಾರರು ಆಗ್ರಹಿಸಿದ್ದಾರೆ.

ಹ್ಯಾಂಡಲ್ ಇಲ್ಲದ ಬೈಕ್‌ನಲ್ಲಿ ಗವಿಮಠದಿಂದ ಮೈಸೂರಿಗೆ ಬಂದ ಈರಣ್ಣ

• **ಉದಯವಾಹಿನಿ ಮೈಸೂರು:**

ಉದಯವಾಹಿನಿ ಚಿತ್ರ

ಬಾಗಲಕೋಟೆ ಜಿಲ್ಲೆ ಇಳಕಲ್‌ನ ಈರಣ್ಣ ಜಿ. ಕುಂದರಗಿಮಠ ಅವರು ಹ್ಯಾಂಡಲ್ ಇಲ್ಲದ ವಿಶೇಷ ಬೈಕ್ ಚಲಾಯಿಸಿಕೊಂಡು ಬಂದು ಸಾಹಸ ಮೆರೆದರು. ದಸರಾ ಹಬ್ಬದ ಪ್ರಯುಕ್ತ ಈ ಯಾನ ಕೈಗೊಂಡಿದ್ದ ಅವರು, ಕೊಪ್ಪಳ ಜಿಲ್ಲೆ ಗವಿಮಠದಿಂದ ಆರಂಭಿಸಿದ್ದರು. ಸೋಮವಾರ ಬೆಳಿಗ್ಗೆ 7.30ಕ್ಕೆ ಅಲ್ಲಿಂದ ಹೊರಟ್ಟಿದ್ದರು. ಮಂಗಳವಾರ ಇಲ್ಲಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗಿದ್ದರು. ನಮ್ಮ ಹಬ್ಬ ನಮ್ಮ ಸಂಸ್ಕೃತಿ ಎನ್ನುವ ಘೋಷವಾಕ್ಯದೊಂದಿಗೆ ಸವಾರಿ ಕೈಗೊಂಡರು. ಸುಮಾರು 460 ಕಿ.ಮೀ.ವರೆಗೆ ಹ್ಯಾಂಡಲ್ ಇಲ್ಲದ ಬೈಕ್ ಓಡಿಸಿದರು. ಗವಿಮಠದಿಂದ ಹೊಸಪೇಟೆ, ಕೂಡ್ಲಗಿ, ಚಿತ್ರದುರ್ಗ, ಹಿರಿಯೂರು, ಶಿರಾ, ತುಮಕೂರು, ಕುಣಿಗಲ್, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ, ಮೈಸೂರಿನ ಅರಮನೆಯ ಮಾರ್ಗವಾಗಿ 3,489 ಅಡಿ ಎತ್ತರದಲ್ಲಿರುವ ಚಾಮುಂಡಿಬೆಟ್ಟದ ಅಪಾಯಕಾರಿಯಾದ ತಿರುವುಗಳನ್ನು ಕ್ರಮಿಸಿದರು. ಬಳಿಕ ಚಾಮುಂಡಿಬೆಟ್ಟದ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು. ಈರಣ್ಣ ಸಾಹಸಕ್ಕೆ ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಅಭಿವೃದ್ಧಿ ಹೆಸರಿನಲ್ಲಿ ಕಾಮಗಾರಿ: ನೀರಿನ ಕಟ್ಟೆಗಳ ಮೂಲ ಸ್ವರೂಪಕ್ಕೆ ಧಕ್ಕೆ

• **ಉದಯವಾಹಿನಿ ಚಿಕ್ಕನಾಯಕನಹಳ್ಳಿ:**

ಪಟ್ಟಣದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಪ್ರತೀಕಗಳಾಗಿರುವ ವೆಂಕಣ್ಣನ ಕಟ್ಟೆ, ತುರ್ಕರ ಕಟ್ಟೆ, ಬಳೇಗಾರ ನಿಂಗಯ್ಯನ ಕಟ್ಟೆಗಳು ಇಂದು ಅಭಿವೃದ್ಧಿಯ ದುರಂತದ ನೆರಳಿನಲ್ಲಿ ತಮ್ಮ ಮೂಲ ಸ್ವರೂಪವನ್ನೇ ಕಳೆದುಕೊಳ್ಳುತ್ತಿವೆ. ನೀರಿನ ಸಂಗ್ರಹಣೆ, ಜಲಸಂರಕ್ಷಣೆ ಉದ್ದೇಶದಿಂದ ನಿರ್ಮಿಸಲಾಗಿದ್ದ ಕಟ್ಟೆಗಳು ಜನಜೀವನದ ಅವಿಭಾಜ್ಯ ಅಂಗಗಳಾಗಿದ್ದವು. ಮಳೆನೀರನ್ನು ಸಂಗ್ರಹಿಸುವುದು, ಅಂತರ್ಜಲ ಮಟ್ಟವನ್ನು ಕಾಪಾಡುವುದು ಮತ್ತು ಸುತ್ತಮುತ್ತಲಿನ ಪರಿಸರ ಸಮತೋಲನದಲ್ಲಿಡುವುದು ಇವುಗಳ ಪ್ರಮುಖ ಉದ್ದೇಶವಾಗಿತ್ತು. ಆದರೆ, ಪ್ರಸ್ತುತ ಅಭಿವೃದ್ಧಿ ಹೆಸರಿನಲ್ಲಿ ಕೈಗೊಳ್ಳುವ ಕಾಮಗಾರಿಗಳು ಜಲಮೂಲಗಳ ನೈಸರ್ಗಿಕ ಅಸ್ತಿತ್ವಕ್ಕೆ ಧಕ್ಕೆಯುಂಟು ಮಾಡಿದೆ. ಸಾರ್ವಜನಿಕರ ಜೀವನಾಡಿಯಾಗಿದ್ದ ಈ ಕಟ್ಟೆಗಳು ಇಂದು ಅನೈರ್ಮಲ್ಯ, ಒತ್ತುವರಿಗೆ ಸಿಲುಕಿವೆ. ಅಭಿವೃದ್ಧಿ ಹೆಸರಿನಲ್ಲಿ ಕಟ್ಟೆಗಳನ್ನು ಒತ್ತುವರಿ ಮಾಡಿಕೊಂಡಿದ್ದು, ಇದರೊಂದಿಗೆ ಕಸ–ಕಡ್ಡಿ ಹಾಗೂ ಹಳೆ ಮನೆಗಳ ಗೋಡೆ ಮಣ್ಣು ಮೊದಲಾದ ತ್ಯಾಜ್ಯಗಳನ್ನು ತಂದು ಕಟ್ಟೆಗಳಿಗೆ ಸುರಿಯುವ ಮೂಲಕ ಅವುಗಳನ್ನು ಮುಚ್ಚಲಾಗುತ್ತಿದೆ. ಅಭಿವೃದ್ಧಿ ಕಾಮಗಾರಿಗಳ ನೆಪದಲ್ಲಿ ಕಟ್ಟೆಗಳಿಗೆ ನೀರು ಹರಿದು ಬರುತ್ತಿದ್ದ ನೈಸರ್ಗಿಕ ಮಾರ್ಗಗಳನ್ನು ಮುಚ್ಚಲಾಗಿದೆ. ಇದರ ಪರಿಣಾಮವಾಗಿ, ನೀರಿನ ಒಳಹರಿವು ನಿಂತುಹೋಗಿ ಜಲಮೂಲಗಳು

ಉದಯವಾಹಿನಿ ಚಿತ್ರ

> ನೀರು ಹರಿಯುವ ಮಾರ್ಗಗಳು ಮುಚ್ಚಿಹೋಗಿವೆ. ನಿಯಮಗಳ ಪ್ರಕಾರ ಸೂಕ್ತ ಕ್ರಮ ಕೈಗೊಂಡು ಕೆರೆ–ಕಟ್ಟೆಗಳಿಗೆ ನೀರು ಸರಾಗವಾಗಿ ಹರಿದುಬರಲು ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗುವುದು
> –ಮಮತಾ ಎಂ. ತಹಶೀಲ್ದಾರ್

ಬತ್ತುವ ಹಂತ ತಲುಪಿವೆ. ವಿಶೇಷವಾಗಿ ವೆಂಕಣ್ಣನ ಕಟ್ಟೆಯ ಬಳಿ ಉದ್ಯಾನ ನಿರ್ಮಿಸುವ ಭರದಲ್ಲಿ ಕಟ್ಟೆಯ ಮೂಲ ಸ್ವರೂಪವನ್ನೇ ಸಂಪೂರ್ಣವಾಗಿ ಬದಲಾಯಿಸಲಾಗಿದೆ.

ಅಷ್ಟೇ ಅಲ್ಲದೆ, ನಿರ್ಮಿಸಿದ ಉದ್ಯಾನವನ್ನು ಸಹ ಸೂಕ್ತ ನಿರ್ವಹಣೆ ಇಲ್ಲದೆ ನಿರ್ಲಕ್ಷಿಸಲಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಪಟ್ಟಣದ ಈ ಐತಿಹಾಸಿಕ ಕಟ್ಟೆಗಳು ತಮ್ಮ ಅಸ್ತಿತ್ವ ಕಳೆದುಕೊಂಡು ಕೇವಲ ಹೆಸರಿಗೆ ಮಾತ್ರ ಉಳಿಯುವ ಆತಂಕ ಎದುರಾಗಿದೆ.

ಪೊಲೀಸ್ ಹುತಾತ್ಮರ ದಿನಾಚರಣೆ

• **ಉದಯವಾಹಿನಿ ಮಡಿಕೇರಿ:**

ಇಲ್ಲಿನ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆ ಬುಧವಾರ ನಡೆಯಿತು.ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಮಾತನಾಡಿ, ಆರೋಗ್ಯಕರ ಸಮಾಜ ನಿರ್ಮಿಸುವುದಲ್ಲಿ ಪೊಲೀಸರ ಪಾತ್ರ ಅತಿ ಮುಖ್ಯ ಎಂದರು.ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಮಾತನಾಡಿ, ರಾಜ್ಯದ ಐವರು ಸೇರಿದಂತೆ ದೇಶದಲ್ಲಿ ಹುತಾತ್ಮರಾದ 154 ಮಂದಿ ಪೊಲೀಸರ ಹೆಸರನ್ನು ವಾಚಿಸಿದರು.1959ರ ಅಕ್ಟೋಬರ್ 21ರಂದು ಲಡಾಖ್ ಸಮೀಪ ಚೀನಾ ಸೈನಿಕರು ದಾಳಿ ನಡೆಸಿದಾಗ ಎದೆಗುಂದದೆ ಹೋರಾಡಿದ ಸಿಆರ್ ಪಿಎಫ್ ನ 10 ಮಂದಿ ಪೊಲೀಸರು ವೀರಮರಣವನ್ನಪ್ಪಿದರು. 9 ಮಂದಿ ಪೊಲೀಸರು ಗಾಯಗೊಂಡು ಸೆರೆಯಾದರು. ಈ ಘಟನೆಯ ನೆನಪಿಗೆ ಪೊಲೀಸ್ ಹುತಾತ್ಮರ ದಿನಾಚರಣೆ ಆಚರಿಸಲಾಗುತ್ತದೆ ಎಂದರು. ಪೊಲೀಸ್ ವಾದ್ಯವೃಂದದವರು ಅಬೈಡ್ ವಿತ್ ಗೀತೆಯನ್ನು ನುಡಿಸಿದರು. ಮೂರು ಸುತ್ತು ಗುಂಡು ಹಾರಿಸಿ, ಪೊಲೀಸ್ ಧ್ವಜವನ್ನು ಅರ್ಧ ಮಟ್ಟಕ್ಕೆ ಇಳಿಸಿ ಗೌರವ ಸಲ್ಲಿಸಲಾಯಿತು.

ಅರಣ್ಯಾಧಿಕಾರಿಗಳಿಗೆ ಬೆದರಿಕೆ; ಸಚಿವ ರಾಮಲಿಂಗಾರೆಡ್ಡಿ ತಿರುಗೇಟು

ಅಧಿಕಾರಿಗಳ ಮೇಲೆ ದೂರು ಕೊಟ್ಟು ಎಫ್ಐಆರ್, ದೌರ್ಜನ್ಯ ಕೇಸ್ ಹಾಕುವುದು ಸರಿಯಲ್ಲ.ದುರುದ್ದೇಶಪೂರ್ವಕವಾಗಿ ಸಾಮಾನ್ಯ ಪ್ರಜೆಯ ಮೇಲೂ ಹಾಕಬಾರದು

• **ಉದಯವಾಹಿನಿ ಕೋಲಾರ:**

ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ದೌರ್ಜನ್ಯ ಪ್ರಕರಣ ದಾಖಲಿಸುವುದಾಗಿ ಬೆದರಿಸಲು ಆಗುವುದಿಲ್ಲ. ಉದ್ದೇಶಪೂರ್ವಕವಾಗಿ ಅಥವಾ ದುರುದ್ದೇಶಪೂರ್ವಕವಾಗಿ ಆ ರೀತಿ ಮಾಡಿದರೆ ರಾಜ್ಯದಲ್ಲಿ

1 : ಸಮಸ್ಯೆ ಇರುವುದು ನನ್ನ ಗಮನಕ್ಕೆ ಬಂದಿದೆ
2 : ಅನುಕೂಲವಾಗಿ ವರ್ತಿಸಿಲ್ಲ ಎಂಬ ಕಾರಣಕ್ಕೆ
3 : ಕರ್ತವ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ

ಯಾವ ಅಧಿಕಾರಿಯೂ ಕೆಲಸ ಮಾಡಲು ಆಗುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಹಾಗೂ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಅರಣ್ಯ ಇಲಾಖೆ ವಿಚಾರವಾಗಿ ಕೆಲವೊಂದು ಸಮಸ್ಯೆ ಇರುವುದು ನನ್ನ ಗಮನಕ್ಕೆ ಬಂದಿದೆ. ಆದರೆ, ಯಾವುದೇ ಇಲಾಖೆಯ ಅಧಿಕಾರಿಗಳಿರಲಿ ಕಾನೂನು ಚೌಕಟ್ಟಿನಲ್ಲೇ ಕೆಲಸ ಮಾಡಬೇಕು' ಎಂದು ಎಚ್ಚರಿಸಿದರು. ಅಧಿಕಾರಿಗಳ ಮೇಲೆ ದೂರು ಕೊಟ್ಟು ಎಫ್ಐಆರ್, ದೌರ್ಜನ್ಯ ಕೇಸ್ ಹಾಕುವುದು ಸರಿಯಲ್ಲ. ದುರುದ್ದೇಶಪೂರ್ವಕವಾಗಿ ಸಾಮಾನ್ಯ ಪ್ರಜೆಯ ಮೇಲೂ ಹಾಕಬಾರದು.

ಉದಯವಾಹಿನಿ ಚಿತ್ರ

ಅಧಿಕಾರಿ ಮೇಲೂ ಹಾಕಬಾರದು. ಯಾರೋ ಅಧಿಕಾರಿಗಳು ತಮಗೆ ಅನುಕೂಲವಾಗಿ ವರ್ತಿಸಿಲ್ಲ ಎಂಬ ಕಾರಣಕ್ಕೆ ಕೇಸ್ ಹಾಕಲು ಹೋಗಬಾರದು. ಇಂತಹ ಬೆದರಿಕೆಗಳಿಂದ ಅಧಿಕಾರಿಗಳು ಸ್ವತಂತ್ರವಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ.

ಇಂತಹ ನಡೆಗಳನ್ನು ಸರ್ಕಾರ ಸಹಿಸುವುದಿಲ್ಲ ಎಂದರು. ಅರಣ್ಯಾಧಿಕಾರಿಗಳು ಸಾಮೂಹಿಕ ರಾಜೀನಾಮೆ ವಿಚಾರವಾಗಿ ತಮ್ಮನ್ನು ಭೇಟಿಯಾಗಿದ್ದರು ಎಂದು ತಿಳಿಸಿದರು.

ಅರಣ್ಯ ಒತ್ತುವರಿ ತೆರವಿಗೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಬೆಂಬಲ ನೀಡುತ್ತಿಲ್ಲ ಎಂಬ ಡಿಸಿಎಫ್ ಆರೋಪದ ಬಗ್ಗೆ ಪ್ರತಿಕ್ರಿಯಿಸಿ,

> 'ಹಿಂದೆ ಬಿಜೆಪಿ, ಜೆಡಿಎಸ್‌ನವರು ಸಿದ್ದರಾಮಯ್ಯ ಅವರನ್ನು ಬಯ್ಯುತ್ತಿದ್ದರು. ಈಗ ಅವರೆಲ್ಲಾ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ರಾಜಕಾರಣದಲ್ಲಿ ಈ ರೀತಿಯ ಪಿತೂರಿ ಮಾಡಬಾರದು. ಯಾವ ಸಾಮಾನ್ಯ ಪ್ರಜೆಗಾಗಲಿ, ಸಣ್ಣ ನಾಯಕನಿಗಾಗಲಿ ಈ ರೀತಿ ಆಗಬಾರದು. ನಮ್ಮ ರಾಜ್ಯದಲ್ಲಷ್ಟೇ ಅಲ್ಲ, ದೇಶದಲ್ಲೇ ಆಗಬಾರದು' ಎಂದು ಹೇಳಿದರು.
> –ಅರಣ್ಯ ಸಚಿವ ರಾಮಲಿಂಗಾರೆಡ್ಡಿ

'ಒಂದು ವೇಳೆ ಖಾಸಗಿ ಜಮೀನನ್ನು ಅರಣ್ಯ ಎಂದು ನೋಟಿಫೈ ಮಾಡಿದ್ದರೆ ಕಾನೂನು ಚೌಕಟ್ಟಿನಲ್ಲಿ ಬಿಡಿಸಿಕೊಳ್ಳಬೇಕು. ಈ ವಿಚಾರವಾಗಿ ಮುಖ್ಯ ಕಾರ್ಯದರ್ಶಿ ಹಾಗೂ ಮುಖ್ಯಮಂತ್ರಿ ಜತೆ ಮಾತನಾಡುತ್ತೇನೆ' ಎಂದರು.

ಅರಣ್ಯ ಒತ್ತುವರಿ ತೆರವಿಗೆ ಅಡಚಣೆ ಆಗುತ್ತಿದೆ ಎಂಬ ಇಲಾಖೆಯ ಅಧಿಕಾರಿಗಳ ದೂರಿನ ಬಗ್ಗೆ ಮಾತನಾಡಿ, ಈ ಸಂಬಂಧ ಎರಡು ದಿನಗಳಲ್ಲಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳುತ್ತೇನೆ ಎಂದ ಹೇಳಿದರು. ಉಪವಿಭಾಗಾಧಿಕಾರಿಯು ಕಂದಾಯ ಇಲಾಖೆಯ ದಾಖಲೆ ತಿದ್ದುಪಡಿ ಮಾಡಿ 340 ಎಕರೆ ಗೋಮಾಳಕ್ಕೆ ಸೇರಿಸಿರುವುದರ ಸಂಬಂಧ ನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ನಾನು 37 ವರ್ಷಗಳಿಂದ ಶಾಸಕನಾಗಿದ್ದೇನೆ. 2008ರವರೆಗೂ

> ಕಂದಾಯ ಇಲಾಖೆಯವರೂ ಕೂಡ ಕಾನೂನು ಚೌಕಟ್ಟಿನಲ್ಲೇ ಕೆಲಸ ಮಾಡಬೇಕು. ಅವರಿಗೆ ಇರುವ ಅಧಿಕಾರವನ್ನು ಮಾತ್ರ ಚಲಾಯಿಸಬೇಕು. ಇಲ್ಲದ ಅಧಿಕಾರ ಚಲಾಯಿಸಲು ಯಾರಿಗೂ ಹಕ್ಕಿಲ್ಲ, ನನಗೂ ಹಕ್ಕಿಲ್ಲ. ನಾನು ಕೂಡ ನನ್ನ ಅಧಿಕಾರ ವ್ಯಾಪ್ತಿಯಲ್ಲೇ ಕೆಲಸ ಮಾಡಬೇಕು ಎಂದರು.
> –ಅರಣ್ಯ ಸಚಿವ ರಾಮಲಿಂಗಾರೆಡ್ಡಿ

ರಾಜಕಾರಣ ಉತ್ತಮ ವಾತಾವರಣದಲ್ಲಿತ್ತು. ಯಾವುದೇ ಪಕ್ಷದವರೂ ಕೆಸರೆರಚಾಟ ಮಾಡುತ್ತಿರಲಿಲ್ಲ. ಅಶ್ಲೀಲವಾಗಿ ಬೈಯುತ್ತಿರಲಿಲ್ಲ. ಇತ್ತೀಚೆಗೆ ಸಾಮಾಜಿಕ ಜಾಲತಾಣ ಬಂದ ಮೇಲೆ ರಾಜಕಾರಣ ಹೊಲಸಾಗಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ಬೇಸರ ವ್ಯಕ್ತಪಡಿಸಿದರು. 2008ರಿಂದ ಈ ರೀತಿ ಆಗಿದೆ ಎಂದರೆ ಬಿಜೆಪಿ ಸರ್ಕಾರದಿಂದಲೇ ಎಂಬ ಪ್ರಶ್ನೆಗೆ, 'ಬಿಜೆಪಿ ಸರ್ಕಾರ ಎಂದು ಅಲ್ಲ, ಆ ಸಮಯದಿಂದ ರಾಜಕೀಯ ಹೊಲಸು ಶುರುವಾಯಿತು. ಬಿಜೆಪಿಯವರು ಹಿಂದೆ ಬಾಗಿಲಿನಿಂದ ಅಧಿಕಾರಕ್ಕೆ ಬಂದ ವಿಚಾರ ಎಲ್ಲರಿಗೂ ಗೊತ್ತು. ಬಿಜೆಪಿಗೆ ಎರಡು ಸಲವೂ ಬಹುಮತ ಬಂದಿರಲಿಲ್ಲ. ಒಂದು ಸಲ 100, ಇನ್ನೊಂದು ಸಲ 104 ಸ್ಥಾನ ಬಂದಿತ್ತು. ಶಾಸಕರ ರಾಜೀನಾಮೆ ಕೊಡಿಸಿ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದಿದ್ದರು. ಮುಂಬೈಗೆ ಹೋದವರು ತಡೆಯಾಜ್ಞೆ ತೆಗೆದುಕೊಂಡಿದ್ದಾರೆ' ಎಂದರು.

ಇದೇ ಮೊದಲ ಬಾರಿಗೆ ವಜ್ರಮುಷ್ಟಿ ಕಾಳಗ ರದ್ದು

ಉದಯವಾಹಿನಿ ಚಿತ್ರ

• **ಉದಯವಾಹಿನಿ ಮೈಸೂರು:**

ನವರಾತ್ರಿಯ 11ನೇ ದಿನ ರಾಜವಂಶಸ್ಥರ ಶರನ್ನವರಾತ್ರಿಯ ವಿಜಯದಶಮಿ ಪೂಜೆಗಳು ಸಾಂಪ್ರದಾಯಿಕವಾಗಿ ನಡೆದವು.ಬೆಳಗ್ಗೆಯಿಂದಲೇ ಅರಮನೆಯಲ್ಲಿ ಸಾಂಪ್ರದಾಯಿಕ ಧಾರ್ಮಿಕ ಕಾರ್ಯಗಳು ಆರಂಭವಾಗಿದ್ದು, ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು ಸೇರಿದಂತೆ ಬೆಳ್ಳಿ ಪಲ್ಲಕ್ಕಿಗೆ ಪೂಜೆ ನಡೆಯಿತು.

ಆನಂತರ ಕಲ್ಯಾಣ ಮಂಟಪದಲ್ಲಿ ಪೂಜೆ ಸಲ್ಲಿಸಿದ ರಾಜವಂಶಸ್ಥ ಯದುವೀರ್ ಒಡೆಯರು ರಾಜ ಪರಂಪರೆಯ ಪುರಾತನ ಆಯುಧಗಳೊಂದಿಗೆ ಪಟ್ಟದ ಆನೆ, ನಿಶಾನೆ ಆನೆ ಅರಮನೆ ಆನೆಗಳ ಜೊತೆಗೆ ಮಂಗಲ ವಾದ್ಯಗಳೊಂದಿಗೆ ವಿಜಯಯಾತ್ರೆಯನ್ನ ಹೊರಟರು. ಭುವನೇಶ್ವರಿ ದೇವಸ್ಥಾನದ ಆವರಣದಲ್ಲಿ ಇರುವ ಬನ್ನಿಮರಕ್ಕೆ ಪೂಜೆ ಸಲ್ಲಿಸಿ ಅರಮನೆಗೆ ವಾಪಸ್ಸಾದರು. ಈ ಮೂಲಕ 11 ದಿನಗಳ ಶರನ್ನವರಾತ್ರಿಗೆ ತೆರೆಬಿದ್ದಿತ್ತು.

ಮೊದಲ ಬಾರಿಗೆ ಜಟ್ಟಿಕಾಳಗ ರದ್ದು: ಸಾಂಪ್ರದಾಯಿಕವಾಗಿ ಅರಮನೆಯಿಂದ ಯದುವೀರ ಒಡೆಯರ್ ವಿಜಯಯಾತ್ರೆ ಹೊರಡುವ ಮುನ್ನ ಅಂಬಾ ವಿಲಾಸ ಅರಮನೆ ಆವರಣದ ಕಲ್ಯಾಣ ತೊಟ್ಟಿಯಲ್ಲಿ ರೋಚಕ ವಜ್ರಮುಷ್ಟಿ ಕಾಳಗ ಸಂಪ್ರದಾಯದಂತೆ ನಡೆಯಬೇಕಿತ್ತು. ಆದರೆ, ಸಮನ್ವಯದ ಕೊರತೆಯಿಂದ ರದ್ದಾಗಿದೆ.

ಬೆಂಗಳೂರಿನ ಚೇತನ್ ಜಟ್ಟಿ– ಮೈಸೂರಿನ ಮಹೇಶ್ ಜಟ್ಟಿ ಮತ್ತು ಚನ್ನಪಟ್ಟಣದ ತೇಜಸ್ ಜಟ್ಟಿ – ಚಾಮರಾಜನಗರದ ಸತೀಶ್ ಜಟ್ಟಿ ನಡುವೆ ವಜ್ರಮುಷ್ಟಿ ಕಾಳಗ ನಡೆಯಬೇಕಿತ್ತು. ಇದಕ್ಕಾಗಿ ಜಟ್ಟಿಗಳು, ಉಸ್ತಾದ್‌ಗಳು ಅರಮನೆಗೆ ಬಂದಿದ್ದರು. ಆದರೆ, ಪೊಲೀಸರು ಅವರನ್ನು ಒಳಗೆ ಬಿಟ್ಟಿಲ್ಲ ಎಂಬ ಆರೋಪ ಕೇಳಿಬಂದಿದೆ. ಈ ವೇಳೆ ಜಟ್ಟಿಗಳು ಮತ್ತು ಪೊಲೀಸರ ನಡುವೆ ತೀವ್ರ ವಾಗ್ವಾದ ನಡೆದಿದೆ ಎಂದು ಆರೋಪಿಸಲಾಗಿದೆ.

ಮೈಸೂರು ಅರಮನೆಯಲ್ಲಿ ಆಯುಧ ಪೂಜೆ ಹೇಗಿತ್ತು

• **ಉದಯವಾಹಿನಿ ಮೈಸೂರು :**

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಇಂದು ಮಂಗಳವಾರ ಮೈಸೂರು ಅರಮನೆಯಲ್ಲಿ ಆಯುಧ ಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ರಾಜಮನೆತನದ ಆಯುಧಗಳು ಹಾಗೂ ಪ್ರಾಣಿ–ಪಕ್ಷಿಗಳನ್ನು ವಿಶೇಷ ಪೂಜೆಗಾಗಿ ಕೋಡಿ ಸೋಮೇಶ್ವರ ದೇವಸ್ಥಾನಕ್ಕೆ ಕೊಂಡೊಯ್ಯಲಾಯಿತು.

ರಾಜಮನೆತನದ ಆನೆ ಶ್ರೀಕಂಠ ಮತ್ತು ಅರಮನೆಯ ಧಾರ್ಮಿಕ ಸಮಾರಂಭಗಳಲ್ಲಿ ರಾಜಮನೆತನದ ಧ್ವಜವನ್ನು ಹೊರುವ ಏಕಲವ್ಯ ಸೇರಿದಂತೆ ವಿವಿಧ ಪ್ರಾಣಿಗಳಿಗೆ ಪೂಜಾ ವಿಧಿವಿಧಾನಗಳ ಸಂದರ್ಭದಲ್ಲಿ ಗೌರವ ಸಲ್ಲಿಸಲಾಯಿತು. ಮಹಾರಾಜ ಯದುವೀರ್ ದತ್ತ ಒಡೆಯರ್ ಕುಟುಂಬದ ಸದಸ್ಯರು ಹಾಗೂ ಅರಮನೆಯ ಸಿಬ್ಬಂದಿ ಸಾಂಪ್ರದಾಯಿಕ ರಾಜವಸ್ತ್ರಗಳನ್ನು ಧರಿಸಿ ದೇವಸ್ಥಾನದಲ್ಲಿ ನಡೆದ ಪೂಜೆಯಲ್ಲಿ ಪಾಲ್ಗೊಂಡಿದ್ದರು.

ರಾಜಮನೆತನದ ಆನೆ ಮತ್ತು ಕುದುರೆಯನ್ನು ಸಂಗೀತ ವಾದ್ಯಗಳ ತಂಡ ಹಾಗೂ ಸಾಂಪ್ರದಾಯಿಕ ರಾಜ ಆಯುಧಗಳೊಂದಿಗೆ ಅರಮನೆಯಿಂದ ಕೋಡಿ ಸೋಮೇಶ್ವರ ದೇವಸ್ಥಾನಕ್ಕೆ ಕೊಂಡೊಯ್ಯಲಾಯಿತು. ಅಲ್ಲಿ ಧಾರ್ಮಿಕ ಶುದ್ಧೀಕರಣ ವಿಧಿವಿಧಾನಗಳನ್ನು ನೆರವೇರಿಸಿ, ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮೆರವಣಿಗೆ ಅರಮನೆಗೆ ಮರಳಿತು.

ಅರಮನೆಯಲ್ಲಿ ನಡೆಯುವ ಆಯುಧ ಪೂಜೆಯ ಸಂದರ್ಭದಲ್ಲಿ ಪುರಾತನ ಕತ್ತಿಗಳು, ಈಟಿಗಳು ಮತ್ತು ಗುರಾಣಿಗಳು ಸೇರಿದಂತೆ ರಾಜಮನೆತನದ ಆಯುಧಗಳಿಗೆ ಪೂಜೆ ಸಲ್ಲಿಸಲಾಗುತ್ತದೆ. ಇದರೊಂದಿಗೆ ರಾಜಮನೆತನಕ್ಕೆ ಸೇರಿದ ಆನೆ, ಹಸು, ಒಂಟೆ ಮತ್ತು ಕುದುರೆಗಳಿಗೂ ಹಾಗೂ ರಾಜಮನೆತನದ ವಾಹನಗಳಿಗೂ ಪೂಜೆ ನೆರವೇರಿಸಲಾಗುತ್ತದೆ. ಬೆಳಗ್ಗೆ 6 ಗಂಟೆಗೆ ಚಂಡಿ ಹೋಮ ಆರಂಭವಾಗಲಿದ್ದು, ಬೆಳಗ್ಗೆ 11.32ರಿಂದ 11.52ರವರೆಗಿನ ಶುಭ ಮುಹೂರ್ತದಲ್ಲಿ ಆಯುಧ ಪೂಜೆ ನೆರವೇರಿಸಲು ನಿಗದಿಪಡಿಸಲಾಗಿತ್ತು.

ಅಪರೂಪದ ಜಲಪಕ್ಷಿ ನೆಲೆವೀಡು: ವೇಮಗಲ್‌ನ ಐತಿಹಾಸಿಕ

• **ಉದಯವಾಹಿನಿ ವೇಮಗಲ್:**

ಐತಿಹಾಸಿಕ ಸೊಮಬುಂದಿ ಅಗ್ರಹಾರ (ಎಸ್.ಅಗ್ರಹಾರ) ಕೆರೆಗೆ ಕೆ.ಸಿ.ವ್ಯಾಲಿ ಯೋಜನೆ ಸಂಸ್ಕರಿಸಿದ ನೀರು ನಿರಂತರವಾಗಿ ಹರಿದು ಬಂದ ಬಳಿಕ ಕೆರೆಗೆ ಜೀವಕಳೆ ಬಂದಿದೆ. ನೂರಾರು ಜಾತಿಯ ದೇಶ–ವಿದೇಶಿ ಜಲಪಕ್ಷಿಗಳ ತಾಣವಾಗಿ ಕಂಗೊಳಿಸುತ್ತಿದೆ.ಸುಮಾರು ಒಂದು ಸಾವಿರ ಹೆಕ್ಟೇರ್ ಪ್ರದೇಶದ ಈ ಕೆರೆಯಲ್ಲಿ ವರ್ಷವಿಡೀ ಕೆ.ಸಿ.ವ್ಯಾಲಿ ನೀರಿನ ಹರಿವಿನಿಂದ ಸಮೃದ್ಧವಾಗಿದೆ. ಸುತ್ತಲೂ ದಟ್ಟವಾಗಿ ಬೆಳೆದಿರುವ ಹಸಿರು ಬಿದಿರು ಮೆಳೆಗಳು ಹಾಗೂ ಚೌಗು ಪ್ರದೇಶ ಪಕ್ಷಿ ಸಂಕುಲಕ್ಕೆ ಅತ್ಯಂತ ಸುರಕ್ಷಿತ ಆವಾಸಸ್ಥಾನವಾಗಿದೆ. ಕೆರೆ ಒಡಲಿನಲ್ಲಿರುವ ಒಣಗಿದ ಮರದ ಕೊಂಬೆಗಳು ಮತ್ತು ನೈಸರ್ಗಿಕ ಬಂಡೆಗಳ ಮೇಲೆ ನೀರು ಕಾಗೆಗಳು ಹಿಂಡುಹಿಂಡಾಗಿ ಕುಳಿತು ರೆಕ್ಕೆ ಒಣಗಿಸಿಕೊಳ್ಳುತ್ತಿದ್ದರೆ, ಅಪರೂಪದ ಕತ್ತಿಬಾಲದ ಹಕ್ಕಿಗಳು ಬಂಡೆ ಮೇಲೆ ನಿಂತು ಬೇಟೆಯಾಡುವ ರಮಣೀಯ ದೃಶ್ಯ ಪ್ರಕೃತಿ ಪ್ರಿಯರ ಕಣ್ಮನ ಸೆಳೆಯುತ್ತಿದೆ. ನೀರಿನ ಮಧ್ಯೆ ಬಿಳಿ ಕೊಕ್ಕರೆ, ಬೆಳ್ಳಕ್ಕಿ ಬಿದಿರಿನ ಸಾಲು ಹಾಗೂ ದಟ್ಟ ಮರಗಳ ಕೊಂಬೆಗಳ ಮೇಲೆ ಸಾಲಾಗಿ ವಿಶ್ರಮಿಸುತ್ತಿದ್ದು, ಚೌಗು ನೀರಿನಲ್ಲಿ ಚುರುಕಾಗಿ ಈಜುವ ನೀರು ಕೋಳಿಗಳ ದಂಡು ಜೀವ ವೈವಿಧ್ಯದ ಶ್ರೀಮಂತಿಕೆಯನ್ನು ಸಾರುತ್ತಿದೆ. ಈ ವಿಶಾಲ ಕರೆ ಸ್ಥಳೀಯ ಪಕ್ಷಿಗಳಿಗೆ ಮೀನು ಮತ್ತು ಜಲಚರಗಳ ಸಮೃದ್ಧ ಆಹಾರ ಒದಗಿಸಿದೆ. ಪ್ರವಾಸಿಗರು, ಪಕ್ಷಿ ಪ್ರಿಯರನ್ನು ಸೆಳೆಯುತ್ತಿರುವ ಈ ಕೆರೆ ಕೇವಲ ನೀರಾವರಿಗೆ ಸೀಮಿತಗೊಳಿಸದೆ ಪಕ್ಷಿಗಳ ನೈಸರ್ಗಿಕ ಆವಾಸಕ್ಕೆ ಧಕ್ಕೆ ಬಾರದಂತೆ ಸಮಗ್ರ ಪಕ್ಷಿ ಸಂರಕ್ಷಣೆ ತಾಣವಾಗಿ ಅಭಿವೃದ್ಧಿಪಡಿಸಬೇಕೆಂಬುದು ಪರಿಸರ ಪ್ರೇಮಿಗಳು ಮತ್ತು ಸ್ಥಳೀಯರ ಒತ್ತಾಯ.

ಉದಯವಾಹಿನಿ ಚಿತ್ರ

ಅಂತರಾಳದಿಂದ..
EDITORIAL

ಬಿಪಿಎಲ್ ಪಡಿತರ ಚೀಟಿ: ಪದೇಪದೆ ಇ-ಕೈವೈಸಿ ಸಲ್ಲದು



ಉದಯವಾಹಿನಿ ಚಿತ್ರ

ಅನರ್ಹ ಬಿಪಿಎಲ್ ಕಾರ್ಡ್‌ಗಳಿಗೆ ಕತ್ತರಿ ಹಾಕುವ ಪ್ರಕ್ರಿಯೆಯನ್ನು ಮತ್ತಷ್ಟು ವಿಸ್ತರಿಸಿರುವ ರಾಜ್ಯದ ಆಹಾರ, ನಾಗರಿಕ ಪೂರೈಕೆ ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಕಳೆದೊಂದು ವರ್ಷದ ಅವಧಿಯಲ್ಲಿ ಇ-ಕೆವೈಸಿ ಮಾಡಿರುವ ಬಿಪಿಎಲ್ ಪಡಿತರ ಕಾರ್ಡ್‌ದಾರರನ್ನು ಕಡ್ಡಾಯವಾಗಿ ಇ-ಕೆವೈಸಿ ಪರಿಶೀಲನೆಯ ವ್ಯಾಪ್ತಿಗೆ ತಂದಿದೆ. ರಾಜ್ಯ ಸರಕಾರದ ಈ ನಿರ್ಧಾರದಿಂದ ರಾಜ್ಯದಲ್ಲಿ ಮತ್ತೆ ಪಡಿತರದಾರರು ಇ-ಕೆವೈಸಿಗಾಗಿ ನ್ಯಾಯಬೆಲೆ ಅಂಗಡಿಗಳ ಮುಂದೆ ಸರದಿ ಸಾಲಲ್ಲಿ ನಿಲ್ಲುವ ಇಲ್ಲವೇ ಆ್ಯಪ್ ಮೂಲಕ ಇ-ಕೆವೈಸಿ ಮಾಡಿಸಿಕೊಳ್ಳುವ ಅನಿವಾರ್ಯತೆಗೆ ಸಿಲುಕಿದ್ದಾರೆ. ಆ ಬಳಿಕ ರಾಜ್ಯ ಸರಕಾರ ಹೊಸ ಆ್ಯಪ್ ಬಿಡುಗಡೆ ಮಾಡಿದೆಯಾದರೂ ಇ-ಕೆವೈಸಿ ಮಾಡಲು ಬಿಪಿಎಲ್ ಕಾರ್ಡ್ ದಾರರು ಇತರರಿಗೆ ದುಂಬಾಲು ಬೀಳುವ ಪರಿಸ್ಥಿತಿ ಇದೆ.

ಮತ್ತೊಂದೆಡೆ ಆ್ಯಪ್ ಬಿಡುಗಡೆ ಮಾಡುತ್ತಿದ್ದಂತೆಯೇ ಕೆಲವು ನ್ಯಾಯಬೆಲೆ ಅಂಗಡಿಗಳಲ್ಲಿ ಇ-ಕೆವೈಸಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿರುವ ದೂರುಗಳು ಕೇಳಿಬಂದಿವೆ. 10 ವರ್ಷ, 5 ವರ್ಷಕ್ಕಿಂತಲೂ ಅಧಿಕ ಸಮಯದಿಂದ ಇ-ಕೆವೈಸಿ ಬಾಕಿ ಉಳಿಸಿಕೊಂಡವರು ಇ-ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಹೆಣಗಾಡುತ್ತಿರುವಾಗ ರಾಜ್ಯ ಸರಕಾರ ಏಕಾಏಕಿಯಾಗಿ ವರ್ಷದ ಹಿಂದೆ ಕೆವೈಸಿ ಆಗಿದ್ದರೂ ಮತ್ತೆ ಪರಿಶೀಲನೆಗೆ ಒಳಪಡಬೇಕು ಎಂದು ಆದೇಶಿಸಿರುವುದು ಬಿಪಿಎಲ್ ಕಾರ್ಡ್‌ದಾರರನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡಿದಂತಾಗಿದೆ.

ಸರಕಾರ ವಿವಿಧ ಕಾರಣಗಳಿಗಾಗಿ ಬಿಪಿಎಲ್ ಪಡಿತರದಾರರನ್ನು ಪದೇಪದೆ ಇಂಥ ಧೃಢೀಕರಣಗಳಿಗೆ ಸೂಚಿಸುತ್ತಿರುವುದು ಸಮಂಜಸವಲ್ಲ.

ಪ್ರಸಕ್ತ ವರ್ಷದಲ್ಲಂತೂ ಜನರು ಚುನಾವಣಾ ಆಯೋಗದ ಎಸ್‌ಐಆರ್, ವಿವಿಧ ಉದ್ದೇಶಗಳಿಗಾಗಿ ಇ-ಕೆವೈಸಿ.. ಹೀಗೆ ಸರಕಾರಿ ಕಚೇರಿ, ಬ್ಯಾಂಕ್, ಸೊಸೈಟಿಗಳಿಗೆ ಅಲೆದಾಡಿ ಬೇಸತ್ತು ಹೋಗಿದ್ದಾರೆ. ಮೊಬೈಲ್ ಆಪ್‌ನಲ್ಲಿ ಮನೆಯಲ್ಲಿ ಕುಳಿತೇ ಈ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬಹುದು ಎಂಬ ಸಮಜಾಯಿಷಿ ನೀಡುತ್ತಾ ಬರಲಾಗಿದೆಯಾದರೂ ಹತ್ತು ಹಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಇವುಗಳು ಮತ್ತಷ್ಟು ಕ್ಲಿಷ್ಟಕರ ಪ್ರಕ್ರಿಯೆಗಳಾಗಿ ಮಾರ್ಪಟ್ಟಿವೆ.

ಪ್ರಾರಂಭಿಕ ಹಂತದಲ್ಲಿಯೇ ಸಂಬಂಧಿತ ಇಲಾಖೆಗಳು ಕಾನೂನು ನಿಯಮಾವಳಿಗಳಿಗೆ ಅನುಸಾರವಾಗಿಯೇ ಈ ಎಲ್ಲಾ ಪ್ರಕ್ರಿಯೆಗಳನ್ನು ನ್ಯಾಯಸಮ್ಮತವಾಗಿ ನಡೆಸಿದ್ದೇ ಆದಲ್ಲಿ ಪದೇಪದೆ ಇಂತಹ ಪ್ರಕ್ರಿಯೆಗಳನ್ನು ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗದು. ಬಿಪಿಎಲ್ ಕಾರ್ಡ್ ನೀಡಿದ ಬಳಿಕ ಜರಡಿ ಹಿಡಿಯುವ ಬದಲಾಗಿ ಕಾರ್ಡ್ ನೀಡುವ ಮುನ್ನವೇ ನೈಜ ಫಲಾನುಭವಿಯನ್ನು ಗುರುತಿಸುವ ಕಾರ್ಯವನ್ನು ಸರಕಾರ ಸಂಬಂಧಿತ ಇಲಾಖೆಗಳ ಮೂಲಕ ಪ್ರಾಮಾಣಿಕವಾಗಿ ಮಾಡಬೇಕಿದೆ.

> ಆರಂಭದಲ್ಲಿ ಸರಕಾರ ನೀಡುವ ಉಚಿತ ಪಡಿತರ ಸಾಮಗ್ರಿಗಳು ಅನರ್ಹರ ಪಾಲಾಗುವುದನ್ನು ತಪ್ಪಿಸಲು ಕೇಂದ್ರ ಸರಕಾರದ ಸೂಚನೆಯಂತೆ ಈ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ರಾಜ್ಯ ಸರಕಾರ ಸಮರ್ಥನೆ ನೀಡುತ್ತಿದೆ. ನಕಲಿ ಮತ್ತು ಅಕ್ರಮ ಬಿಪಿಎಲ್ ಪಡಿತರ ಕಾರ್ಡ್‌ಗಳನ್ನು ರದ್ದುಗೊಳಿಸುವ ರಾಜ್ಯ ಸರಕಾರದ ನಿರ್ಧಾರ ಮತ್ತು ಕ್ರಮ ಸ್ವಾಗತಾರ್ಹವಾದುದಾದರೂ ಇ-ಕೆವೈಸಿ ನೆಪದಲ್ಲಿ ಪದೇಪದೆ ಪಡಿತರ ಚೀಟಿದಾರರನ್ನು ನ್ಯಾಯಬೆಲೆ ಅಂಗಡಿಗಳ ಮುಂದೆ ಸರದಿಯಲ್ಲಿ ನಿಲ್ಲುವಂತೆ ಮಾಡುತ್ತಿರುವುದು ಸರಿಯಲ್ಲ. ರಾಜ್ಯದಲ್ಲಿ ಇ-ಕೆವೈಸಿ ಪ್ರಕ್ರಿಯೆ ಆರಂಭಗೊಂಡಾಗಿನಿಂದ ಬಿಪಿಎಲ್ ಪಡಿತರದಾರರು ಪಟ್ಟ ಸಂಕಷ್ಟ ಅಷ್ಟಿಷ್ಟಲ್ಲ. ನಾನಾ ಕಾರಣಗಳಿಂದಾಗಿ ವಿವಿಧೆಡೆ ನೆಲೆಸಿರುವ ಬಿಪಿಎಲ್ ಕುಟುಂಬಗಳ ಸದಸ್ಯರು ತಮ್ಮ ಇ-ಕೆವೈಸಿ ಮಾಡಲು ತಮ್ಮೆಲ್ಲ ಕೆಲಸ ಕಾರ್ಯಗಳನ್ನು ಬಿಟ್ಟು ರಜೆ ಹಾಕಿ ಊರಿಗೆ ತೆರಳಿದರೂ ತಾಂತ್ರಿಕ ಮತ್ತು ಇನ್ನಿತರ(?) ಕಾರಣಗಳಿಂದಾಗಿ ದಿನಗಟ್ಟಲೆ ನ್ಯಾಯಬೆಲೆ ಅಂಗಡಿಯ ಮುಂದೆ ನಿಲ್ಲುವ ಪರಿಸ್ಥಿತಿ ಸೃಷ್ಟಿಯಾಗಿತ್ತು.

ಭಾರತ ರತ್ನ ಶ್ರೀಪಂಡಿತ್ ಮದನ ಮೋಹನ ಮಾಳವೀಯರವರ 164 ನೇ ವರ್ಷದ ಜನ್ಮಜಯಂತಿ

ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಪಂ.ಮ.ಮೋ. ಮಾಳವೀಯರವರು 1861 ಡಿಸೆಂಬರ್ 25 ರಂದು ಅಲಹಾಬಾದ್ ನಲ್ಲಿ ಜನಿಸಿದರು. ಬಡತನ ಕುಟುಂಬವಾದರೂ ಶಿಸ್ತು, ಸಂಯಮ,ಶಾಂತಿ, ಸ್ವಾಭಿಮಾನ,ಸದ್ಬುದ್ಧಿ, ಸದ್ಗುಣ,ಮಿಗಿಲಾಗಿ ಸಂಸ್ಕಾರಕ್ಕೆ ಕೊರತೆಯಿರಲಿಲ್ಲ. ಈ ರೀತಿ ಕುಟುಂಬ ಇದ್ದರಿಂದಲೇ ಮಾಳವೀಯರು ಬಹಳ ಎತ್ತರಕ್ಕೆ ಬೆಳೆದು ದೊಡ್ಡ ಆಲದಮರವಾದರು.

ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಕಾನೂನು ಪದವೀಧರರಾಗಿ ಶಿಕ್ಷಣ ಶ್ರೀಮಂತರಾದರು ಹಾಗೂ ಶಿಕ್ಷಣಕ್ಕೆ ಜಾಸ್ತಿ ಒತ್ತುಕೊಟ್ಟರು. ಶಿಕ್ಷಣದಿಂದಲೇ ಸಮಾಜ ಪ್ರಗತಿ ಸಾಧ್ಯ ಎಂದು ಒತ್ತಿ ಹೇಳಿದರು.

ಚಂದಾ ಹಣವನ್ನು ಸಂಗ್ರಹಿಸಿ 1919ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಇದರ ಉಪಕುಲಪತಿಗಳಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಹಲವು ವಿದ್ಯಾರ್ಥಿನಿಲಯಗಳು, ಭಾರತಿ ಭವನ ಸ್ಥಾಪಿಸಿದರು.

ಅವರ ಭಾಷಣಗಳು ಪಾಂಡಿತ್ಯಪೂರ್ಣವಾಗಿದ್ದು ತರ್ಕಬದ್ಧವಾಗಿರುತ್ತಿತ್ತು. ಮಹಾತ್ಮ ಗಾಂಧೀಜಿಯವರು ಮಾಳವೀಯರನ್ನು ತಮ್ಮ ಹಿರಿಯ ಅಣ್ಣನೆಂದು ಭಾವಿಸಿದ್ದರಲ್ಲದೆ,ಅವರೊಬ್ಬ ಅಗ್ರಮಾನ್ಯ ಸ್ವಾತಂತ್ರ್ಯ ಹೋರಾಟಗಾರರೆಂದು ತಿಳಿದಿದ್ದರು.

ಭಾರತ ದ್ವೇಷ,ಹಿಂಸೆ, ರಕ್ತಪಾತಗಳಿಗೆ ಎಡೆ ಕೊಡದೆ ಅಹಿಂಸಾತ್ಮಕ ಚಳುವಳಿಯ ಮೂಲಕವೇ ಸ್ವಾತಂತ್ರ್ಯ ಗಳಿಸಬೇಕೆಂಬುದು ಮಾಳವೀಯರ ಅಪೇಕ್ಷೆಯಾಗಿದ್ದಿತು.



ಮಾಳವೀಯರು ಹಿಂದೂ ಧರ್ಮದ ಅಭಿಮಾನಿಗಳಾಗಿದ್ದರೂ ಅನ್ಯಮತ(?) ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಅಧಿಕಾರವೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಹಿಂದೂ ಮುಸ್ಲಿಮರಲ್ಲಿ ಪರಸ್ಪರ,ಸ್ನೇಹ,ಸೌಹಾರ್ದ, ಸಹಬಾಳ್ವೆಯನ್ನು ಅವರು ಅಪೇಕ್ಷಿಸಿದ್ದರು.

ಮುಸ್ಲಿಂ ಬಂಧುಗಳು ಸಹ ಮಾಳವೀಯರ ವಿಚಾರಗಳನ್ನು ಗೌರವಿಸುತ್ತಿದ್ದರು.

ಮಾಳವೀಯರು ತಮ್ಮ ಜೀವಿತ ಕೊನೆಯ ಗಳಿಗೆಯವರೆಗೂ ರಾಷ್ಟ್ರದ ಹಿತಕ್ಕಾಗಿ ಹಾಗೂ ಸ್ವಾತಂತ್ರ್ಯಕ್ಕಾಗಿ ದುಡಿದರು. ತಮ್ಮ ನಾಡಿನ ಮೇಲಿನ ಅಗಾಧ ಪ್ರೀತಿಯಿಂದಾಗಿ ಅವರು ತಮ್ಮೆಲ್ಲಾ ವೈಯಕ್ತಿಕ ಕಷ್ಟಗಳನ್ನು ಸಹಿಸಿದರು. ಅವರು ನಾಡಿಗಾಗಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಮಹನೀಯರಾಗಿದ್ದರು.

ಮಾಳವೀಯರು ನವೆಂಬರ್ 12, 1946 ರಂದು ವಯೋಸಹಜ ಕಾರಣ ತನ್ನ 85ನೇ ವಯಸ್ಸಿನಲ್ಲಿ ಇಹ ಲೋಕವನ್ನು ತ್ಯಜಿಸಿದರು.

ಭಾರತ ಸರ್ಕಾರ ಅವರಿಗೆ ಮರಣೋತ್ತರವಾಗಿ 2015ರಲ್ಲಿ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು.

ಇಂತಹ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಭಾರತರತ್ನ ಪಂಡಿತ ಮದನ ಮೋಹನ ಮಾಳವೀಯರವರ 164 ನೇ ವರ್ಷದ ಜನ್ಮ ಜಯಂತಿಯನ್ನು ಭಾರತೀಯರಾದ ನಾವು ಅವರನ್ನು ಸ್ಮರಿಸಿ ನೆನೆಯುತ್ತಾ ಶ್ರದ್ಧಾಭಕ್ತಿಯಿಂದ ಆಚರಿಸುವ ಮೂಲಕ ಅವರ ಸರಳ ಬದುಕು,ಆದರ್ಶಗಳನ್ನು ಪಾಲಿಸುವ ಸಂಕಲ್ಪ ಮಾಡೋಣ.

ಪರೀಕ್ಷಾ ಸಂಭ್ರಮ
ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381
15

ಬೆನ್ನು ನೋವದಂತೆ ಓದುವ ಕಲೆ

ಇದಕ್ಕೆ ಸರಳ ಪರಿಹಾರವೆಂದರೆ 90-90-90 ಸೂತ್ರ. ಕುಳಿತಾಗ ಸೊಂಟ, ಮೊಣಕಾಲು ಮತ್ತು ಪಾದಗಳು 90 ಡಿಗ್ರಿ ಕೋನದಲ್ಲಿರಬೇಕು. ಬೆನ್ನು ಕುರ್ಚಿಗೆ ಸಂಪೂರ್ಣವಾಗಿ ತಾಗಿರಲಿ, ಸೊಂಟದ ಹಿಂದೆ ಸಣ್ಣ ದಿಂಬನ್ನು ಇರಿಸಬಹುದು. ಪುಸ್ತಕ ಕಣ್ಣಿನಿಂದ ಸುಮಾರು 30 ಸೆಂ.ಮೀ ದೂರದಲ್ಲಿ ಮತ್ತು ಕಣ್ಣಿನ ನೇರದಲ್ಲಿರಲಿ. ಲ್ಯಾಪ್‌ಟಾಪ್ ಬಳಸುತ್ತಿದ್ದರೆ ಅದನ್ನು ಪುಸ್ತಕಗಳ ಮೇಲೆ ಇಟ್ಟು ಎತ್ತರಿಸಿ.

ಹೊಟ್ಟೆ ಮೇಲೆ ಮಲಗಿ, ಕಾಲು ಮಡಚಿ, ಕುತ್ತಿಗೆ ಬಗ್ಗಿಸಿ ಓದುವುದು ಅನೇಕರ ಅಭ್ಯಾಸವಾಗಿದೆ. ಆರಂಭದಲ್ಲಿ ಹಿತವೆನಿಸಿದರೂ ಕೆಲವೇ ದಿನಗಳಲ್ಲಿ ಬೆನ್ನು ನೋವು, ಕತ್ತು ಹಿಡಿದುಕೊಳ್ಳುವುದು ಮತ್ತು ಭುಜದ ಸೆಟೆತ ಕಾಣಿಸಿಕೊಳ್ಳುತ್ತದೆ. ತಪ್ಪು ಭಂಗಿಯಿಂದ ಬೆನ್ನುಮೂಳೆಯ ಡಿಸ್ಕ್ ಮೇಲೆ ಒತ್ತಡ ಹೆಚ್ಚಾಗಿ ನರಗಳು ಸೆಟೆದುಕೊಳ್ಳುತ್ತವೆ, ರಕ್ತಸಂಚಾರ ನಿಧಾನವಾಗಿ ಏಕಾಗ್ರತೆ ಚೆದುರುತ್ತದೆ.

ಪ್ರತಿ 40 ನಿಮಿಷಕ್ಕೊಮ್ಮೆ ಎರಡು ನಿಮಿಷಗಳ ವಿರಾಮ ಅಗತ್ಯ. ಎದ್ದು ನಡೆಯಿರಿ, ಎರಡೂ ಕೈಗಳನ್ನು ಮೇಲಕ್ಕೆತ್ತಿ ಚಾಚಿ, ಕುತ್ತಿಗೆಯನ್ನು ನಿಧಾನವಾಗಿ ವೃತ್ತಾಕಾರದಲ್ಲಿ ತಿರುಗಿಸಿ. ಕಣ್ಣಿನ ಆಯಾಸ ತಪ್ಪಿಸಲು 20-20-20 ನಿಯಮವನ್ನು ಪಾಲಿಸಿ, ಪ್ರತಿ 20 ನಿಮಿಷಕ್ಕೊಮ್ಮೆ 20 ಅಡಿ ದೂರದಲ್ಲಿರುವ ವಸ್ತುವನ್ನು 20 ಸೆಕೆಂಡು ನೋಡಿ. ಅಧ್ಯಯನವು ದೀರ್ಘ ಪ್ರಯಾಣದಂತೆ. ದೇಹವೇ ವಾಹನ, ಭಂಗಿಯೇ ಅದರ ಟಯರ್ ಅಲೈನ್‌ಮೆಂಟ್. ಅಲೈನ್‌ಮೆಂಟ್ ಸರಿಯಿದ್ದರೆ ಮಾತ್ರ ಪ್ರಯಾಣ ಸುಖಕರವಾಗಿರುತ್ತದೆ. ಬೆನ್ನು ಉಳಿದರೆ ಮಾತ್ರ ಅಂಕ ಉಳಿಯುತ್ತದೆ ಎಂಬುದನ್ನು ನೆನಪಿನಲ್ಲಿಡಿ.

ದಸರೆ ರಜೆ ಕಳೆಯಿತು ಬನ್ನಿ ಮಕ್ಕಳೇ... ತೆರೆದಿದೆ ಶಾಲೆ ನಿಮಗಾಗಿ!

ಬಂಗಾರದ ಬಿಸಿಲು, ತಂಪಾದ ಗಾಳಿ, ಊರೆಲ್ಲಾ ಹಬ್ಬದ ಸಂಭ್ರಮ, ಅಜ್ಜಿಯ ಮನೆಯ ಅಕ್ಕರೆ, ಹೊಸ ಬಟ್ಟೆಗಳು, ತಿಂಡಿ-ತೀರ್ಥಗಳು ಹಾಗೂ ಆಟ-ಪಾಠಗಳ ನೆನಪುಗಳೊಂದಿಗೆ ಕಳೆದ ಹದಿನೈದರಿಂದ ಇಪ್ಪತ್ತು ದಿನಗಳ ಸುದೀರ್ಘ ದಸರೆ ರಜೆಯೂ ಇಂಪು ಮಧುರವಾಗಿ ಕಳೆದುಹೋಗಿದೆ. ರಜೆಯ ಖುಷಿಯಲ್ಲಿ ಮೈಮರೆತು, ಹಗಲಿರುಳು ಆಟೋಟಗಳಲ್ಲಿ ತೊಡಗಿದ್ದ ಪುಟಾಣಿಗಳಿಗೆ ಈಗ ಮತ್ತೆ ಶಾಲೆಯ ಗಂಟೆ ಬಾರಿಸಿದೆ. ಅಯ್ಯೋ, ರಜೆ ಮುಗಿದುಹೋತಲ್ಲಾ! ಎಂದು ಬೇಸರಿಸಿಕೊಳ್ಳುತ್ತಾ ಮುಖ ಬಾಡಿಸಿಕೊಂಡು ಕುಳಿತುಕೊಳ್ಳುವ ಮುಗ್ಧ ಮನಸ್ಸುಗಳಿಗೆ, ಶಾಲೆ ಎನ್ನುವುದು ಕೇವಲ ಶಿಕ್ಷೆಯ ಗೂಡಲ್ಲ, ಬದಲಿಗೆ ಜ್ಞಾನದ ದೇಗುಲ, ಆಟದ ಅಂಗಳ ಮತ್ತು ಬದುಕಿನ ಪಾಠಶಾಲೆ ಎಂಬ ಭಾವನೆಯನ್ನು ತುಂಬಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಶಾಲೆ ಎಂಬ ಜ್ಞಾನದ ತವರುಮನೆ: ಮಕ್ಕಳೇ, ಶಾಲೆ ಎಂದರೆ ಕೇವಲ ನಾಲ್ಕು ಗೋಡೆಗಳ ಕೊಠಡಿಯಲ್ಲ; ಅಲ್ಲಿ ನಿಮ್ಮ ಕನಸುಗಳು ಚಿಗುರುತ್ತವೆ, ಗೆಳೆತನದ ನಂಟು ಗಟ್ಟಿಯಾಗುತ್ತದೆ ಮತ್ತು ಅಕ್ಷರದ ಅಕ್ಷಯ ಪಾತ್ರೆ ತೆರೆದುಕೊಳ್ಳುತ್ತದೆ. ರಜೆಯ ದಿನಗಳಲ್ಲಿ ಮನೆಯಲ್ಲಿ ಅಮ್ಮನ ಬೈಗುಳ, ಅಪ್ಪನ ಗದರಿಕೆಯಿಲ್ಲದೆ ಸ್ವತಂತ್ರವಾಗಿ ಹಾರಾಡಿದ ನಿಮಗೆ, ಶಾಲೆಯ ನೆನಪು ತುಸು ಭಾರವೆನಿಸಬಹುದು. ಆದರೆ ಒಮ್ಮೆ ಯೋಚಿಸಿ ನಿಮ್ಮ ನೆಚ್ಚಿನ ಸ್ನೇಹಿತರು, ನಿಮ್ಮನ್ನು ಪ್ರೀತಿಯಿಂದ ಅಪ್ಪಿಕೊಳ್ಳುವ ಗುರುಗಳು, ದಿನವೂ ನಿಮ್ಮ ಕಿರುನಗೆಯಿಂದ ಕಳೆಕಟ್ಟುವ ತರಗತಿ ಕೊಠಡಿಗಳು ನಿಮ್ಮ ಬರುವಿಕೆಗಾಗಿ ಕಾತುರದಿಂದ ಕಾಯುತ್ತಿವೆ. ಶಾಲೆ ಎನ್ನುವುದು ನಿಮ್ಮನ್ನು ಬಂಧಿಸುವ ಸ್ಥಳವಲ್ಲ, ಬದಲಿಗೆ ಜಗತ್ತನ್ನು ಗೆಲ್ಲಲು ನಿಮಗೆ ರೆಕ್ಕೆಗಳನ್ನು ನೀಡುವ ಗೂಡು. **ಕಾಯುವಿಕೆಯ ಉತ್ಸಾಹ, ಬರುವಿಕೆಯ ಸಂಭ್ರಮ:** ಮಕ್ಕಳ ಮನಸ್ಸು ಹಕ್ಕಿಯ ಹಾಗೆ ಸ್ವಚ್ಛವಾದದ್ದು. ಅವರಿಗೆ ಶಾಲೆಯೆಂದರೆ ಕೇವಲ ಓದು-ಬರಹವಲ್ಲ, ಅಲ್ಲಿರುವ ಮೋಜು-ಮಸ್ತಿ. ಶಾಲೆಗೆ ಹೋಗುವ ಮುಂಜಾನೆ ಬ್ಯಾಗ್ ಭುಜಕ್ಕೇರಿಸಿಕೊಂಡು, ಸಮವಸ್ತ್ರ

ತೊಟ್ಟು, ಗೆಳೆಯರೊಂದಿಗೆ ಹರಟೆ ಹೊಡೆಯುತ್ತಾ ಸಾಗುವ ನಡಿಗೆಯೆ ಒಂದು ಸುಂದರ ಕಾವ್ಯ. ಮುಂದಿನ ರಜೆ ಯಾವಾಗ ಬರುತ್ತದೆ? ಎಂದು ಎಣಿಸುವ ಮಕ್ಕಳು, ಒಮ್ಮೊಮ್ಮೆ ಯಾವಾಗ ಮತ್ತೆ ಶಾಲೆ ತೆರೆಯುತ್ತದೆ, ನನ್ನ ಸ್ನೇಹಿತರನ್ನು ಯಾವಾಗ ಭೇಟಿಯಾಗಲಿ ಎಂದು ಉತ್ಸುಕರಾಗುವಂತಹ ವಾತಾವರಣವನ್ನು ನಾವು ಶಾಲೆಯಲ್ಲಿ ನಿರ್ಮಿಸಬೇಕು. ಶಿಕ್ಷಕರ ಪ್ರೀತಿಯ ನುಡಿಗಳು, ಆಟದ ಮೈದಾನದ ಒಡನಾಟ ಮತ್ತು ಹೊಸ ಹೊಸ ಚಟುವಟಿಕೆಗಳು ಮಕ್ಕಳಲ್ಲಿ ನಾಳೆ ಬೇಗ ಶಾಲೆಗೆ ಹೋಗಬೇಕು ಎಂಬ ಹಂಬಲವನ್ನು ಹುಟ್ಟುಹಾಕಬೇಕು. **ಮುಂಬರುವ ವಾರ್ಷಿಕ ಪರೀಕ್ಷೆಗೆ ಸಜ್ಜಾಗುವ ಸಮಯ:** ದಸರೆ ರಜೆ ಮುಗಿದು ಶಾಲೆ ಪುನರಾರಂಭಗೊಂಡಿದೆ ಎಂದರೆ, ಹೊಸ ಶೈಕ್ಷಣಿಕ ಸಾಲಿನ ದ್ವಿತೀಯಾರ್ಧಕ್ಕೆ ನಾವು ಕಾಲಿಟ್ಟಿದ್ದೇವೆ ಎಂದರ್ಥ. ಅಂದರೆ, ಮುಂಬರುವ ವಾರ್ಷಿಕ ಪರೀಕ್ಷೆಗಳಿಗೆ ಸಜ್ಜಾಗುವ ಸುಸಮಯ ಇದು. ರಜೆಯನಯನ್ನು ಬದಿಗಿಟ್ಟು, ಇನ್ನು ಮುಂದೆ ಪಠ್ಯಪುಸ್ತಕಗಳೊಂದಿಗೆ ಮೈತ್ರಿ ಬೆಳೆಸಿಕೊಳ್ಳಬೇಕಿದೆ. **ಪರೀಕ್ಷೆ ಎಂದರೆ ಭಯಪಡುವ ಭೂತವಲ್ಲ;** ಬದಲಿಗೆ ನಾವು ಕಲಿತದ್ದನ್ನು ಅಳೆದು ನೋಡುವ ಒಂದು ಸಣ್ಣ ಅಳತೆಗೋಲು ಅಷ್ಟೇ.ಇಂದಿನಿಂದಲೇ ಪ್ರತಿದಿನ ಸ್ವಲ್ಪ ಸಮಯವನ್ನು ಓದಿಗಾಗಿ ಮೀಸಲಿಡಿ. ತರಗತಿಯಲ್ಲಿ ಶಿಕ್ಷಕರು ಹೇಳಿಕೊಡುವ ಪಾಠಗಳನ್ನು ಅಂದೇ ಮನನ ಮಾಡಿಕೊಳ್ಳಿ. ಗಣಿತದ ಲೆಕ್ಕಗಳನ್ನು ಬಿಡಿಸಿ ನೋಡಿ, ವಿಜ್ಞಾನದ ಪ್ರಯೋಗಗಳನ್ನು ಅರ್ಥೈಸಿಕೊಳ್ಳಿ, ಕನ್ನಡ ಹಾಗೂ ಇತರೆ ಭಾಷೆಗಳಲ್ಲಿ ಸುಂದರವಾಗಿ ಬರೆಯುವ ಅಭ್ಯಾಸ ಮಾಡಿ. ಯಾವುದೇ ವಿಷಯವನ್ನು ಕಂಠಪಾಠ ಮಾಡದೆ, ಅರ್ಥೈಸಿಕೊಂಡು ಓದುವ ಹವ್ಯಾಸ ರೂಢಿಸಿಕೊಳ್ಳಿ. ಕಷ್ಟವೆನಿಸಿದ ವಿಷಯಗಳನ್ನು ಗುರುಗಳ ಬಳಿ ಮುಜುಗರವಿಲ್ಲದೆ ಕೇಳಿ ತಿಳಿದುಕೊಳ್ಳಿ. ಚಿಕ್ಕ ಚಿಕ್ಕ ಗುರಿಗಳನ್ನು ಇಟ್ಟುಕೊಂಡು ಓದಿದರೆ, ವಾರ್ಷಿಕ ಪರೀಕ್ಷೆಯಲ್ಲಿ ಯಶಸ್ಸು ನಿಮ್ಮ ಬೆನ್ನೇರಿ ಬರುವುದು ಖಂಡಿತ. ಮಕ್ಕಳೇ, ದಸರೆ ರಜೆಯ ಅಂದವಾದ ನೆನಪುಗಳನ್ನು ಮನಸ್ಸಿನಲ್ಲಿ ಭದ್ರವಾಗಿ ಕೂರಿಸಿ, ಈಗ ಹೊಸ ಉತ್ಸಾಹದಿಂದ ಶಾಲೆಯತ್ತ ಹೆಜ್ಜೆ ಹಾಕಿ. ನಿಮ್ಮ ಜ್ಞಾನದ ಹಸಿವನ್ನು ನೀಗಿಸಲು, ನಿಮ್ಮ ಭವಿಷ್ಯವನ್ನು ಉಜ್ವಲಗೊಳಿಸಲು ನಿಮ್ಮ ಶಾಲೆ ಎರಡು ಕೈ ಚಾಚಿ ನಿಮ್ಮನ್ನು ಸ್ವಾಗತಿಸಲು ಸಿದ್ಧವಾಗಿದೆ. ಬನ್ನಿ, ಆಟದೊಂದಿಗೆ ಪಾಠವನ್ನೂ ಪ್ರೀತಿಸೋಣ, ಗುರುಗಳ ಆಶೀರ್ವಾದದೊಂದಿಗೆ ವಾರ್ಷಿಕ ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಿ ಗೆದ್ದು ಬೀಗೋಣ. ಶಾಲೆ ಕೇವಲ ಜ್ಞಾನದ ಕಲಿಕಾ ಕೇಂದ್ರವಲ್ಲ, ಅದು ಬದುಕಿನ ಬಂಗಾರದ ಹಾದಿ!

ಡಾ. ಪ್ರಸನ್ನ ದೇವರ ಮಠ
ಅನಿಲಕುಮಾರ್, ಮಾಗಳ
ಪದವೀಧರ ಪ್ರಾಥಮಿಕ ಶಿಕ್ಷಕರು
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಮುದೇನೂರು,
ಹೂವಿನಹಡಗಲಿ,
ವಿಜಯನಗರ ಜಿಲ್ಲೆ

ರಾಮಾಯಣ

20. ಅಂಗದನು ವಜ್ರದಂಷ್ಟ್ರನನ್ನು ಕೊಂದದ್ದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ದುಶ್ಶಕುನಗಳಾಗುತ್ತಿದ್ದರೂ ಅದಾವುದನ್ನೂ ಲೆಕ್ಕಿಸದ ದಳಪತಿಯು ಸ್ವಾಮಿಕಾರ್ಯವನ್ನು ನಿರ್ವಹಿಸುವ ಉತ್ಸಾಹದಿಂದ ತನ್ನ ಕಡೆಯ ಅಖಿಳ ನಾಯಕರನ್ನೊಳಗೊಂಡ ಅಂಗದನು ನಿರ್ವಹಿಸುವ ಉತ್ಸಾಹದಿಂದ ತನ್ನ ಕಡೆಯ ಅಖಿಳ ನಾಯಕರನ್ನೊಳಗೊಂಡು ಅಂಗದನು ಕಾಯುತ್ತಿದ್ದ ದಕ್ಷಿಣ. ದ್ವಾರದ ವ ಬಂದ. ಅಲ್ಲಿ ನಿಂತು ತನ್ನ ಸೈನ್ಯಕ್ಕೆ ಸೂಚನೆಗಳನ್ನು ತರ ಒಡಾಡುತ್ತಿದ್ದ. ವಜ್ರದಂಷ್ಟನು ಕಪಿಭಟರಿಗೆ ಬಾಲಭಾಸ್ಕರನಂತೆದ! ದುಸ್ಸಹವೆನಿಸುವ ಅಸುರಬಲವನ್ನು. ಕಂಡ ಕಪಿನಾಯಕರು ಕೈಯಲ್ಲಿ ಆಯುಧಗಳು ಮರ ಮೊರಡಿಗಳನ್ನು ಹಿಡಿದುಕೊಂಡು ವೇಗವಾಗಿ ಚತತ ದಾನವಸೈನ್ಯದೆದುರು ನಿಂತು ಅವರನ್ನು ಮೂದಲಿಸತೊಡಗಿದರು. ಅವರ ಚಲನವಲನಗಳನ್ನು ಟಿಸುತಿದ್ದ ದೈತ್ಯರು ಹಾರಿ ಬಂದು ಕೈಯಲ್ಲಿದ್ದ ಕತ್ತಿ ತೋಮರ ಮುಂತಾದವುಗಳಿಂದ ಕಪಿಗಳ ಮೇಲೆ ದಾಳಿ ಮಾಡಿದರು. ತೋಮರಗಳಿಂದ ಇರಿಯುತ್ತ, ಬಿಂಡಿವಾಳ ಮುದ್ಗರ ಮುಸಲಗಳಿಂದ ಹೊಡೆಯುತ್ತ, ಕೋಲಬಳಗದ ಮಳೆಗರೆಯುತ್ತ ಬರುವ ಅವರ ಮೇಲೆ ಕಪಿನಾಯಕರು ಬಂಡೆಗಳಿಂದಲೇ ಆಕ್ರಮಿಸಿ ಕೆಲವರನ್ನು ಹೊಡೆದು, ಮರಗಳಿಂದ ಮತ್ತೆ ಕೆಲವರನ್ನು ಬಡಿದಿಟ್ಟರು. ಹೀಗೆ ಎರಡೂ ಪಕ್ಷಗಳ ನಡುವಣ ಘೋರಯುದ್ಧದಲ್ಲಿ ಅಸಂಖ್ಯ ರುಂಡಗಳುರುಳಿದುವು, ರಕ್ತದ ಕೋಡಿ ಹರಿಯಿತು. ಕೈಗೆ ಸಿಕ್ಕಿದವುಗಳನ್ನೆಲ್ಲ ಆಯುಧಗಳನ್ನಾಗಿ ಮಾಡಿಕೊಂಡು ಹೊಡೆದಾಡುವುದರಲ್ಲಿ ಕುಶಲರಾದ ಎರಡೂ ಕಡೆಯ ಯೋಧರು ಘೋರಕದನದಲ್ಲಿ ತೊಡಗಿಕೊಂಡರು. ತಲೆ ಸೀಳಿದ ಮತಂಗಗಳು, ಕಾಲುಡಿದು ಬಿದ್ದ ಕುದುರೆಗಳು, ಚಕ್ರಗಳು ಮುರಿದು ಬಿದ್ದ ರಥಗಳು, ಕೈಕಾಲುಗಳನ್ನು ಕಳೆದುಕೊಂಡು ಬಿದ್ದ ಯೋಧರು ಎಲ್ಲೆಲ್ಲಿಯೂ ಕಾಣುತ್ತಿದ್ದರು. ಒಂದು ಘಟ್ಟದಲ್ಲಿ ಕಪಿಸೈನ್ಯದ ಕೈ ಮೇಲಾಗಲು ಕಾಳರಕ್ಕಸಸೈನ್ಯವು ಹಿಂದೆಗೆಯ ತೊಡಗಿತು. ಅದನ್ನು ಕಂಡ ವಂಜ್ರದಂಷ್ಟನು ರೋಷತಾಳಿ ಬಿಲ್ಲು ಹಿಡಿದು ಯುದ್ಧಮಾಡಲು ಅನುವಾದ. ವಜ್ರಾಯುಧಗಳಂತಿರುವ ಬಾಣಗಳನ್ನು ಹೂಡಿ ಬಿಡಲು ಅನೇಕ ಶಾಖಾಮೃಗ ಸೈನಿಕರು ಧರೆಗುರುಳಿದರು. ಎಲ್ಲೆಡೆಗೆ ಹರಡಿದ ಅವನ ಹೊಸಮಸೆಯ ಬಾಣಗಳ ಹೊಡೆತಕ್ಕೆ ಅಂಜಿ ಕಪಿಭಟರು ಹಿಂದೆಗೆಯತೊಡಗಿದರು. ಆಗ ಅಂಗದನು ರೋಷದಿಂದ ಕೂಡಿ, ಏನಿದಚ್ಚರಿ! ರಕ್ಕಸನ ಉಪಟಳದಿಂದ ನಮ್ಮ ಸೇನೆ ಹಿಂದೆ ಸರಿಯುತ್ತಿದೆ. ನಮ್ಮ ಶೌರ್ಯೋನ್ನತಿಗಳೇನಾದುವು ಈ ನೊರಜಿಗೆ ಅಂಜುವುದೆ ಬಂಧುಗಳೇ, ಕೈಯಲ್ಲಿ ಮರಮೊರಡಿಗಳನ್ನು ಹಿಡಿಯಿರಿ, ಬೊಬ್ಬಿಡುತ್ತ ಶತ್ರುಗಳ ಮೇಲೆರಗಿರಿ, ನಮಗಲ್ಲದೆ ಗೆಲವು ಮತ್ತಾರಿಗೆ ದೊರೆಯಲು ಸಾಧ್ಯ ಎಂದು ಹುರಿದುಂಬಿಸಿದ. ತಮ್ಮ ಯುವರಾಜನ ಅವಲಂಬನದಿಂದ ಹುರಿಗೊಂಡ ಪವಗಸ್ಯನ್ಯವು ಮರಗಳಿಂದಲೂ ಬಂಡೆಗಳಿಂದಲೂ ಬೆಟ್ಟಗಳಿಂದಲೂ ಕೂಡಿ ಧೈರ್ಯದಿಂದ ಶತ್ರುಸಮೂಹದೊಳಗೆ ನುಗ್ಗಿ ಹೋರಾಡತೊಡಗಿತು. ತನ್ನ ಕಡೆಯ ಸೈನಿಕರು ಹೊಸ ಬಗೆಯ ಬಾಹುಯುದ್ಧಗಳನ್ನು ಮಾಡಿ ದೈತ್ಯರನ್ನು ಬವಣೆಗೊಳಿಸುತ್ತಲಿದ್ದರೆ, ಇತ್ತ ಅಂಗದನು ಮನೋಜವದಿಂದ ಹಾರಿ ಬಂದು ನಿಶಾಚರನ ಮುಂದೆ ನಿಂತು, ಹಿಂದೆಲ್ಲ ಮಹಾಬಲದೊಡನೆ ಬಂದು ಹೋರಾಡಿದ ವೀರರು ಹತರಾದರೂ ನೀನು ಮತ್ತೆ ಬಿಲ್ಲು ಹಿಡಿದು ಈಗ ಬಂದು ಸಾಯಬೇಕೆಂದು ಬಯಸಿದ್ದೀಯಾ ಮಾರಮ್ಮನಿಗೆ ಬಲಿಯಾಗಬೇಕಾದ ಕುರಿಯನ್ನು ಅನುಸರಿಸಿ ಕುರಿಗಳ ಹಿಂಡು ಬರುವಂತೆ, ಒಬ್ಬನು ಸತ್ತ ಬಳಿಕ ಮತ್ತೊಬ್ಬನು ಬಂದು ಸಾಯುತ್ತಿರುವ ನಿಮ್ಮ ದೈತ್ಯಕುಲವೇ ನಾಶವಾಗುವುದರಲ್ಲಿ ಸಂಶಯವಿಲ್ಲ. ಇವರೇನು ಮಹಾ, ಹುಲುಕಪಿಗಳೆಂದು ತಾತ್ಸಾರ ಮಾಡದೆ, ನಿನ್ನ ಶೌರ್ಯಪರಾಕ್ರಮಗಳನ್ನು ನನ್ನ ಮುಂದೆ ತೋರಿಸಿ ಜಯಸಿರಿಯ ಕೈಹಿಡಿದುಕೋ, ನೋಡೋಣ! ಎಂದು ಮೂದಲಿಸಿ, ತನ್ನ ಮುಷ್ಟಿಯನ್ನು ಬಿಗಿಗೊಳಿಸಿದ ಅಂಗದನು ದೈತ್ಯನ ರಥದ ಮೇಲೆ ಹಾರಿ ಅದನ್ನು ನೆಲಕ್ಕುರುಳಿಸಿಬಿಟ್ಟ. ತನ್ನ ತೇರು ಮಂದಿ ಬಿರು ವಜ್ರದಂಷ್ಟನು ಮತ್ತೊಂದು ತೇರನ್ನೇರಿ ಸಿಡಿಲಿನಂತೆ ಆರ್ಭಟಿಸುತ್ತ ಶಾಖಾಮೃಗಗಳು ನೆಲದ ಮೇಲೆ ನಿಲ್ಲದೆ ನಾಲ್ಕು ದಿಕ್ಕಿಗೂ ಹಾರಿಹೋಗುವಂತೆ ಬಾಣಪ್ರಯೋಗ ಮಾಗದ ತೂರಿ ಬರುವ ಜಾರು, ಬಿಂಡಿವಾಳಗಳು, ಶೂಲಗಳು, ಚಂದ್ರನಾಕಾರದ ಬಾಣಗಳನ್ನು ಬಿಟ್ಟು ದೈತ್ಯ ಯೋಧರು ಬೊಬ್ಬಿಟ್ಟರು.

ಚಿಮ್ಮುವ ರುಂಡಗಳು, ಚೀರಿಡುವ ಆನೆಕುದುರೆಗಳು, ಅಗಣಿತವಾದ ಶರೀರಗಳು, ಭಯ ಹುಟ್ಟಿಸಿ ಅಲ್ಲಲ್ಲಿ ಕುಣಿಯುವ ಅಟ್ಟೆಗಳು, ಸುರಿಯುವ ರಕ್ತವು ಹರಿಯುವ ವಾಹಿನಿಗಳು, ಸುರುಳಿಸುರುಳಿಯಾದ ಕರುಳುಗಳು, ಮಾಂಸಖಂಡ ಮಜ್ಜೆ ಮೇದಸ್ಸುಗಳು ಪರ್ವತಗಳಂತೆ ರಾಶಿ ರಾಶಿಯಾಗಿ ಬಿದ್ದು, ಅವುಗಳನ್ನು ತಿನ್ನಲೆಂದು ಮೃಗಗಳೂ ಪಿಶಾಚಗಳೂ ರಣಹದ್ದುಗಳೂ ಸುಳಿಯಲಾರಂಭಿಸಿದುವು.

ಮುಂದುವರೆಯುವುದು

ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ರಾಷ್ಟ್ರದಲ್ಲಿರುವ ಬಹುತೇಕ ಎಲ್ಲಾ ಯುವಕ-ಯುವತಿಯರ ಮನ:ಸ್ಥಿತಿ ಹಾಗೂ ಯುವಶಕ್ತಿ ಎತ್ತ ಸಾಗಿದೆ.?

ಜಗತ್ತಿನ ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿರುವ ನಮ್ಮ ಭಾರತ ರಾಷ್ಟ್ರ ಹಾಲಿ 140 ಕೋಟಿ ಜನಸಂಖ್ಯೆವುಳ್ಳ ಬೃಹತ್ ಪ್ರಜಾಪ್ರಭುತ್ವವುಳ್ಳ ರಾಷ್ಟ್ರ. ಸಮಾಜ ಮತ್ತು ಪ್ರಕೃತಿಯ ನಡುವೆ ಅವಿನಾಭಾವ ಸಂಬಂಧ ಇರುವಂತೆ ಮಾನವ ಬದುಕನ್ನು ಕಟ್ಟಿಕೊಳ್ಳಬೇಕು.ರಾಷ್ಟ್ರವು ವಿವಿಧತೆಯಲ್ಲಿ ಏಕತೆಉಳ್ಳ ಅನೇಕ ಜಾತಿ, ಧರ್ಮ, ಭಾಷೆ, ಪಂಗಡ, ಸಂಸ್ಕೃತಿ, ಸಂಪ್ರದಾಯ, ಆಚಾರ ವಿಚಾರ ಮಿಗಿಲಾಗಿ ಅನೇಕ ವೈರುಧ್ಯ ಮತ್ತು ವೈಶಿಷ್ಟ್ಯಗಳನ್ನ ಒಳಗೊಂಡಿರುವ ರಾಷ್ಟ್ರ.

ಈ ರಾಷ್ಟ್ರ ಹೀಗೆಯೇ ಇರಬೇಕೆಂದು ಈ ಹಿಂದಿನ ತಲೆಮಾರಿನ ಮಹಾನುಭಾವರು ಹಾಗೂ ಮಹಾತ್ಮರು ತಳಹದಿ,ತಳಪಾಯ ಹಾಕಿಕೊಟ್ಟು ಚಿರಸ್ಮರಣೀಯರಾಗಿದ್ದಾರೆ. ಯಾವುದನ್ನೂ ಸಹ ಬದಲಾವಣೆ ಮಾಡದ ಹಾಗೆ ಎಲ್ಲಾ ಧರ್ಮದವರ ಮನಸ್ಸು ಮತ್ತು ಹೃದಯ ಒಂದಾಗಿ ಈ ರಾಷ್ಟ್ರವನ್ನು ಅಳಿಸದ ಹಾಗೆ ಉಳಿಸಿ ಬೆಳೆಸಿ ಬಾಳಬೇಕೆಂಬುದೇ ಭಾರತಾಂಬೆಯ ಕನಸು. ಒಂದು ವೇಳೆ ಬದಲಾವಣೆ ಬಯಸಿದರೆ ರಾಷ್ಟ್ರದಲ್ಲಿ ರಕ್ತ ಕ್ರಾಂತಿ ಸಂಭವಿಸಬಹುದು. ಬಹುತೇಕ ಎಲ್ಲರೂ ಯಾರ ಮಾತನ್ನೂ ಸಹ ಕೇಳುವ ಕೇಳಿಸಿಕೊಳ್ಳುವ ಸೌಜನ್ಯ ಮತ್ತು ಸಹನೆ ಹಾಗೂ ತಾಳ್ಮೆಯನ್ನು ಕಳೆದುಕೊಂಡಿದ್ದಾರೆ. ಎಲ್ಲರೂ ಎಲ್ಲಾ ಧರ್ಮದವರು ನಮ್ಮ ನಮ್ಮ ಧರ್ಮವೇ ಶ್ರೇಷ್ಠ ಎಂದು ಸಮರ್ಥಿಸಿಕೊಂಡಿದ್ದಾರೆ ಆದರೆ ಭಾರತಾಂಬೆ ಒಪ್ಪುವುದಿಲ್ಲ. **ಉದಾಹರಣೆಗೆ:=** ಯಾವ ಧರ್ಮದಲ್ಲಿ ಹುಟ್ಟಿದೆಯೋ ಆ ಧರ್ಮದಲ್ಲಿ ಬದುಕು, ಆದರೆ ಅನ್ಯ ಧರ್ಮದ ಬಗ್ಗೆ ದ್ವೇಷಿಸದೇ ಪ್ರೀತಿಸುವುದನ್ನು ಕಲಿಯಿರಿ ಹಾಗೂ ಕಲಿಯುವುದನ್ನು ಮರೆಯಬೇಡಿ. ಈಗ ಹೇಗಿದಿಯೋ ಆ ರೀತಿ ಮುನ್ನಡೆಸಿಕೊಂಡು ಹೋಗಬೇಕು ಇದುವೇ ಈ ಭಾರತಾಂಬೆಯ ಧರ್ಮ. ಜಾತಿ ಮತ್ತು ಧರ್ಮದಿಂದ ದೇಶವನ್ನು ವಿಭಜನೆ ಮಾಡಿ ಚೂರು ಚೂರು ಮಾಡಬಾರದು. ಕಾರಣ ಈ ದೇಶದ ಒಂದು ಮಹಾನ್ ಶಕ್ತಿ ಹಾಗೂ ಮಹಿಮೆ. ಈ ಶಕ್ತಿ ಜಗತ್ತಿನ ಯಾವ ರಾಷ್ಟ್ರದಲ್ಲೂ ಸಹ ಕಂಡು ಬರುವುದಿಲ್ಲ. ಎಲ್ಲಾ ರಾಷ್ಟ್ರಕ್ಕೂ ನಮ್ಮ ರಾಷ್ಟ್ರವು ಒಂದು ಮಾದರಿ ಎಂದು ಯುವ ಪಡೆ ತೋರಿಸಬೇಕು ಆಗ ಹೆತ್ತ ತಾಯಿಗೆ ಮತ್ತು ಹೊತ್ತ ನಾಡಿಗೆ ಸಾರ್ಥಕದ ಬದುಕು. ಈ ರಾಷ್ಟ್ರವನ್ನ ಈ ಹಿಂದಿನ ಕಾಲದಿಂದಲೂ ಮಹಾನ್ ಮಾನವತಾವಾದಿಗಳು, ದಾರ್ಶನಿಕರು, ಮಹಾನ್ ವಿದ್ವಾನ್ ಪಂಡಿತರು, ಹಿರಿಯಜ್ಞಾನಿಗಳು ಹಾಗೂ ಜ್ಞಾನವಂತರು ಒಳ್ಳೆಯ ಉದ್ದೇಶ ಇಟ್ಟುಕೊಂಡೇ ಈ ನಾಡನ್ನ ಕಟ್ಟಿದ್ದಾರೆ.

ಬಾಲ್ಯದಲ್ಲಿ ಮಕ್ಕಳು ಸಂಸ್ಕಾರದ ಜೊತೆಗೆ ವಿದ್ಯೆ ಕಲಿತ ನಂತರ ಯೌವ್ವನ ಪ್ರಾಪ್ತವಾಗುತ್ತದೆ ನಂತರ ಅವರೆಲ್ಲಾ ಯುವಶಕ್ತಿಯ ಪಡೆಗಳಾಗಿ ಪರಿಣಮಿಸುತ್ತಾರೆ. ಯುವಶಕ್ತಿಯೇ ಈ ರಾಷ್ಟ್ರವನ್ನು ಕಟ್ಟುವ ಶಕ್ತಿ ಈ ಯುವ ಪಡೆಗೆ ಮಾತ್ರ ಇದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಯುವಕರಲ್ಲಿ ಶಕ್ತಿ,ಯುಕ್ತಿ, ಧೈರ್ಯ,ಸ್ಥೈರ್ಯ, ಭರವಸೆ, ನಂಬಿಕೆ ಇಲ್ಲದೇ ದೇಶ ಬಡವಾಗಿದೆ.ಈ ರಾಷ್ಟ್ರವನ್ನ ನೆರೆ ಶತ್ರು ರಾಷ್ಟ್ರಗಳಿಂದ ರಕ್ಷಿಸಬೇಕಾದರೆ ರಾಷ್ಟ್ರದ ಆದಾಯದಲ್ಲಿ ಮೂರನೇ ಒಂದು ಭಾಗವನ್ನು ಭೂದಳ,ನೌಕಾದಳ ಹಾಗೂ ವಾಯುದಳಕ್ಕೆ ಮೀಸಲಿಟ್ಟು ನವಯುವಕ- ಯುವತಿಯರನ್ನು ಮೂರು ಪಡೆಗಳಿಗೆ ನೇಮಿಸಿಕೊಂಡು ಅವರೆಲ್ಲಾ ಎಚ್ಚರಿಕೆಯಿಂದ ರಾಷ್ಟ್ರವನ್ನ ರಕ್ಷಿಸಲು ಸದಾ ಸನ್ನದ್ಧರಾಗಿ ಈ ರಾಷ್ಟ್ರವನ್ನ ಶತ್ರುಗಳಿಂದ ರಕ್ಷಿಸುತ್ತಿದ್ದಾರೆ.

ಅದೇ ರೀತಿ ಸಮಾಜ ಹಾಗೂ ರಾಷ್ಟ್ರವನ್ನ ಸರ್ವತೋಮುಖವಾಗಿ ಹೇಗೆ ಪ್ರಗತಿ ಹಾಗೂ ಅಭಿವೃದ್ಧಿ ದಿಕ್ಕಿನಲ್ಲಿ ಕೊಂಡೊಯ್ಯಲು ಯುವ ಶಕ್ತಿಯಗಳ ಪಾತ್ರ ಕೂಡ ಅಷ್ಟೇ ಪ್ರಾಮುಖ್ಯವಾದದ್ದು.

ಉದಾಹರಣೆಗೆ: ಈ ರಾಷ್ಟ್ರವನ್ನ ಬಲಿಷ್ಠ ಹಾಗೂ ಪ್ರಬಲ ರಾಷ್ಟ್ರವನ್ನಾಗಿ ಪರಿವರ್ತಿಸಬೇಕಾದರೆ ಯುವ ಪಡೆಗಳಿಂದ ಮಾತ್ರ ಸಾಧ್ಯ, ಎಂದು ಸ್ವಾಮಿ ವಿವೇಕಾನಂದರು, ಮಹಾತ್ಮ ಗಾಂಧೀಜಿ, ವಲ್ಲಭಾಯಿ ಪಟೇಲ್, ಲಾಲ್ ಬಹದ್ದೂರ್ ಶಾಸ್ತ್ರಿ, ಸುಭಾಷ್ ಚಂದ್ರ ಬೋಸ್, ಡಾಟಟ ಅಂಬೇಡ್ಕರ್, ಡಾಟಟ ಅಬ್ದುಲ್ ಕಲಾಂ ಇನ್ನು ಮುಂತಾದ ಮಹಾನುಭಾವರು ರಾಷ್ಟ್ರದ ಭವಿಷ್ಯದ ಬಗ್ಗೆ ದೂರದೃಷ್ಟಿ ಇಟ್ಟುಕೊಂಡು ಚಿಂತಿಸಿದ್ದಾರೆ. ರಾಷ್ಟ್ರದಲ್ಲಿ ಪ್ರಸ್ತುತ ಶೇಖಡ 52 ಭಾಗ ಯುವಕ ಯುವತಿಯರು, ಶೇಖಡ 28 ಭಾಗ ಹಿರಿಯರು ಹಾಗೂ ಶೇಖಡ 20 ಭಾಗ ಮಕ್ಕಳು ಇರುವ ಬಗ್ಗೆ ಸಮೀಕ್ಷೆ ಪ್ರಕಾರ ಅಂಕಿ ಅಂಶಗಳಿಂದ ತಿಳಿಯಲಾಗಿದೆ. ರಾಷ್ಟ್ರದಲ್ಲಿ ಬಹುತೇಕ ಯುವಕರಲ್ಲಿ ಆಲಸ್ಯ, ಸೋಮಾರಿತನ, ಬೇಜವಾಬ್ದಾರಿ, ನಿರ್ಲಕ್ಷ್ಯ, ಅಸಡ್ಡೆ ತಾಂಡವಾಡುತ್ತಾ ಆ ಯುವ ಶಕ್ತಿ ಇಲ್ಲದಾಗಿ ರಾಷ್ಟ್ರ ಬಡವಾಗಿದೆ. ಎಷ್ಟೋ ಯುವಕ- ಯುವತಿಯರಿಗೆ ಉದ್ಯೋಗವಿಲ್ಲದೇ ಅವರೆಲ್ಲಾ ಅಲೆಮಾರಿಗಳಾಗಿದ್ದಾರೆ. ಅದರಲ್ಲಿ ಕೆಲವರು ಅನಾಮಧೇಯವಾಗಿ ಯುವಕ ಯುವತಿಯರು ಒಂದು ರೂಮಿನ ಭಾಗವಾಗಿ ಜೊತೆಯಲ್ಲಿ ವಾಸವಾಗಿರುತ್ತಾರೆ. ಇನ್ನೂ ಕೆಲವು ಯುವಕ ಯುವತಿಯರು ಮದುವೆ ಮಾಡಿಕೊಂಡಿಲ್ಲ, ಮದುವೆ ಬೇಡವೆಂದು ಕೆಲವರು ನಿರ್ಧಾರ ಮಾಡಿರುತ್ತಾರೆ ಹಾಗೂ ಕೆಲವರು ಮದುವೆ ಮಾಡಿಕೊಂಡಿದ್ದವರು ಮಕ್ಕಳು ಬೇಡವೆಂದೂ ಸಹ ನಿರ್ಧಾರ ಮಾಡಿರುತ್ತಾರೆ ಎಂತಹ ವಿಪರ್ಯಾಸ. ತಾತನಿಗಿರುವ ಶಕ್ತಿ ತಂದೆಗಿಲ್ಲ, ತಂದೆಗಿರುವ ಶಕ್ತಿ ಮಕ್ಕಳಿಗಿಲ್ಲ, ಮಕ್ಕಳಿಗಿರುವ ಶಕ್ತಿ ಮೊಮ್ಮಕ್ಕಳಿಗೆ ಇಲ್ಲ, ಅಂದರೆ ಅರ್ಥಾತ್ ಇಂದಿನ ಯುವಶಕ್ತಿ ನಿಶ್ಯಕ್ತಿಯಾಗಿ ಪರಿಣಮಿಸಿವೆ. ಇಂದಿನ ಯಾಂತ್ರಿಕೃತ ಬದುಕಿನಲ್ಲಿ ಕೆಲವರು ಜೀವನ ನಿರ್ವಹಣೆಗೆ ದಿಕ್ಕು ತೋಚದೇ ಬದುಕಲು ತಡವರಿಸುತ್ತಿದ್ದಾರೆ. ಕೆಲವು ಯುವಕ ಯುವತಿಯರ ಯುವಶಕ್ತಿಗಳ ದೋಷಗಳನ್ನು ಈ ಕೆಳಗಿನಂತೆ ತಿಳಿಯಲಾಗಿದೆ. ಕೆಲವು ಯುವಕ- ಯುವತಿಯರು ತಂದೆ ತಾಯಿ , ಮಾವ, ಅತ್ತೆ, ತಾತ, ಅಜ್ಜಿರವರ ಆಸ್ತಿಯನ್ನು ಅವಲಂಬಿಸಿರುತ್ತಾರೆ. ಇನ್ನೂ ಕೆಲವು ಯುವಕ ಯುವತಿಯರು ತಂದೆ ತಾಯಿಗಳಿಗೆ ಹೊರೆಯಾಗಿ ಭಾರವಾಗಿರುತ್ತಾರೆ. ಹಾಗೂ ಆಸ್ತಿ ವಿಚಾರದಲ್ಲಿ ಪೊಲೀಸ್ ಠಾಣೆ ಮತ್ತು ಕೋರ್ಟಿನ ಮೆಟ್ಟಿಲನ್ನ ಏರಿಸಿ ಹೆತ್ತವರಿಗೆ ಚಿಂತೆಗೀಡುಮಾಡಿದ್ದಾರೆ. ಕೆಲವರಿಗೆ ಗುಣಮಟ್ಟದ ಶಿಕ್ಷಣ ಹಾಗೂ ಸಂಸ್ಕಾರ ವಿಲ್ಲದೇ ದಾರಿ ತಪ್ಪಿದ ಮಕ್ಕಳಾಗಿರುತ್ತಾರೆ. ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗವನ್ನು ಗಿಟ್ಟಿಸಿಕೊಳ್ಳಲು ವಿಫಲರಾಗಿರುತ್ತಾರೆ. ಹಾಗೂ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಲು ಮೀನಾ ಮೇಷ ಎಣಿಸುತ್ತಾ ಕಾಲಹರಣ ಮಾಡುತ್ತಾರೆ. ಎಲ್ಲರಿಗೂ ಸರ್ಕಾರಿ ಕೆಲಸ ಸಿಗುವುದಿಲ್ಲ ದುಡಿಯುವ ವಯಸ್ಸಿನಲ್ಲಿ ದುಡಿಯದೇ ಕುಟುಂಬ,ಸಮಾಜ ಹಾಗೂ ರಾಷ್ಟ್ರಕ್ಕೆ ಹೊರೆಯಾಗುತ್ತಾರೆ. ಸೋಮಾರಿಗಳು ಈ ರಾಷ್ಟ್ರಕ್ಕೆ ಮಾರಕ. ದುಡಿಯುವ ಕೈಗಳಾದರೆ ಬಡತನ ಮತ್ತು ದಾರಿದ್ರ್ಯ ಓಡಿ ಹೋಗುತ್ತದೆ. ಆದರೆ ಕೆಲವು ಯುವಕ ಯುವತಿಯರು ಯುವಶಕ್ತಿಯನ್ನು ಹಾಗೂ ಮನಸ್ಥಿತಿಯನ್ನು ಕಳೆದುಕೊಂಡು ಮಾದಕವಸ್ತುಗಳ ವ್ಯಸನರಾಗಿದ್ದಾರೆ.

ರಾಜಕಾರಣಿಗಳ ಹಿಂದೆ,ಫಿಲಂ ಹೀರೋಗಳ ಮತ್ತು ಹೀರೋಯಿನ್ನಗಳ ಹಿಂದೆ ಖುತಾ ನೂರಾರು ಜನ ಯುವ ಪಡೆಗಳು ಸುತ್ತಾಡುತ್ತಾ ಉದ್ಯೋಗ ಕಲ್ಪಿಸಿಕೊಳ್ಳದೇ ಸುಮ್ಮನೇ ಕಾಲಹರಣ ಮಾಡುತ್ತಾರೆ. ಇನ್ನೂ ಕೆಲವು ಯುವಕ ಯುವತಿಯರು ದುಷ್ಟ ಕೂಟಕ್ಕೆ ಸೇರಿಕೊಂಡು ದುಶ್ಚಟಗಳಿಗೆ ಬಲಿಯಾಗಿ ರೋಗಗ್ರಸ್ತರಾಗುತ್ತಾರೆ. ಕೆಲವರು ಭಯೋತ್ಪಾದಕ ಚಟುವಟಿಕೆಗಳಲ್ಲಿ ಹಾಗೂ ಸಮಾಜಘಾತಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.

ಇನ್ನು ಕೆಲವರು ಅದೃಷ್ಟದ ಮೇಲೆ ಉದಾಹರಣೆಗೆ: ರೇಸ್, ಇಸ್ಪೀಟ್, ಲಾಟರಿ, ಬೆಟ್ಸ್, ರಿಯಲ್ ಎಸ್ಟೇಟ್, ಡೆವಲಪರ್ಸ್, ಕಂಟ್ರಾಕ್ಟರ್ಸ್ ಇನ್ನೂ ಇತರೆ ವೃತ್ತಿಯನ್ನು ಅವಲಂಬಿಸಿರುತ್ತಾರೆ. ಕೆಲವು ಸಂಘ ಸಂಸ್ಥೆಗಳನ್ನ ನೋಂದಣಿ ಮೂಲಕ ಅಥವಾ ನೋಂದಣಿ ಇಲ್ಲದೇ ಮಾಡಿಕೊಂಡು ಸುಮ್ಮನೆ ಕಾಲ ಹರಣ ಮಾಡುತ್ತಾರೆ.ಇನ್ನೂ ಕೆಲವರು ಲೇವಾದೇವಿ,ಬಡ್ಡಿ ವ್ಯವಹಾರ, ಚೀಟಿ ವ್ಯವಹಾರ, ಮಧ್ಯಸ್ಥಿಕೆ ವಹಿಸುವುದು, ಬ್ರೋಕರ್ ಕೆಲಸ ಮಾಡುವುದು ಇನ್ನೂ ಇತ್ಯಾದಿ.

ಮತ್ತೊಂದು ಉದಾಹರಣೆ ಮೂಲಕ ತಿಳಿಯುವುದಾದರೆ : ನಿಂತ ನೀರಲ್ಲಿ ಕ್ರಿಮಿ ಕೀಟಗಳು ಸೇರುತ್ತವೆ, ಹರಿಯುವ ನೀರು ಪರಿಶುದ್ಧವಾಗಿರುತ್ತದೆ. ಅದೇ ರೀತಿ ಯುವಕ ಯುವತಿಯರು ಯಾವುದಾದರೂ ಉದ್ಯೋಗದಲ್ಲಿ ತೊಡಗಿಸಿಕೊಂಡರೆ ಈ ರಾಷ್ಟ್ರಕ್ಕೆ ಆಸ್ತಿವಂತರಾಗಿ ಮತ್ತು ಶಕ್ತಿವಂತರಾಗಿ ಪರಿಣಮಿಸುತ್ತಾರೆ.

ಅಂಥವರು ಯಾರಿಗೂ ಕೂಡ ಹೊರೆಯಾಗುವುದಿಲ್ಲ.ರಾಷ್ಟ್ರದಲ್ಲಿ ಎಲ್ಲಾ ವಿಭಾಗದಲ್ಲೂ ಹಾಗೂ ಎಲ್ಲಾ ಕ್ಷೇತ್ರದಲ್ಲೂ ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಸಂಸ್ಕಾರದೊಂದಿಗೆ ಯುವಕ ಯುವತಿಯರು ಕಾಣಿಸಿಕೊಂಡರೆ ಈ ರಾಷ್ಟ್ರ ಬಲಿಷ್ಠ ಹಾಗೂ ಪ್ರಗತಿಯತ್ತ ಸಾಗುತ್ತದೆ.

ಇಂದು ಬಹುತೇಕ ಕೆಲವು ಯುವಕ ಯುವತಿಯರ ದೌರ್ಬಲ್ಯಗಳು ಸಮಾಜದಲ್ಲಿ ಕಾಣಿಸಿಕೊಂಡಿರುವುದರಿಂದ ಯುವಕ ಯುವತಿಯರ ಮನ: ಸ್ಥಿತಿ ಹಾಗೂ ಯುವಶಕ್ತಿ ಎತ್ತಸಾಗಿದೆ ಎಂಬ ಬಗ್ಗೆ ಚರ್ಚೆಗೆ ಗ್ರಾಸವಾಗಿದೆ ಹಾಗೂ ಆಸ್ಪದವಾಗಿದೆ. ಒಟ್ಟಾರೆ ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ ಎಂಬ ನಿರ್ಧಾರಕ್ಕೆ ಬರಲು ಕೆಲವು ಯುವಕ- ಯುವತಿಯರೇ ಎಡೆ ಮಾಡಿಕೊಟ್ಟಿರುತ್ತಾರೆ.

ಜಂಭದ ಜಂಬೂಸವಾರಿ

ದಸರಾ ಬಂತೆಂದರೆ
ಮಾವುತ ಕಾವಾಡಿಗರ
ಭುಜ ಸೆಟದೆ ನಿಲ್ಲುತ್ತವೆ
ಕಾಡಿನಿಂದ ನಾಡಿಗೆ ಬರುವ ಸಂಭ್ರಮ ಸಡಗರ ಮಡದಿ ಮಕ್ಕಳೊಂದಿಗೆ ನಾಡ ಹಬ್ಬದ ನಡಿಗೆಗೆ ಸಾಕ್ಷಿಯಾಗುವ ತವಕ
ಅದೋ....... ಅಲ್ಲಿ ಕಾಣುವ ಭವ್ಯ ಅರಮನೆ ಕಣ್ಣಗಲಕ್ಕೆ ನೋಡಲು ಸಾಲದ ಅರಸರ ನಾಡು
ಸಿಂಗಾರದ ಸೊಬಗಿನಲ್ಲಿ ಮೆರವ ಬೀಡು ಕಾಣುವ ಕನಸಲ್ಲೂ
ನಾಡರಸರ ವೈಭವದ ಚಿತ್ತಾರದ ಚೆಲುವು
ರಂಗೋ ರಂಗು ಧೂಳಿಟ್ಟ ಆಯುಧಗಳಿಗೆ
ಬಲು ಸಂಭ್ರಮ, ಬಳಸಿ ಬಸವಳಿದ ಜೀವ ಶವಗಳಾಗಿ ಗೂಡಿನಿಂದ ಹೊರಬಂದು ಮತ್ತೆ ಜೀವ ತುಂಬಿ ನಳನಳಿಸುವುದು
ಹಳೆ ನೆನಪುಗಳ ನೆನಪಲಿ
ಪ್ರತ್ಯಕ್ಷ ದೈವ ಸ್ವರೂಪಗಳಾದ ರಾಜ ರಾಣಿಯರು ಮೆರೆದ ಭವ್ಯ ಪರಂಪರೆಯ ನೆಲೆಬೀಡು ಈ ನಾಡು, ರತ್ನ ಸಿಂಹಾಸನದಲಿ ವಿರಾಜಮಾನರಾಗಿದ್ದ ಅರಸು ಮನೆತನದ ಘಮಲು ಇನ್ನೂ ಹಸಿರಸಿರು
ರಂಗು ರಂಗಿನ ಚಿತ್ತ ಚಿತ್ತಾರದ ತೋರಣಗಳ ಸಾಲು ಮೆರೆದಿಹವು ಊರಗಲ, ಬೆಳ್ಳಿ ಬೆಳಕಿನ ಬಣ್ಣದ ದೀಪಗಳು ಝುಗ ಝುಗಿಸಿ ನಾ ಮುಂದು ತಾ ಮುಂದು ಎನುತ ಬೆಳಕು ಚೆಲ್ಲಲು ಹವಣಿಸಿಹು
ಅಂಬಾರಿ ಹೊತ್ತ ಪ್ರಶಾಂತ ಗಜ ನಡಿಗೆಯ ಗಜಗಾಂಭೀರ್ಯದಲಿ ಝೇಂಕರಿಸಿ,ಹೂಂಕರಿಸಿ ಸೊಂಡಿಲೆತ್ತಿ
ತಾಯಿ ಚಾಮುಂಡಿಗೆ ನಮಿಸಿ ನಡೆವ
ಚೆಲುವು ಮನೋಹರ
ಡೋಲು, ಡೊಳ್ಳು, ನಾದ ಸ್ವರಗಳ ನಿನಾದದ ನಡುವೆ, ಕಳಶ ಹೊತ್ತ ನಾರಿಯರ ನಡುವೆ, ಥಳಕುತ, ಬಳಕುತ ಸಾಗುವ ಜಂಬದ ಜಂಬೂಸವಾರಿಗೆ ಲಕ್ಷಾಂತರ ಕಂಗಳ ನೋಟ
ಮನೆಯಂಗಳದ ರಂಗೋಲಿಗಳು ಹಪಹಪಿಸಿ ಕಾದಿಹವು ದೇವಿ ಚಾಮುಂಡಿಗೆ ಸ್ವಾಗತ ಕೋರಲು, ಹಚ್ಚಿಟ್ಟ ನವರಾತ್ರಿಯ ದೀಪಗಳು ಉರಿದುರಿದು ಬದುಕಿನ ಬವಣೆಗಳಿಗೆ
ಬೆಳಕಾಗಿ ಸದಾ ಉರಿಯುವ
ನಂದ ದೀಪಗಳಾಗಲು
ಹವಣಿಸುತಿಹವು
ದಸರೆಯ ದೌಲತ್ತು
ಮನೆ ಮಂದಿಗೆ ಮಜಲತ್ತು
ಉಡುಗೆ ತೊಡುಗೆಗಳ ಸವಲತ್ತು,
ಊರ ವ್ಯಾಪಾರಿಗಳ ಮಸಲತ್ತು ಮೈಸೂರ್ಪಾಕಿಗೆ
ಸಿಹಿ ಸೊಕ್ಕು ಆಧರದಿ ಬರಮಾಡಿಕೊಳ್ಳಿ

ನವ ದುರ್ಗೆಯರನು ಬೆಳಗಿ ಆರುತಿಯ ಹೊಸ್ತಿಲಲ್ಲಿ, ನೀಡು ತಾಯಿ ಅರಿವು, ಆರೋಗ್ಯ, ಐಶ್ವರ್ಯ, ರಕ್ಷಣೆ, ನೆಮ್ಮದಿ, ಯಶಸ್ಸು ದಯಪಾಲಿಸೆಂದು ಎಲ್ಲಾ ಪತ್ರಕರ್ತ ಮಿತ್ರರಿಗೆ, ಸ್ನೇಹಿತರಿಗೆ, ಬಂಧುಗಳಿಗೆ ,ರಿಯಲ್ ಮೀಡಿಯಾ ಸಂಸ್ಥೆಯ ಗುಜ್ಜರ್ ಬಳಗದ ಅಭಿಮಾನದ ವಿಜಯದಶಮಿಯ ಶುಭ ಹಾರೈಕೆಗಳು

ನಿಂಗೋಜಿ ರಾವ್ ಗುಜ್ಜರ್
ಸುನೀತಾ ಎನ್ ಗುಜ್ಜರ್
ನಾಗರಾಜ್ ಎನ್ ಗುಜ್ಜರ್
ಸಿದ್ಧಾಂತ ಎನ್ ಗುಜ್ಜರ್

ಮಿನಿ ನ್ಯೂಸ್

ಇತಿಚೆಗೆ ಸರಿಯಾಗಿ ಕಾರ್ಯ ನಿರ್ವಹಿಸದ ಬಗ್ಗೆ ಅನೇಕ ದೂರುಗಳು ಸ್ವೀಕೃತವಾಗುತ್ತಿವೆ. ಇದರಿಂದ ಶಾಲೆಗಳ ಹೆಸರು ಕೆಡುತ್ತವೆ

ಜವಾಬ್ದಾರಿಯ ಕಾರ್ಯ ನಿರ್ವಹಣೆ ಸಧ್ಯದ ತುರ್ತು ಅಗತ್ಯ

ಉದಯವಾಹಿನಿ, ಬೀದರ

ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಡಿ ಗ್ರೂಪ್ ಸಿಬ್ಬಂದಿಗಳ ಮೇಲೆ ಅತ್ಯಂತ ಮಹತ್ವಪೂರ್ಣವಾದ ಹೊಣೆಗಾರಿಕೆಯಿದೆ. ಅದನ್ನು ಸಮರ್ಥವಾಗಿ ನಿಭಾಯಿಸಿದಾಗ ಮಾತ್ರ ವಸತಿ ಶಾಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಸಾಧ್ಯ. ಹೀಗಾಗಿ ಪ್ರತಿಯೊಬ್ಬ ಸಿಬ್ಬಂದಿ ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಿ ಶಾಲೆಗೆ ಹೆಸರು ತರುವಂತೆ ಮಾಡಬೇಕೆಂದು ಸಮಾಜ ಕಲ್ಯಾಣ ಇಲಾಖೆ ಬೀದರನ ಉಪ ನಿರ್ದೇಶಕರಾದ ಡಾ. ಯೋಗೇಶ ಎಸ್ ಬಿ ನುಡಿದರು. ಬೀದರ ಜಿಲ್ಲೆಯ ಕ್ರೈಸ್ ವಸತಿ ಶಾಲೆಗಳ ಮುಖ್ಯ ಅಡುಗೆಯವರು ಮತ್ತು ಅಡುಗೆ ಸಹಾಯಕರು, ಸ್ವಚ್ಛತಾ ಸಿಬ್ಬಂದಿ ಜವಾನ ಹಾಗೂ ಕಾವಲುಗಾರರ ಸಿಬ್ಬಂದಿಗಳಿಗೆ ಬಸವ ಕೇಂದ್ರ ಬೀದರಿನಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಒಂದು ದಿನದ ಕಾರ್ಯಗಾರ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

1. ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಿ
2. ಸಂಸ್ಥೆಯ ವ್ಯತಿರಿಕ್ತ ಅಭಿಪ್ರಾಯ ಸೃಷ್ಠಿಯಾಗುತ್ತದೆ
3. ಉತ್ತಮ ಕಾರ್ಯ ನಿರ್ವಹಿಸಲು ಸಲಹೆ ನೀಡಿದರು

ಇತಿಚೆಗೆ ಸರಿಯಾಗಿ ಕಾರ್ಯ ನಿರ್ವಹಿಸದ ಬಗ್ಗೆ ಅನೇಕ ದೂರುಗಳು ಸ್ವೀಕೃತವಾಗುತ್ತಿವೆ. ಇದರಿಂದ ಶಾಲೆಗಳ ಹೆಸರು ಕೆಡುತ್ತವೆ. ರಾಜ್ಯ ಮಟ್ಟದಲ್ಲಿ ಉತ್ತಮ ಶೈಕ್ಷಣಿಕ ಫಲಿತಾಂಶ ನೀಡಿಯೂ ಇಂತಹ ನಕಾರಾತ್ಮಕ ಸುದ್ದಿ ಬಂದರೆ ಸಂಸ್ಥೆಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯ ಸೃಷ್ಠಿಯಾಗುತ್ತದೆ. ಹೀಗಾಗಿ

ಉದಯವಾಹಿನಿ ಚಿತ್ರ

> ಸಂಸ್ಥೆಯ ಜೀವಾಳವೆ ಡಿ ಗ್ರೂಪ್ ಸಿಬ್ಬಂದಿ. ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾ ಸಿಬ್ಬಂದಿ, ಕಾವಲುಗಾರರು ಹಾಗೂ ಡಿ ಗ್ರೂಪ್ ಸಿಬ್ಬಂದಿಗಳಿಲ್ಲದೆ ಒಂದು ದಿನ ಶಾಲೆಗಳನ್ನು ನಡೆಸಲಾಗದು. ಹೀಗಾಗಿ ಈ ಸಿಬ್ಬಂದಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸಬೇಕು.
> – ಶ್ರೀ ರಾಘವೇಂದ್ರ

ಅಂತಹದಕ್ಕೆ ಅವಕಾಶ ನೀಡಬಾರದೆಂದು ಇಂದು ಪ್ರಥಮ ಬಾರಿಗೆ ಇಂತಹ ಕಾರ್ಯಗಾರ ಆಯೋಜನೆ ಮಾಡಿ ತರಬೇತಿ ನೀಡಲಾಗುತ್ತಿದೆ. ಸಿಬ್ಬಂದಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಅವರು ನುಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಗಿರೀಶ ರಂಜೋಳಕರ ಮಾತನಾಡಿ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿಗಾಗಿ ಸರ್ಕಾರ ಎಲ್ಲಾ ಕ್ರಮ ಕೈಗೊಂಡಿದೆ. ಹೀಗಾಗಿ ಉತ್ತಮ ಕಾರ್ಯ ನಿರ್ವಹಿಸಲು ಸಲಹೆ ನೀಡಿದರು.

ಇಂಡಿಯನ್ ಮೇಡಿಕಲ್ ಅಸೋಷಿಯೇಷನ್ ಬೀದರನ ಅಧ್ಯಕ್ಷರಾದ ಡಾ. ಕಿರಣ ಪಾಟೀಲ ವಸತಿ ಶಾಲೆಗಳ ಸಿಬ್ಬಂದಿಯ ವೈಯಕ್ತಿಕ ಆರೋಗ್ಯ ಮತ್ತು ಟೆಲಿ ಮೆಡಿಷನ್ & ವೈಯಕ್ತಿಕ ಸ್ವಚ್ಛತೆ , ತುರ್ತು ಪರಿಸ್ಥಿತಿ

ಅಗ್ನಿ ಅವಘಡದ ತರಬೇತಿ

ವಸತಿ ಶಾಲೆಯಲ್ಲಿ ಅಗ್ನಿ ಸುರಕ್ಷತೆ, ಬೆಂಕಿ ಅವಘಡಗಳ ತಡೆಗಟ್ಟುವಿಕೆಯಲ್ಲಿ ಅಗ್ನಿ ಉಪಕರಣಗಳ ಬಳಕೆ ಮತ್ತು ತುರ್ತು ಪರಿಸ್ಥಿಯಲ್ಲಿ ವಿದ್ಯಾರ್ಥಿಗಳ ರಕ್ಷಣೆ ಬಗ್ಗೆ ಅಗ್ನಿ ಶಾಮಕ ಇಲಾಖೆಯ ಅಧಿಕಾರಿ ನಾರಂದ ಸೋನಕರ ಮಾತನಾಡಿ ಅಣಕು ಅಗ್ನಿ ಅವಘಡದ ತರಬೇತಿ ನೀಡಿದರು.

ನಿರ್ವಹಣೆ ಬಗ್ಗೆ ಮಾತನಾಡಿದರು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಆಪ್ತ ಸಮಾಲೋಚಕರಾದ ಶ್ರೀಮತಿ ಸುರೇಖಾ ಸ್ವಾಮಿ ಮಕ್ಕಳ ಸುರಕ್ಷತೆ ಮತ್ತು ಪೋಕ್ಸೋ ಕಾಯ್ದೆ ಹಾಗೂ ಡಿ ಗ್ರೂಪ್ ಮತ್ತು ವಾರ್ಡನ್ ರವರ ಜವಾಬ್ದಾರಿಗಳ ಕುರಿತು ಮಾತನಾಡಿದರು. ಆಹಾರ ನಿಗಮ ಅಧಿಕಾರಿಗಳಾದ ಸೂರ್ಯಕಾಂತ ಟೋಣಪೆ ಅಕ್ಕಿ ಗೋಧಿ ಮತ್ತು ಇತರೆ ಧಾನ್ಯಗಳ ಸಂಗ್ರಹಣೆ ವಿಧಾನದ ಬಗ್ಗೆ ಮಾತನಾಡಿದರು. ಇಂದಿರಾಗಾಂಧಿ ವಸತಿ ಶಾಲೆ, ಬಲ್ಲೂರ ನಿಲಯಪಾಲಕರಾದ ಶ್ರೀಮಂತ ಸಪಾಟೆ ಅಡುಗೆ ಮನೆ, ವಸತಿ ನಿಲಯ ಕೋಣೆಗಳ , ಶೌಚಾಲಯಗಳ, ಸ್ನಾನ ಗೃಹ ಮತ್ತು ಶಾಲಾವರಣ ಸ್ವಚ್ಛತೆ ಮತ್ತು ನಿರ್ವಹಣೆ ಮತ್ತು ಸಮವಸ್ತ್ರ ಧರಿಸುವಿಕೆ ಹಾಗೂ ನೈರ್ಮಲ್ಯ ಕಾಪಾಡುವಿಕೆ ಬಗ್ಗೆ ಮಾತನಾಡಿದರು. ಕ್ರೈಸ್ ಜಿಲ್ಲಾ ಸಮನ್ವಯಾಧಿಕಾರಿ ಶರಣಪ್ಪಾ ಬಿರಾದಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಚಾರ್ಯ ರವೀಂದ್ರ ಚಟ್ನಳ್ಳಿ ಸ್ವಾಗತಿಸಿದರು. ಚನ್ನಬಸವ ಹೇಡೆ ವಂದಿಸಿದರು. ದೇವಿದಾಸ ಜೋಶಿ ನಿರೂಪಿಸಿದರು. ಜಿಲ್ಲೆಯ ಕ್ರೈಸ್ ವಸತಿ ಶಾಲೆಗಳ ಹೊರಸಂಪನ್ಮೂಲ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಬೀದಿ ವ್ಯಾಪಾರಿಗಳ ಸಂಘದಿಂದ ನವರಾತ್ರಿ ಉತ್ಸವ

ಉದಯವಾಹಿನಿ ಚಿತ್ರ

ಉದಯವಾಹಿನಿ, ಕಲಬುರಗಿ

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಾಡದೇವಿಯ ಕೃಪೆ ಮತ್ತು ಆಶೀರ್ವಾದಿಂದ ಬೀದಿ ವ್ಯಾಪಾರಿಗಳ ಸಂಘ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ನಾಡ ದೇವಿ ಸರ್ವರಿಗೂ ಆರೋಗ್ಯ ಆಯುಷ್ಯ ಮತ್ತು ಸಂಪತನ್ನು ದಯಪಾಲಿಸಲಿ ಎಂದು ಬೀದಿವ್ಯಾಪಾರಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷ ಜಗನ್ನಾಥ ಎಸ್.ಸೂರ್ಯವಂಶಿ ಅವರು ಶುಭ ಹಾರೈಸಿದರು.

ಅಖಿಲ ಕರ್ನಾಟಕ ರಾಜ್ಯ ಬೀದಿ ವ್ಯಾಪಾರಿಗಳ ಸಂಘದ ಆಶ್ರಯದಲ್ಲಿ ನಗರದ ಜಗತ್ ವೃತ್ತ ಅತ್ತರಕಂಪೌಂಡ್ ಗಾಜೀಪೂರದ ಸೂರ್ಯವಂಶಿ ಅವರ ನಿವಾಸದಲ್ಲಿ ಆಯೋಜಿಸಿದ್ದ ನಾಡ ಹಬ್ಬ ಸದರಾ ನವರಾತ್ರಿ ಉತ್ಸವ, ಸೇವಾ ರತ್ನ ಪ್ರಶಸ್ತಿ ಪ್ರದಾನ ಮತ್ತು ಮಹಾಪ್ರಸಾದ ವಿತರಣೆ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಬೀದಿ ವ್ಯಾಪಾರಿಗಳ ಕಲ್ಯಾಣಕ್ಕಾಗಿ ಹಾಗೂ ಅವರ ಹಕ್ಕುಗಳ ರಕ್ಷಣೆಗಾಗಿ ಸಂಘ ಮುಂಚೂಣಿಯಲ್ಲಿ ನಿಂತು ಹೋರಾಟ ಕೈಗೊಳ್ಳುತ್ತದೆ ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಅಲ್ಲಮಪ್ರಭು ಪಾಟೀಲ ಅವರು, ಎಲ್ಲಾ ಸಮುದಾಯವನ್ನು ವಿಶ್ವಾಶಕ್ಕೆ ತೆಗೆದುಕೊಂಡು ಇಂತಹ ವಿಶೇಷ ಕಾರ್ಯಕ್ರಮವನ್ನು ಆಯೋಸುತ್ತಿರುವ ಸೂರ್ಯವಂಶಿ ಅವರು, ಹಲವಾರು ದಶಕಗಳಿಂದ ಬೀದಿ ವ್ಯಾಪಾರಿಗಳಿಗೆ ನ್ಯಾಯಕಲ್ಪಿಸಲು ಶ್ರಮಿಸುತ್ತಿದ್ದಾರೆ ಅವರ ಈ ಜನಪರ ಕಾಳಜಿ ಮತ್ತು ಸೇವೆಗೆ ತಾಯಿ ಜಗದಂಭದೇವಿ ಅನುಗ್ರಹ ನೀಡಲಿ ಎಂದು ಶುಭ ಹಾರೈಸಿದರು.

ರಸ್ತೆ ಕಾಮಗಾರಿ ಪೂರ್ಣಗೊಳಿಸಲು ಒತ್ತಾಯ

ಉದಯವಾಹಿನಿ ಚಿತ್ರ

ಉದಯವಾಹಿನಿ, ಬೀದರ್

ತಾಲ್ಲೂಕಿನ ಬುಧೇರಾ ಗ್ರಾಮದಿಂದ ಯಾಕತಪುರ ವರೆಗಿನ ರಸ್ತೆ ನಿರ್ಮಾಣ ಕಾಮಗಾರಿ ಶೀಘ್ರ ಪೂರ್ಣಗೊಳಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಘಟಕ ಆಗ್ರಹಿಸಿದೆ. ತಾಲ್ಲೂಕು ಘಟಕದ ಪದಾಧಿಕಾರಿಗಳು ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಮುಧೋಳ ಅವರ ನೇತೃತ್ವದಲ್ಲಿ ನಗರದಲ್ಲಿ ಸೋಮವಾರ ನಿಯೋಗದಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ ಅವರನ್ನು ಭೇಟಿ ಮಾಡಿ ಈ ಕುರಿತು ಮನವಿ ಪತ್ರ ಸಲ್ಲಿಸಿದರು. ಆರು ತಿಂಗಳಿಂದ ಕಾಮಗಾರಿ ಸ್ಥಗಿತಗೊಂಡಿದೆ. ಕಾಮಗಾರಿ ಸ್ಥಳದಲ್ಲಿ ಕರ್ನಾಟಕ ಪಾರದರ್ಶಕತೆ ಕಾಯ್ದೆ ಪ್ರಕಾರ ಕಾಮಗಾರಿ ಅಂದಾಜು ಮೊತ್ತದ ನಾಮಫಲಕ ಹಾಕಲಾಗಿಲ್ಲ ಎಂದು ದೂರಿದರು. ಕಾಮಗಾರಿ ಪೂರ್ಣಗೊಳ್ಳದಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ಅಪಘಾತಗಳಿಗೂ ಕಾರಣವಾಗುತ್ತಿದೆ ಎಂದು ಆರೋಪಿಸಿದರು. ಕೂಡಲೇ ರಸ್ತೆ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಬುಧೇರಾ, ಸಾತೋಳಿ ಹಾಗೂ ಯಾಕತಪುರ ಗ್ರಾಮಸ್ಥರೊಂದಿಗೆ ಬುಧೇರಾದಿಂದ ಬೀದರ್ ಲೋಕೋಪಯೋಗಿ ಇಲಾಖೆ ಕಚೇರಿವರೆಗೆ ಪಾದಯಾತ್ರೆ ನಡೆಸಲಾಗುವುದು. ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು. ವೇದಿಕೆಯ ತಾಲ್ಲೂಕು ಘಟಕದ ಅಧ್ಯಕ್ಷ ಲಕ್ಷ್ಮಣ ಅಟಕಾರ್, ಪ್ರಮುಖರಾದ ಅಜಯಕುಮಾರ ಭಂಗೂರೆ, ತುಕ್ಕಪ್ಪ ಭಂಗೂರೆ, ವಿಠ್ಠಲ ರಾಯಗೊಂಡ, ಸಂತೋಷ್ ಜಾಮ್ಮ ಮತ್ತಿತರರು ಇದ್ದರು.

ಬೋಳಿಯಾರ್ ಅಪಘಾತ ಪ್ರಕರಣಕ್ಕೆ ತಿರುವು

ಉದಯವಾಹಿನಿ, ಮಂಗಳೂರು

ಸೋಮವಾರ ಬೋಳಿಯಾರ್ ಪೆಟ್ರೋಲ್ ಪಂಪ್ ಬಳಿ ಸಂಭವಿಸಿದ ಭೀಕರ ಅಪಘಾತದಲ್ಲಿ ಇಬ್ಬರು ಯುವಕರು ಸಾವನ್ನಪ್ಪಿದ್ದು, ಇದು ಪೂರ್ವನಿಯೋಜಿತ ಕೊಲೆ ಎಂದು ವರದಿಯಾಗಿದೆ.

ಆರಂಭದಲ್ಲಿ ಭೀಕರ ರಸ್ತೆ ಅಪಘಾತ ಎಂದು ವರದಿಯಾಗಿತ್ತು. ಪೊಲೀಸ್ ತನಿಖೆ ಮತ್ತು ಔಪಚಾರಿಕ ದೂರಿನ ಪ್ರಕಾರ, ಪಿಕಪ್ ಚಾಲಕನೊಬ್ಬ ಉದ್ದೇಶಪೂರ್ವಕವಾಗಿ ಜಗಳವಾಡಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾನೆ ಎಂದು ತಿಳಿದುಬಂದಿದೆ. ಕೊಣಾಜೆ ಪೊಲೀಸರು ಆರೋಪಿ ಚಾಲಕ ಹಫೀಜ್ ಅಲಿಯಾಸ್ ಅಪ್ಪಿ ಎಂದು ಗುರುತಿಸಲಾಗಿದ್ದು, ಆತನ ವಿರುದ್ಧ ಕೊಲೆ ಪ್ರಕರಣ ದಾಖಲಿಸಿದ್ದಾರೆ.

ಕಿನ್ಯಾ ನಿವಾಸಿ ಜುನೈದ್ ಅವರ ತಂದೆ ಇಸ್ಮಾಯಿಲ್ ಅವರು ನೀಡಿದ ದೂರಿನ ಪ್ರಕಾರ, ಸೋಮವಾರ ಮಧ್ಯಾಹ್ನ 1:30 ಕ್ಕೆ ಇಬ್ಬರು ಯುವಕರು ತಮ್ಮ ಸ್ಕೂಟರ್‌ನಲ್ಲಿ ಮನೆಯಿಂದ ಹೊರಟಿದ್ದರು. ಸಂಜೆ 4:00 ಗಂಟೆಯ ಸುಮಾರಿಗೆ ರಂತಡ್ಕ ಕ್ರಾಸ್ ಬಳಿ ಹಫೀಜ್ ಜೊತೆ ಮಾತಿನ ಚಕಮಕಿ ಮತ್ತು ಸಣ್ಣ ಮಟ್ಟಿನಲ್ಲಿ ಜಗಳ ನಡೆದಿತ್ತು.

ಉದಯವಾಹಿನಿ ಚಿತ್ರ

ನಂತರ, ಜುನೈದ್ ಮತ್ತು ಅಫ್ರಾಜ್ ತಮ್ಮ ಸ್ಕೂಟರ್ (ನೋಂದಣಿ KA-19-HX-6964) ನಲ್ಲಿ ಮುಡಿಪು ಕಡೆಗೆ ಹೊರಟರು. ಘಟನೆಯಿಂದ ಕೋಪಗೊಂಡ ಹಫೀಜ್, ಕೊಲ್ಲುವ ಸ್ಪಷ್ಟ ಉದ್ದೇಶದಿಂದ ತನ್ನ ಪಿಕಪ್ KA-19-B-6747) ನಲ್ಲಿ ಅವರನ್ನು ಬೆನ್ನಟ್ಟಿದ್ದಾನೆ ಎಂದು ಆರೋಪಿಸಲಾಗಿದೆ. ಬೋಲಿಯಾರ್‌ನಲ್ಲಿರುವ ಇಂಡಿಯನ್ ಆಯಿಲ್ ಪೆಟ್ರೋಲ್ ಪಂಪ್ ಬಳಿ ಉದ್ದೇಶಪೂರ್ವಕವಾಗಿ ತನ್ನ ವಾಹನವನ್ನು ಸ್ಕೂಟರ್‌ಗೆ ಡಿಕ್ಕಿ ಹೊಡಡೆಸಿದ್ದಾನೆ . ಈ ಪರಿಣಾಮ ಯುವಕರು ರಸ್ತೆಗೆ ಬಿದ್ದಿದ್ದು, ಹತ್ತಿರದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ನಂತರ ಹಫೀಜ್ ಪಿಕಪ್ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಪರಾರಿಯಾಗಿದ್ದಾನೆ.

ವೇಷದಿಂದ ಸಂಗ್ರಹಿಸಿದ ಹಣ ಅಸ್ವಸ್ಥ ಯುವಕನಿಗೆ ದಾನ

ಉದಯವಾಹಿನಿ, ಬಂಟ್ವಾಳ

ದಸರಾ ಬಂತೆಂದರೆ ಸಾಕು, ಮನೆ ಮನೆಗೆ ಬರುವ ಹುಲಿವೇಷದ ಕುಣಿತ, ಮಕ್ಕಳ ಸಂಭ್ರಮ, ಕೈತುಂಬಾ ಸಿಗುವ ಹಣ. ಇದೇ ಈ ಪುಟಾಣಿಗಳ ಪ್ರತಿವರ್ಷದ ಖುಷಿ. ಆದರೆ ಈ ಬಾರಿ ಬಂಟ್ವಾಳ ತಾಲೂಕಿನ ಸಜಿಪನಡು ಗ್ರಾಮದ ಏಳು ಪುಟಾಣಿ ಮಕ್ಕಳು ಮಾಡಿದ್ದೇ ಬೇರೆ. ಶಾರ್ದೂಲ ವೇಷ ಧರಿಸಿ ಮನೆ ಮನೆಗೆ ತೆರಳಿ ಸಂಗ್ರಹಿಸಿದ ಹಣವನ್ನು ತಮ್ಮ ಖುಷಿಗಾಗಿ ಬಳಸಿಕೊಳ್ಳುವ ಬದಲು, ಕಳೆದ ಐದು ವರ್ಷಗಳಿಂದ ಹಾಸಿಗೆ ಹಿಡಿದಿರುವ ತಮ್ಮೂರಿನ ಯುವಕನ ನೆರವಿಗೆ ನೀಡಿದ್ದಾರೆ. ತಾವಾಯಿತು, ತಮ್ಮ ಸಂಭ್ರಮವಾಯಿತು ಎನ್ನುವ ವಯಸ್ಸಿನಲ್ಲೇ ಪರರ ನೋವಿಗೆ ಮಿಡಿದ ಈ ಪುಟಾಣಿಗಳ ಮಾನವೀಯ ಕಾರ್ಯಕ್ಕೆ ಇದೀಗ ಇಡೀ ಗ್ರಾಮವೇ ಫಿದಾ ಆಗಿದೆ.

ಹೌದು, ಇದು ಬಂಟ್ವಾಳ ತಾಲ್ಲೂಕಿನ ಸಜಿಪನಡು ಗ್ರಾಮ. ಅಲ್ಲಿನ ಪ್ರಾಥಮಿಕ ಶಾಲೆಯ ವೈಭವ್, ಹಾರ್ದಿಕ್, ಅದೀಪ್, ಶ್ರೇಯಸ್, ಸಾತ್ವಿಕ್, ಅಮೋಘ್ ಹಾಗೂ ರಿತೇಶ್ ಅನ್ನೋ 7

ಉದಯವಾಹಿನಿ ಚಿತ್ರ

ಪುಟಾಣಿ ಮಕ್ಕಳು ದಸರಾ ಸಂದರ್ಭದಲ್ಲಿ ಪ್ರತಿವರ್ಷದಂತೆ ಈ ಬಾರಿಯೂ ಶಾರ್ದೂಲ (ಹುಲಿ) ವೇಷ ಧರಿಸಿ ತಮ್ಮ ಊರಿನ ಜನರ ಮನೆ ಮನೆಗೆ ಭೇಟಿ ನೀಡುತ್ತಾರೆ. ಪ್ರತಿ ಬಾರಿ ತಮ್ಮದೇ ಕುಟುಂಬಸ್ಥರ ಮನೆಗಳಿಗೆ ಹೋಗಿ ಬರುತ್ತಿದ್ದ ಮಕ್ಕಳಿಗೆ ಸುಮಾರು 600 ರೂಪಾಯಿ ಸಂಗ್ರಹವಾಗುತ್ತಿತ್ತು. ಆ ಹಣವನ್ನು ಸ್ನೇಹಿತರೆಲ್ಲಾ ಸೇರಿ ಹಂಚಿಕೊಂಡು ತಿಂಡಿ–ತಿನಿಸು ತಿಂದು ಶಾಲಾ ರಜೆಯನ್ನು ಆನಂದಿಸುತ್ತಿದ್ದರು. ಆದ್ರೆ ಈ ಬಾರಿ ಮಾತ್ರ ಈ ಪುಟಾಣಿಗಳು ಮಾಡಿದ ಸೇವೆಗೆ ಇಡೀ ಗ್ರಾಮವೇ ಶ್ಲಾಘನೆ ವ್ಯಕ್ತಪಡಿಸಿದೆ.

ಎಲ್ಲಾ ವಾರ್ಡ್ಗಳ ಕುಡಿಯುವ ನೀರಿನ ಬೋರ್‌ವೆಲ್‌ಗಳ ಪರಿಶೀಲನೆಗೆ ಆಗ್ರಹ

ಉದಯವಾಹಿನಿ, ದೋರನಹಳ್ಳಿ

ಗ್ರಾಮದ ಎಲ್ಲಾ ವಾರ್ಡ್ಗಳಲ್ಲಿರುವ ಕುಡಿಯುವ ನೀರಿನ ಬೋರ್‌ವೆಲ್‌ಗಳನ್ನು ಸಮಗ್ರವಾಗಿ ಪರಿಶೀಲಿಸಿ, ತುಕ್ಕು ಹಿಡಿದಿರುವ ಹಾಗೂ ಹಾನಿಗೊಳಗಾದ ಕಬ್ಬಿಣದ ಬಿಡಿಭಾಗಗಳನ್ನು ಬದಲಾಯಿಸುವಂತೆ ಸಾಮಾಜಿಕ ಯುವ ಹೋರಾಟಗಾರ ಭೀಮು ಸಾವೂರ ಅವರು ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಗ್ರಾಮದ ವಿವಿಧ ವಾರ್ಡ್ಗಳಲ್ಲಿರುವ ಬೋರ್‌ವೆಲ್‌ಗಳಿಗೆ ಹಲವು ವರ್ಷಗಳ ಹಿಂದೆ ಅಳವಡಿಸಿರುವ ಕಬ್ಬಿಣದ ಪೈಪ್‌ಗಳು, ಚೈನ್‌ಗಳು, ರಾಡ್‌ಗಳು, ಹ್ಯಾಂಡಲ್‌ಗೆ ಜೋಡಿಸಿರುವ ಬಿಡಿಭಾಗಗಳು ಸೇರಿದಂತೆ ವಿವಿಧ ಉಪಕರಣಗಳು ದೀರ್ಘಕಾಲದ ಬಳಕೆಯಿಂದ ತುಕ್ಕು ಹಿಡಿದಿವೆ. ಕೆಲವು ಭಾಗಗಳು ಸವಕಳಿಗೊಂಡಿದ್ದು, ಹಾನಿಗೊಳಗಾದ ಬಿಡಿಭಾಗಗಳು ಬೋರ್‌ವೆಲ್‌ಗಳ ಕಾರ್ಯನಿರ್ವಹಣೆಗೆ ತೊಂದರೆ ಉಂಟುಮಾಡುವ

ಉದಯವಾಹಿನಿ ಚಿತ್ರ

ಸಾಧ್ಯತೆಯಿದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

ತುಕ್ಕು ಹಿಡಿದ ಉಪಕರಣಗಳಿಂದ ಕುಡಿಯುವ ನೀರಿನ ಗುಣಮಟ್ಟದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಮುನ್ನೆಚ್ಚರಿಕೆ ವಹಿಸುವುದು ಅಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಪಟ್ಟಣ ಪಂಚಾ ಯಿತಿ ಅಧಿಕಾರಿಗಳು ತಕ್ಷಣವೇ ಗ್ರಾಮದ ಎಲ್ಲ ವಾರ್ಡ್ಗಳ ಬೋರ್‌ವೆಲ್‌ಗಳ ಸಮಗ್ರ ಸಮೀಕ್ಷೆ ನಡೆಸಿ, ಅವುಗಳ ಸ್ಥಿತಿಗತಿಗಳನ್ನು ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಅಲ್ಲದೆ, ತುಕ್ಕು ಹಿಡಿದಿ ರುವ ಮತ್ತು ಹಾನಿಗೊಳಗಾದ ಕಬ್ಬಿಣದ ಪೈಪ್‌ಗಳು, ಚೈನ್‌ಗಳು, ರಾಡ್‌ಗಳು ಹಾಗೂ ಹ್ಯಾಂಡಲ್‌ನ ಬಿಡಿಭಾಗಗಳನ್ನು ಹೊಸ ಉಪಕರಣಗಳಿಂದ ಬದಲಾಯಿಸಬೇಕು. ಕುಡಿಯುವ ನೀರಿನ ಗುಣಮಟ್ಟವನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ, ಅಗತ್ಯ ದುರಸ್ತಿ ಮತ್ತು ನಿರ್ವಹಣಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಾರ್ವಜನಿಕರಿಗೆ ಶುದ್ಧ ಹಾಗೂ ಸುರಕ್ಷಿತ ಕುಡಿಯುವ ನೀರು ಒದಗಿಸಬೇಕು ಎಂದು ಭೀಮು ಸಾವೂರ ಅವರು ಪಟ್ಟಣ ಪಂಚಾಯಿತಿಗೆ ಸಲ್ಲಿಸಿದ ಮನವಿಯಲ್ಲಿ ಆಗ್ರಹಿಸಿದ್ದಾರೆ.

ದುರ್ಗಾಷ್ಟಮಿ ನಿಮಿತ್ತ ರೋಹಿತ್ ಗುರೂಜಿ ಅವರ ನೇತೃತ್ವದಲ್ಲಿ ನವಚಂಡಿ ಯಾಗ ಹಾಗೂ ಕುಂಕುಮಾರ್ಚನೆ ಸಂಪ್ರದಾಯಬದ್ಧವಾಗಿ ನೆರವೇರಿದವು

ಕೆಇಬಿ ಹನುಮಾನ ಮಂದಿರ ಬಳಿ ವೈಭವದ ನವರಾತ್ರಿ ಉತ್ಸವ

ಉದಯವಾಹಿನಿ, ಬೀದರ್

ನವರಾತ್ರಿ ಉತ್ಸವದ ಅಂಗವಾಗಿ ನಗರದ ಕೆಇಬಿ ಹನುಮಾನ ಮಂದಿರದ ಬಳಿ ಪ್ರತಿಷ್ಠಾಪಿಸಿರುವ ಸಾರ್ವಜನಿಕ ದುರ್ಗಾದೇವಿ (ಅಂಬಾ ಭವಾನಿ) ಮಂಟಪದಲ್ಲಿ ದುರ್ಗಾಷ್ಟಮಿ ಹಾಗೂ ಮಹಾನವಮಿ ನಿಮಿತ್ತ ನವಚಂಡಿ ಯಾಗ, ಕುಂಕುಮಾರ್ಚನೆ, ಹೋಮ–ಹವನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾ–ಭಕ್ತಿಯಿಂದ ಜರುಗಿದವು.

1. ದೀಪ ಗರ್ಭಾ ಉತ್ಸವ ಹಾಗೂ ಭಕ್ತಿ ಸಂಗೀತ
2. ಹೋಮ–ಹವನ, ಅಭಿಷೇಕ, ಕನ್ಯಾಪೂಜೆ
3. ದೇವಿಯ ವಿವಿಧ ನಾಮಗಳನ್ನು ಉಚ್ಚರಿಸುತ್ತ

ಜೈ ಭಾರತ ಮಾತಾ ಸೇವಾ ಸಮಿತಿ, ಭಾರತೀಯ ಗೋ ಪರಿವಾರ ಹಾಗೂ ವೈಷ್ಣೋದೇವಿ ಶಕ್ತಿ ಪೀಠದ ವತಿಯಿಂದ ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ದೇವಿಯ ಪ್ರತಿಷ್ಠಾಪನೆ ಮಾಡಲಾಗಿದೆ. ಭಾರತೀಯ ಗೋ ಪರಿವಾರದ ಜಿಲ್ಲಾ ಸಮಿತಿ ಅಧ್ಯಕ್ಷರೂ ಆಗಿರುವ ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ವೀರಶೆಟ್ಟಿ ಖ್ಯಾಮಾ ಅವರ ನೇತೃತ್ವದಲ್ಲಿ ಕಳೆದ ಒಂಬತ್ತು ದಿನಗಳಿಂದ ಹೋಮ–ಹವನ, ಯಾಗ, ಅಭಿಷೇಕ, ಕನ್ಯಾಪೂಜೆ, ದೀಪ ಗರ್ಭಾ ಉತ್ಸವ ಹಾಗೂ ಭಕ್ತಿ ಸಂಗೀತ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಅದ್ದೂರಿಯಾಗಿ ನಡೆದಿವೆ. ಉತ್ಸವಕ್ಕೆ ತೆರೆ ಬೀಳಲಿದೆ. ದುರ್ಗಾಷ್ಟಮಿ ನಿಮಿತ್ತ ರೋಹಿತ್ ಗುರೂಜಿ ಅವರ ನೇತೃತ್ವದಲ್ಲಿ ನವಚಂಡಿ ಯಾಗ ಹಾಗೂ ಕುಂಕುಮಾರ್ಚನೆ ಸಂಪ್ರದಾಯಬದ್ಧವಾಗಿ ನೆರವೇರಿದವು.

ಉದಯವಾಹಿನಿ ಚಿತ್ರ

ದೇವಿ ಮಹಾತ್ಮೆ ಪಠಣ, ಚಂಡಿಕಾ ದೇವಿ ಸ್ತುತಿ, ಮಂತ್ರೋಚ್ಚಾರಣೆ ಹಾಗೂ ಶಾಸ್ತ್ರೋಕ್ತ ಹೋಮದ ಮೂಲಕ ದೇವಿಯ ಆರಾಧನೆ ಮಾಡಲಾಯಿತು. ಲೋಕಕಲ್ಯಾಣ, ಉತ್ತಮ ಮಳೆ–ಬೆಳೆ, ಸಮಾಜದಲ್ಲಿ ಶಾಂತಿ–ಸಮೃದ್ಧಿ ಹಾಗೂ ಸಕಲರ ಒಳಿತಿಗಾಗಿ ಸಂಕಲ್ಪಿಸಿ ಯಾಗ ನಡೆಸಲಾಯಿತು.

ಕುಂಕುಮಾರ್ಚನೆ ಕಾರ್ಯಕ್ರಮವೂ ಭಕ್ತರ ಗಮನ ಸೆಳೆಯಿತು. ಕೊಲ್ಲಾಪುರದ ಮಹಾಲಕ್ಷ್ಮಿ ಮಂದಿರದಿಂದ ತರಿಸಲಾದ ಶ್ರೀಚಕ್ರ ಸಮೇತ ವಿಶೇಷ ಪೂಜೆ ನೆರವೇರಿಸಲಾಯಿತು. ದೇವಿಯ ವಿವಿಧ ನಾಮಗಳನ್ನು ಉಚ್ಚರಿಸುತ್ತ ಕುಂಕುಮ ಅರ್ಪಿಸಿದ ಭಕ್ತರು ಕುಟುಂಬದ ಸುಖ–ಶಾಂತಿ, ಸೌಭಾಗ್ಯ, ಆರೋಗ್ಯ ಹಾಗೂ ಸಮೃದ್ಧಿಗಾಗಿ ಪ್ರಾರ್ಥಿಸಿದರು.

ಸೋಮವಾರ ನಡೆದ ಮಹಾನವಮಿ ಹೋಮದಲ್ಲಿ ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಹಾಗೂ ಅವರ ಪುತ್ರಿ ಶಿವಾನಿ ಪಾಲ್ಗೊಂಡರು. ವೀರಶೆಟ್ಟಿ ಖ್ಯಾಮಾ, ರಾಜೇಶ್ವರಿ ಖ್ಯಾಮಾ, ಭೀಮಣ್ಣ

> ನವಚಂಡಿ ಯಾಗವು ಮನುಷ್ಯನಲ್ಲಿ ಧೈರ್ಯ, ಆತ್ಮವಿಶ್ವಾಸ, ಸಕಾರಾತ್ಮಕ ಚಿಂತನೆ ಹಾಗೂ ಧರ್ಮನಿಷ್ಠೆಯನ್ನು ಬೆಳೆಸುವ ಆಧ್ಯಾತ್ಮಿಕ ಆಚರಣೆಯಾಗಿದೆ.
> – ರೋಹಿತ್ ಗುರೂಜಿ

> ನವಚಂಡಿ ಯಾಗ, ಕುಂಕುಮಾರ್ಚನೆ ಹಾಗೂ ಹೋಮ–ಹವನ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು ಸಂತಸ ತಂದಿದೆ.
> – ವೀರಶೆಟ್ಟಿ ಖ್ಯಾಮಾ, ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ

ಸೋರಳ್ಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ದುರ್ಗಾಷ್ಟಮಿ ನಿಮಿತ್ತ ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಸೇರಿದಂತೆ ಹಲವರು ಆಗಮಿಸಿ ದೇವಿಯ ದರ್ಶನ ಪಡೆದರು.

ನವರಾತ್ರಿಯು ಆದಿಶಕ್ತಿ ದುರ್ಗಾದೇವಿಯ ಒಂಬತ್ತು ಸ್ವರೂಪಗಳನ್ನು ಆರಾಧಿಸುವ ಪವಿತ್ರ ಹಬ್ಬವಾಗಿದೆ. ದುಷ್ಟಶಕ್ತಿಗಳ ವಿರುದ್ಧ ದೈವಿಕ ಶಕ್ತಿಯ ವಿಜಯವನ್ನು ಸ್ಮರಿಸುವ ಈ ಹಬ್ಬವು ಭಾರತೀಯ ಸಂಸ್ಕೃತಿ, ಧಾರ್ಮಿಕ ನಂಬಿಕೆ ಹಾಗೂ ಆಧ್ಯಾತ್ಮಿಕ ಪರಂಪರೆಯೊಂದಿಗೆ ಆಳವಾದ ಸಂಬಂಧ ಹೊಂದಿದೆ. ಈ ಹಬ್ಬದ ವೈಶಿಷ್ಟ್ಯವನ್ನು ಮುಂದಿನ ಪೀಳಿಗೆಗೆ ತಿಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಧಾರ್ಮಿಕ ಆಚರಣೆಗಳು ದೇವಿಯ ಆರಾಧನೆಯ ಜೊತೆಗೆ ಸನಾತನ ಪರಂಪರೆಯ ಮೌಲ್ಯಗಳನ್ನು ತಿಳಿಯಲು ಸಹಕಾರಿಯಾಗುತ್ತವೆ. ನವರಾತ್ರಿಯು ಶಕ್ತಿ, ಭಕ್ತಿ, ಧರ್ಮ ಹಾಗೂ ಸತ್ಯದ ಮಹತ್ವವನ್ನು ಅರಿಯುವ ಪವಿತ್ರ ಸಂದರ್ಭವಾಗಿದೆ.

ರಾಜ್ಯ ಸರ್ಕಾರದ ನಿರ್ಧಾರಕ್ಕೆ ಮೆಚ್ಚುಗೆ

ಉದಯವಾಹಿನಿ, ಕಲಬುರಗಿ

ಮಧ್ವಾಚಾರ್ಯರ ಜಯಂತಿಯನ್ನು ಆಚರಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿರೋದನ್ನು ಸ್ವಾಗತಿಸಿರುವ ಉತ್ತರಾದಿ ಮಠಾಧೀಶರಾದ ಸತ್ಯಾತ್ಮ ತೀರ್ಥ ಶ್ರೀಗಳು, ಕಲಬುರಗಿಯಲ್ಲಿ ಭಕ್ತರು ಸಲ್ಲಿಸಿದ ಈ ಮನವಿಗೆ ತಕ್ಷಣ ಸ್ಪಂದಿಸಿರುವ ಸರ್ಕಾರದ ನಡೆಯನ್ನು ಶ್ಲಾಘಿಸಿದ್ದಾರೆ. ಹುಬ್ಬಳ್ಳಿಯಲ್ಲಿರುವ ಶ್ರೀಗಳು ದೂರವಾಣಿ ಮೂಲಕ ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರೊಂದಿಗೆ ಮಾತನಾಡಿದ್ದು, ತ್ರೈಲೋಕ್ಯಾಚಾರ್ಯರಾಗಿರುವ ಮಧ್ವಾಚಾರ್ಯರ ಜಯಂತಿ ಆಚರಣೆಗೆ ಅಧಿಕೃತ ಆದೇಶ ಹೊರಡಿಸಿರುವ ಸರ್ಕಾರದ ಕ್ರಮವನ್ನು ಸ್ವಾಗತಿಸಿ ಮೆಚ್ಚುಗೆ ಮಾತುಗಳನ್ನಾಡಿದ್ದಾರೆ.

ಈ ದೂರವಾಣಿ ಮಾತುಕತೆ ಸಂದರ್ಭದಲ್ಲಿ ಮಧ್ವಾಚಾರ್ಯರ ಜಯಂತಿಯನ್ನು ಆಚರಿಸಲು ಮಹತ್ವದ ನಿರ್ಧಾರ ಕೈಗೊಂಡಿರುವ ಮುಖ್ಯಮಂತ್ರಿಗಳಾದಿಕೆ ಶಿವಕುಮಾರ್ ಅವರಿಗೂ, ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರಿಗೂ ಶ್ರೀಗಳು ಅಭಿನಂದಿಸಿ ಆಶೀರ್ವದಿಸಿದ್ದಾರೆ.

ಪುತ್ತೂರು ದಸರಾ ಶೋಭಾಯಾತ್ರೆ ರೀಲ್ಸ್ ಸ್ಪರ್ಧೆ

ಉದಯವಾಹಿನಿ, ಪುತ್ತೂರು

ಐತಿಹಾಸಿಕ ಹಾಗೂ ಧಾರ್ಮಿಕ ಹಿನ್ನಲೆಯನ್ನು ಹೊಂದಿರುವ ಪುತ್ತೂರು ಶ್ರೀ ಶಾರದಾ ಭಜನಾ ಮಂದಿರದಲ್ಲಿ 92ನೇ ವರ್ಷದ ನವರಾತ್ರಿ ಉತ್ಸವ, 'ಪುತ್ತೂರು ದಸರಾ'ದ ಅಂಗವಾಗಿ ಅ.21 ರಂದು ಆಕರ್ಷಕ ಶೋಭಾಯಾತ್ರೆ ನಡೆಯಲಿದ್ದು, ಶೋಭಾಯಾತ್ರೆಯ ಹೈಲೈಟ್ಸ್‌ಗಳನ್ನು ರೀಲ್ಸ್ ಮಾಡಿ ಉತ್ತಮ ಹೈಲೈಟ್ಸ್ ಪಡೆದವರಿಗೆ ಬಹುಮಾನ ನೀಡಲಾಗುತ್ತದೆ. ಪ್ರಥಮ ಬಹುಮಾನ ರೂ. 10 ಸಾವಿರ, ದ್ವಿತೀಯ ಬಹುಮಾನ ರೂ. 6 ಸಾವಿರ ಹಾಗೂ ತೃತೀಯ ಬಹುಮಾನವಾಗಿ 4 ಸಾವಿರ ಗೆಲ್ಲುವ ಅವಕಾಶವಿದೆ. ಸಂಜೆ 6 ಗಂಟೆಯ ಬಳಿಕ ಶೋಭಾಯಾತ್ರೆ ನಡೆಯಲಿದ್ದು, ಉತ್ತಮವಾದ ಮತ್ತು ಗರಿಷ್ಠ ಹೈಲೈಟ್ಸ್ ಪಡೆದ ರೀಲ್ಸ್ ಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲಾಗುವುದು ಎಂದು ಶಾರದಾ ಭಜನಾ ಮಂದಿರದ ಅಧ್ಯಕ್ಷ ಸೀತಾರಾಮ ರೈ ಕೆದಂಬಾಡಿಗುತ್ತು ಹಾಗೂ ಶೋಭಾಯಾತ್ರೆ ಸಂಚಾಲಕ ಸಂಚಾಲಕ ನವೀನ್ ಕುಲಾಲ್ ತಿಳಿಸಿದ್ದಾರೆ.

ನದಿಯಲ್ಲಿ ಮುಳುಗಿ ಯುವಕ ಸಾವು

ಉದಯವಾಹಿನಿ, ಬೆಳ್ತಂಗಡಿ

ನಿಡ್ಲೆ ಗ್ರಾಮದ ಪಾರ್ಪಿಕಲ್ಲು ಎಂಬಲ್ಲಿ ಅಕ್ಟೋಬರ್ 20 ರ ಮಧ್ಯಾಹ್ನ ಸ್ನೇಹಿತರೊಂದಿಗೆ ಸ್ನಾನ ಮಾಡುತ್ತಿದ್ದಾಗ 21 ವರ್ಷದ ಯುವಕನೊಬ್ಬ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ. ಮೃತನನ್ನು ಕೊಕ್ಕಡ ಗ್ರಾಮದ ಮೂಡುಬೈಲ್ ನಿವಾಸಿ ಜನಾರ್ದನ ಗೌಡ ಅವರ ಪುತ್ರ ಕೀರ್ತನ್ ಎಂದು ಗುರುತಿಸಲಾಗಿದೆ. ಕೀರ್ತನ್ ಮತ್ತು ಅವರ ಸ್ನೇಹಿತರು ನಿಡ್ಲೆ ಗ್ರಾಮದ ಪರ್ಪಿಕಲ್ಲು ನದಿಯಲ್ಲಿ ಸ್ನಾನ ಮಾಡಲು ತೆರಳಿದ್ದು, ಕೀರ್ತನ್ ಆಳವಾದ ನೀರಿಗೆ ಇಳಿದು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದ ದುರಂತ ಘಟನೆ ಎಂದು ವರದಿಯಾಗಿದೆ. ಸ್ಥಳೀಯ ನಿವಾಸಿಗಳು ಸ್ಥಳಕ್ಕೆ ಧಾವಿಸಿ, ಕೀರ್ತನ್ ಅವರ ಮೃತದೇಹವನ್ನು ನೀರಿನಿಂದ ಹೊರತೆಗೆದು ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು ಎಂದು ತಿಳಿದುಬಂದಿದೆ. ಧರ್ಮಸ್ಥಳ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಚನ್ನಮ್ಮ ಜಯಂತಿ: 23ರಂದು ಮೆರವಣಿಗೆ

ಉದಯವಾಹಿನಿ, ವಿಜಯಪುರ

ಕಿತ್ತೂರು ರಾಣಿ ಚೆನ್ನಮ್ಮ ಅವರ 248ನೇ ವಿಜಯೋತ್ಸವ ಹಾಗೂ 202ನೇ ಜಯಂತ್ಯೋತ್ಸವದ ಅಂಗವಾಗಿ ವಿಜಯಪುರ ಜಿಲ್ಲಾ ಪಂಚಮಸಾಲಿ ಯುವ ಘಟಕದ ವತಿಯಿಂದ

ಅ.23ರಂದು ನಗರದಲ್ಲಿ ಭವ್ಯ ಮೆರವಣಿಗೆ ಹಾಗೂ ಜಯಂತ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9 ಗಂಟೆಗೆ ನಗರದ ಶ್ರೀ ಸಿದ್ಧೇಶ್ವರ ದೇವಸ್ಥಾನದಿಂದ ಭವ್ಯ ಮೆರವಣಿಗೆ ಆರಂಭವಾಗಲಿದ್ದು, ವಿವಿಧ ಕಲಾ ತಂಡಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ. ಬಳಿಕ ಬೆಳಿಗ್ಗೆ 10.30ಕ್ಕೆ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಜಯಂತ್ಯೋತ್ಸವ ಕಾರ್ಯಕ್ರಮ ನಡೆಯಲಿದೆ. ಸಮಾಜದ ಬಾಂಧವರು, ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ವಿಜಯಪುರ ಜಿಲ್ಲಾ ಪಂಚಮಸಾಲಿ ಯುವ ಘಟಕದ ಅಧ್ಯಕ್ಷ ವೀರೇಶ ಎಸ್. ಕಸಬೇಗೌಡ ಹಾಗೂ ಜಿಲ್ಲಾಧ್ಯಕ್ಷ ಗುರುಶಾಂತ ಬಿ. ನಿಡೋಣಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ. ಕಿತ್ತೂರು ರಾಣಿ ಚೆನ್ನಮ್ಮ ಅವರ ಶೌರ್ಯ, ಸಾಹಸ ಹಾಗೂ ದೇಶಪ್ರೇಮವನ್ನು ಸ್ಮರಿಸುವ ಈ ಕಾರ್ಯಕ್ರಮದಲ್ಲಿ ಸಮಾಜದ ಎಲ್ಲರೂ ಪಾಲ್ಗೊಳ್ಳುವಂತೆ ಅವರು ಕೋರಿದ್ದಾರೆ.

ಸಂಸ್ಕಾರ ಮತ್ತು ಮಾರ್ಗದರ್ಶಕ ಲೋಕಾರ್ಪಣೆ

ಉದಯವಾಹಿನಿ, ಕಲಬುರಗಿ

ನಗರ ಹೊರವಲಯದ ಬುದ್ಧ ವಿಹಾರದಲ್ಲಿ ಆಯೋಜಿಸಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರು ಬೌದ್ಧಧಮ್ಮ ಸ್ವೀಕರಿಸಿದ 70ನೇ ಧಮ್ಮಚಕ್ರ ಪ್ರವರ್ತನ ದಿನಾಚರಣೆ ಕಾರ್ಯಕ್ರಮದಲ್ಲಿ ಮಹೇಂದ್ರ ಫೌಂಡೇಶನ್ ವತಿಯಿಂದ ಪ್ರಕಾಶನಗೊಂಡ ವಿಜಯ ಕಾಂಬಳೆ ಬರೆದ ಬೌದ್ಧ ವಿಧಿ ಸಂಸ್ಕಾರ ಮತ್ತು ಮಾರ್ಗದರ್ಶಕ ಎಂಬ ಮರಾಠಿ ಭಾಷೆಯ ಪುಸ್ತಕವನ್ನು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರುಗಳಾದ ತಿಪ್ಪಣ್ಣಪ್ಪ ಕಮಕನೂರ್, ಜಗದೇವ ಗುತ್ತೇದಾರ್, ವಸಂತ್ ಕುಮಾರ್, ಜೆಸ್ಕಾಂ ಅಧ್ಯಕ್ಷರಾದ ಪ್ರವೀಣ್ ಕುಮಾರ್ ಪಾಟೀಲ್ ಹರವಾಳ, ಕೆಪಿಸಿಸಿ ಕಲಬುರಗಿ ಜಿಲ್ಲಾಧ್ಯಕ್ಷರಾದ ಡಾ. ಕಿರಣ್ ದೇಶಮುಖ್, ವಿಧಾನ ಪರಿಷತ್ ಮಾಜಿ ಸದಸ್ಯರಾದ ಅರವಿಂದ ಅರಳಿ, ಶಾಂತಪ್ಪ ಸೂರನ್, ಸಾಹಿತಿ ಡಾ.ನಟರಾಜ್ ಹುಳಿಯಾರ್,ಡಾ. ಚಂದ್ರಶೇಖರ್ ದೊಡ್ಡಮನಿ, ಅನಿಲಕುಮಾರ ಸುಗಂಧಿ ಮತ್ತು ಮಿಲಿಂದ್ ಗುರೂಜಿ ಉಪಸ್ಥಿತರಿದ್ದರು

ಕಾಲಹರಣ: ಸಿಬ್ಬಂದಿಗೆ ಶೋಕಾಸ್ ನೋಟೀಸ್

ಉದಯವಾಹಿನಿ, ಬಳ್ಳಾರಿ

ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯ ನಾಲ್ವರು ಸಿಬ್ಬಂದಿ ಕರ್ತವ್ಯದ ಅವಧಿಯಲ್ಲಿ ಸಿಬ್ಬಂದಿ ಕಾಲಹರಣ ಮಾಡುತ್ತಿದ್ದರ ಬಗ್ಗೆ ಬಂದ ದೂರಿಗೆ ಡಿಹೆಚ್ ಓ ಅಲಕಾನಂದ ಅವರು ಆ ಸಿಬ್ಬಂದಿಗೆ ಶೋಕಾಸ್ ನೋಟೀಸ್ ಜಾರಿ ಮಾಡಿದ್ದಾರೆ.

ಅ.19 ರಂದು ಕರ್ತವ್ಯದ ವೇಳೆ ಡಿಹೆಚ್‌ಓ ಕಚೇರಿಯ ಎಫ್ಡಿಎ ಗಿರೀಶ್ ಕರಣ್, ಎಸ್ ಡಿ ಎಗಳಾದ ವೈ.ಫ್ರಾನ್ಸಿಸ್, ಚಂದ್ರಶೇಖರ್ ಮತ್ತು ಗೋಪಾಲ್ ಹೆಚ್. ಅವರಿಗೆ ನೋಟೀಸ್ ಜಾರಿ ಮಾಡಿದ್ದು. ಸರ್ಕಾರಿ ಕಚೇರಿಗಳಿಗೆ ಬರುವ ಸಾರ್ವಜನಿಕರ ಕೆಲಸಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವುದು ಸಿಬ್ಬಂದಿಯ ಜವಾಬ್ದಾರಿಯಾಗಿದೆ. ಕರ್ತವ್ಯದ ಅವಧಿಯಲ್ಲಿ ನಿರ್ಲಕ್ಷ್ಯ ಅಥವಾ ಕಾಲಹರಣ ನಡೆದಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದು ಡಿಹೆಚ್ ಓ ಹೇಳಿದ್ದಾರೆ.

ದಿನ ಭವಿಷ್ಯ

[illegible]	ಮಧ್ಯಾಹ್ನ	01.30 [illegible] 03.00
[illegible]	ಬೆಳಗ್ಗೆ	09.00 [illegible] 10.30
[illegible]	ಬೆಳಗ್ಗೆ	06.00 [illegible] 07.30

ನಿಮ್ಮ ಸಂಗಾತಿಯ ಅಹ್ಲಾದಕರ ಮನಸ್ಥಿತಿ ನಿಮ್ಮ ದಿನವನ್ನು ಉಜ್ವಲವಾಗಿಸಬಹುದು. ನೀವು ನಿಮ್ಮ ಹೂಡಿಕೆಗಳನ್ನು ಸಂಪ್ರದಾಯಬದ್ಧವಾಗಿ ಉಳಿತಾಯ ಮಾಡಿದರೆ ಹಣ ಮಾಡುತ್ತೀರಿ. ಇಂದು ನೀವು ಸ್ವಲ್ಪ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ

ಹಳೆಯ ಸ್ನೇಹಿತರ ಜೊತೆಗಿನ ಒಂದು ಪುನರ್ಮಿಲನ ನಿಮ್ಮನ್ನು ಚೇತೋಹಾರಿಯಾಗಿರಿಸುತ್ತದೆ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ.

ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯವಿರುತ್ತೀರಿ. ನೀವು ಪ್ರೀತಿಪಾತ್ರರ ಜೊತೆ ವಿವಾದಾತ್ಮಕ ವಿಷಯಗಳನ್ನು ತಪ್ಪಿಸಬೇಕು.

ಇಂದು ಕೈಗೊಂಡ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ ಮತ್ತು ಆರಾಮ ತರುತ್ತದೆ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು.

ಪತ್ನಿಯ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಅವಳಿಗೆ ಕೋಪ ತರಬಹುದಾದ್ದರಿಂದ ಹಾಗೆ ಮಾಡಬೇಡಿ. ನಿಮ್ಮ ಕೆಲಸವನ್ನು ನೋಡಿಕೊಳ್ಳುವುದು ಉತ್ತಮ. ಆದಷ್ಟು ಕಡಿಮೆ ಹಸ್ತಕ್ಷೇಪ ಮಾಡಿ, ಇಲ್ಲದಿದ್ದರೆ ಅದು ಅವಲಂಬನೆಯನ್ನು ಉಂಟುಮಾಡಬಹುದು.

ತಂದೆಯು ನಿಮ್ಮ ಆಸ್ತಿಯ ಉತ್ತರಾಧಿಕಾರಿತ್ವದಿಂದ ತಪ್ಪಿಸಬಹುದು. ಆದರೆ ಧೃತಿಗೆಡಬೇಡಿ. ಅಭ್ಯುದಯ ಮನಸ್ಸಿಗೆ ಮುದ ನೀಡಿದರೆ ಅಭಾವವನ್ನು ಬಲವಾಗಿಸಿಕೊಂಡು ನೆನಪಿಡಿ. ನೀವು ನಿಮ್ಮನ್ನು ರೋಮಾಂಚಕ ಪರಿಸ್ಥಿತಿಯಲ್ಲಿ ಎದುರಿಸಬಹುದು

ಸಂತೋಷದ ಸುದ್ದಿ ಪಡೆಯುವ ಸಾಧ್ಯತೆಯಿದೆ. ಯಾರ ಹತ್ತಿರವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಇಂದು ಯಾವುದೇ ಪರಿಸ್ಥಿತಿಯಲ್ಲಿ ಸಾಲವನ್ನು ಮರುಪಾವತಿಸುತ್ತಾರೆ, ಇದರಿಂದ ಆರ್ಥಿಕವಾಗಿ ಪರಿಸ್ಥಿತಿ ಸ್ವಲ್ಪ ದುರ್ಬಲವಾಗಿರುತ್ತದೆ.

ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ಸಹಾಯ ಮಾಡುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ಇಂವು ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆಯಿದೆ

ಬೆಂಬಲ ನೀಡುವ ಸ್ನೇಹಿತರು ನಿಮಗೆ ಸಂತೋಷವಾಗಿರುತ್ತಾರೆ. ಆಹ್ವಾನಿಸಿದ ಅತಿಥಿಯನ್ನು ಇಂದು ಮನೆಗೆ ಬರಬಹುದು ಆದರೆ ಈ ಅತಿಥಿಯ ಅದೃಷ್ಟದ ಕಾರಣದಿಂದ ಇಂದು ನೀವು ಆರ್ಥಿಕ ಲಾಭವನ್ನು ಪಡೆಯಬಹುದು.

ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು. ಬಾಕಿ ಇರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು.

ಆರೋಗ್ಯದ ಬಗ್ಗೆ ಮಾಡಿಕೊಳ್ಳಬೇಕು. ವ್ಯಾಪಾರಿಗಳಿಗೆ ಇಂದು ವ್ಯಾಪಾರದಲ್ಲಿ ಹಾನಿ ಉಂಟಾಗಬಹುದು ಮತ್ತು ತಮ್ಮ ವ್ಯಾಪಾರವನ್ನು ಉತ್ತಮಗೊಳಿಸಲು ನಿಮಗೆ ಹಣವನ್ನು ಖರ್ಚು ಮಾಡಬಹುದು ನಡೆಸಿದೆ. ನಿಮ್ಮ ಜೊತೆಗಿರುವ ನಿಮ್ಮೊಂದಿಗೆ ಬಹಳ ಸಂತೋಷದಿಂದಿಲ್ಲ.

ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲು. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ

ಮುರುಗೇಶ್ ನಿರಾಣಿ ಅವರೊಂದಿಗಿನ ಭೇಟಿ ಕೇವಲ ಆಕಸ್ಮಿಕವಾಗಿದ್ದು, ಯಾವುದೇ ರಾಜಕೀಯ ಒಪ್ಪಂದ ಅಥವಾ ಸಂಧಾನ ನಡೆದಿಲ್ಲ

ನಿರಾಣಿ ಭೇಟಿ, ಮಾತುಕತೆ ಹಿಂದಿನ ವಾಸ್ತವ ಬಿಚ್ಚಿಟ್ಟ ಶಾಸಕ ಯತ್ನಾಳ್

ಉದಯವಾಹಿನಿ, ವಿಜಯಪುರ

ಬಿವೈ ವಿಜಯೇಂದ್ರ, ಮುರುಗೇಶ್ ನಿರಾಣಿ ಭೇಟಿ ಬಗೆಗಿನ ಎಲ್ಲಾ ಊಹಾಪೋಹಗಳಿಗೆ ಸ್ವತಃ ಬಸನಗೌಡ ಪಾಟೀಲ್ ಯತ್ನಾಳ್ ಸ್ಪಷ್ಟನೆ ನೀಡಿದ್ದಾರೆ. "ನಮ್ಮ ನಡುವೆ ಯಾವುದೇ ಸಂಧಾನವೂ ಆಗಿಲ್ಲ, ಒಪ್ಪಂದವೂ ನಡೆದಿಲ್ಲ" ಎಂದು ತಿಳಿಸಿದ್ದಾರೆ.

1. ಚಬ್ಬಿ ಗ್ರಾಮದಲ್ಲಿ ನಡೆದಿದ್ದೇನು?
2. ನಿರಾಣಿ ಭೇಟಿ ಕೇವಲ ಆಕಸ್ಮಿಕ
3. ಒಳ್ಳೆಯ ಕಾಲ ಬಂದೇ ಬರುತ್ತದೆ

ರಾಜ್ಯ ಬಿಜೆಪಿಯಲ್ಲಿನ ಭಿನ್ನಮತ, ನಾಯಕರ ನಡುವಿನ ಮುಸುಕಿನ ಗುದ್ದಾಟದ ನಡುವೆಯೇ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಮಾಜಿ ಸಚಿವ ಮುರುಗೇಶ್ ನಿರಾಣಿ ಅವರೊಂದಿಗೆ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಇತ್ತೀಚೆಗೆ ನಡೆಸಿದ ಭೇಟಿಗಳು ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದ್ದವು. ಬುಧವಾರ ವಿಜಯಪುರದಲ್ಲಿ ಮಾಧ್ಯಮಗಳೊಂದಿ ಮಾತನಾಡಿದ ಯತ್ನಾಳ್ ಅವರು ಭೇಟಿ ಹಿಂದಿನ ವಾಸ್ತವ ಬಿಚ್ಚಿಟ್ಟಿದ್ದಾರೆ.

ವಿಜಯೇಂದ್ರ ಅವರೊಂದಿಗೆ ಒಂದೇ ವೇದಿಕೆ ಹಂಚಿಕೊಂಡ ಹಾಗೂ ಭೇಟಿಯಾದ ಕುರಿತು ಮಾತನಾಡಿದ ಯತ್ನಾಳ್, "ಚಬ್ಬಿ ಗ್ರಾಮದಲ್ಲಿ ಜೈನ ಸಮುದಾಯದ ಕಲ್ಯಾಣ ಮಂಟಪ ನಿರ್ಮಾಣಕ್ಕಾಗಿ ಭೂಮಿಪೂಜೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಆ ಕಾರ್ಯಕ್ರಮಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ನಾವೆಲ್ಲರೂ ಒಟ್ಟಾಗಿ ಹೋಗಿದ್ದೆವು. ಕಾರ್ಯಕ್ರಮ ಮುಗಿದ ನಂತರ ಸ್ಥಳೀಯ ಪತ್ರಕರ್ತರೊಬ್ಬರ ಮನೆಯಲ್ಲಿ

ಉದಯವಾಹಿನಿ ಚಿತ್ರ

ನಮಗೆ ಊಟದ ವ್ಯವಸ್ಥೆ ಮಾಡಲಾಗಿತ್ತು."

"ನಾವು ಊಟ ಮುಗಿಸಿ, ಇನ್ನೇನು ಚಹಾ ಕುಡಿದು ಅಲ್ಲಿಂದ ಹೊರಡಬೇಕು ಎನ್ನುವಷ್ಟರಲ್ಲಿ ಬಿ.ವೈ. ವಿಜಯೇಂದ್ರ ಅಲ್ಲಿಗೆ ಬಂದರು. ಪತ್ರಕರ್ತರು ಪಕ್ಷಾತೀತರಾಗಿರುತ್ತಾರೆ, ಅವರ ಮನೆಯಲ್ಲಿ ಕುಳಿತು ರಾಜಕೀಯ ಮಾತಾಡಲು, ಒಪ್ಪಂದ ಮಾಡಿಕೊಳ್ಳಲು ಸಾಧ್ಯವೇ? ಎದುರಿಗೆ ಸಿಕ್ಕಾಗ ಸಾಮಾನ್ಯವಾಗಿ ಎಲ್ಲರೂ ಕೇಳುವಂತೆ 'ಆರಾಮ ಇದ್ದೀರಾ? ಆರಾಮ್ ರೀ, ಆರಾಮು' ಎಂದು ಯೋಗಕ್ಷೇಮ ವಿಚಾರಿಸಿಕೊಂಡೆವು ಅಷ್ಟೇ. ಅದನ್ನು ಬಿಟ್ಟು ಅಲ್ಲಿ ಯಾವುದೇ ರಾಜಕೀಯ ಚರ್ಚೆ ಒಂದು ಹನಿಯಷ್ಟೂ ನಡೆದಿಲ್ಲ" ಎಂದು ವಿವರಿಸಿದರು. ಮಾಜಿ ಸಚಿವ ಮುರುಗೇಶ್ ನಿರಾಣಿ ಅವರ ಭೇಟಿ ಕುರಿತು ಮಾತನಾಡಿದ ಅವರು, "ಕಳೆದ 30–35 ವರ್ಷಗಳಿಂದಲೂ ಆಯುಧ ಪೂಜೆಯ ದಿನ ನಾರಾಯಣಸಾ ಭಾಂಡಗೆ ಅವರ ಮನೆಗೆ ಹೋಗಿ ದೇವಿಯ ಪ್ರಸಾದ ಸ್ವೀಕರಿಸುವುದು ನನ್ನ ವಾಡಿಕೆ. ಪ್ರತಿ ವರ್ಷದಂತೆ ಈ ಬಾರಿಯೂ ನಾನು ಹೋಗಿದ್ದೆ. ಆಕಸ್ಮಿಕವಾಗಿ ಅವರೂ ನಿರಾಣಿ ಅವರಿಗೆ ಆಹ್ವಾನ ನೀಡಿದ್ದರು, ಹೀಗಾಗಿ ಅವರೂ ಬಂದಿದ್ದರು. ಇಬ್ಬರೂ ಪ್ರಸಾದ ತೆಗೆದುಕೊಂಡು, ನಮ್ಮ ಪಾಡಿಗೆ ನಾವು ನಮ್ಮ ಕಾರಿನಲ್ಲಿ ಹೊರಟೆವು, ಅವರ ಪಾಡಿಗೆ ಅವರು ಹೋದರು. ಇದರಲ್ಲಿ ಯಾವುದೇ ರಾಜಕೀಯ ಒಳಾರ್ಥಗಳಿಲ್ಲ" ಎಂದರು.

ಪಕ್ಷದಲ್ಲಿ ಹೊಂದಾಣಿಕೆ ಅಥವಾ ಸಂಧಾನದ ಕುರಿತ ಪ್ರಶ್ನೆಗಳಿಗೆ ಕಟುವಾಗಿ ಉತ್ತರಿಸಿದ ಯತ್ನಾಳ್, "ರಾಜಕೀಯ ಮಾತುಕತೆ, ಒಪ್ಪಂದ ಅಥವಾ ಸಂಧಾನಗಳು ಈ ರೀತಿ ಸಾರ್ವಜನಿಕವಾಗಿ, ಊಟದ ಮನೆಗಳಲ್ಲಿ ನಡೆಯುವುದಿಲ್ಲ. ಅಂತಹ ಮಾತುಕತೆಗಳು ನಡೆಯಬೇಕಾದರೆ ರಹಸ್ಯ ಸ್ಥಳಗಳಲ್ಲಿ ಅಥವಾ ನೇರವಾಗಿ ದೆಹಲಿ ಹೈಕಮಾಂಡ್ ಮಟ್ಟದಲ್ಲೇ ನಡೆಯುತ್ತವೆ. ನಾವಿನ್ನೂ ಯಾವುದೇ ರಾಜಕೀಯ ತೀರ್ಮಾನಗಳನ್ನು ಕೈಗೊಂಡಿಲ್ಲ" ಎಂದು ಹೇಳಿದರು.

> ನನಗೆ ಒಳ್ಳೆಯ ಕಾಲ ಬರುವುದಂತೂ ಖಚಿತ. ವಿಜಯಪುರದ ನಡುಬೀದಿಯಲ್ಲಿ ನಿಂತು ಯಾರೇ ಎಷ್ಟೇ ಶಂಖ ಊದಿದರೂ, ಅಪಸ್ವರ ಎತ್ತಿದರೂ ನನಗೆ ಒಳ್ಳೆಯ ಕಾಲ ಬರುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ.
> – ಬಸನಗೌಡ ಪಾಟೀಲ್ ಯತ್ನಾಳ್

ಯಾರ ಮುಂದೆಯೂ ಕೈಕಟ್ಟಲಾರೆ

ನಾನು ಪಕ್ಷದಲ್ಲಿ ಸ್ಥಾನಮಾನ ನೀಡಿ ಎಂದು ದೆಹಲಿಯ ಯಾವ ರಾಷ್ಟ್ರೀಯ ನಾಯಕರ ಮುಂದೆಯೂ ಕೈಕಟ್ಟಿ ನಿಲ್ಲುವುದಿಲ್ಲ, ಅಂಗಲಾಚಿ ಬೇಡುವುದಿಲ್ಲ. ಬೇಕಿದ್ದರೆ ಮಾಧ್ಯಮಗಳೇ ನನ್ನ ಹಿಂದೆ ಗುಪ್ತಚರರನ್ನು ಬಿಟ್ಟು ನೋಡಿಕೊಳ್ಳಲಿ ಎಂದು ಸವಾಲು ಹಾಕಿದರು.

ಉದಯವಾಹಿನಿ ಚಿತ್ರ

ಕಾಂಗ್ರೇಸ್ ಅಭ್ಯರ್ಥಿ ಶರಣಪ್ಪ ಮಟ್ಟೂರಗೆ ಮತನೀಡಿ

ಉದಯವಾಹಿನಿ, ಚಿಂಚೋಳಿ

ಈಶಾನ್ಯ ಶಿಕ್ಷಕರ ಮತಕ್ಷೇತ್ರವು ಬುದ್ಧಿವಂತರ ಮತ ಪಡೆಯುವ ಚುನಾವಣೆಯಾಗಿದೆ ಯಾವುದೇ ಅಮಿಷಕ್ಕೆ ಒಳಗಾಗದೆ ಇಂಥಹ ಚುನಾವಣೆಯಲಿ ಬಹುಮುಖ್ಯ ಪಾತ್ರ ವಹಿಸುತ್ತದೆ,ದೇಶದ ಭವಿಷ್ಯದ ಬಗ್ಗೆ ಚಿಂತನೆ ಮಾಡಿ ಕಾಂಗ್ರೆಸ್ ಪಕ್ಷದ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಅಭ್ಯರ್ಥಿ ಶರಣಪ್ಪ ಮಟ್ಟೂರಗೆ ಬಹುತದಿಂದ ಗೆಲ್ಲಿಸುವಂತೆ ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ ಮನವಿ ಮಾಡಿದರು.

ಚಿಂಚೋಳಿ ಪಟ್ಟಣದ ವೀರೇಂದ್ರ ಪಾಟೀಲ ಪಬ್ಲಿಕ್ ಶಾಲೆಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಶಿಕ್ಷಣ ಮತ್ತು ಶಿಕ್ಷಕರ ಸಮಸ್ಯೆ ಅಲ್ಲದೆ ಒಪಿಎಸ್ ಜಾರಿಗೆ ತರಲು ನಮ್ಮ ಕಾಂಗ್ರೆಸ್ ಸರ್ಕಾರ ನಿರ್ಣಯ ಕೈಗೊಂಡಿದೆ. ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದಾಗಿ ರಾಜ್ಯದಲ್ಲಿಯೇ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಫಲಿತಾಂಶ ಅತಿ ಕಡಿಮೆಯಾಗಿದೆ ವಿಷಯ ಶಿಕ್ಷಕರ ಸಮಸ್ಯೆಯಿಂದಾಗಿ ಫಲಿತಾಂಶ ದಲ್ಲಿ ಕೊನೆಯ ಸ್ಥಾನದಲ್ಲಿದೆ. ರಾಜ್ಯದಲ್ಲಿ 72ಸಾವಿರ ಖಾಲಿ ಹುದ್ಧೆಗಳು ಭರ್ತಿ ಮಾಡಲಾಗುತ್ತಿದೆ,ಅದರಲ್ಲಿ 25ಸಾವಿರ ಖಾಲಿ ಹುದ್ಧೆಗಳು ಕಲ್ಯಾಣ ಕರ್ನಾಟಕ ಕ್ಕೆ ಒಳಪಟ್ಟಿವೆ,ಶಿಕ್ಷಕರ 09ಸಾವಿರ ಹುದ್ಧೆಗಳು ಭರ್ತಿಯಾಗಲಿವೆ,72ಸಾವಿರ ಹುದ್ಧೆಗಳಿಂದ ನಿರೋದ್ಯೋಗಿ ಯುವಕರಿಗೆ ಉದ್ಯೋಗ ಅವಕಾಶ ಸಿಗಲಿದೆ ಎಂದರು. ಶಿಕ್ಷಣ ಶಿಕ್ಷಕರ ಮೇಲಿನ ಹೊರೆಗಳನ್ನು ಕಡಿಮೆ ಮಾಡಿಸಿ ಜಾತಿ ಜಿಲ್ಲೆ ಪರಿಗಣಿಸಬೇಡಿ ಜ್ಞಾನಕ್ಕೆ ಯಾವುದೇ ಜಾತಿಯಿಲ್ಲ ವ್ಯಕ್ತಿತ್ವ ಮತ್ತು ಸಿದ್ಧಾಂತ ನೋಡಿ ಮತ ಚಲಾಯಿಸಲು ಮನವಿ ಮಾಡಿದರು. ಪ್ರತಿಯೊಬ್ಬ ನಾಗರಿಕರಿಗೆ ಶಿಕ್ಷಣ ಸಿಗಬೇಕು ಶಿಕ್ಷಣದಿಂದ ವಂಚಿತರಾಗಬಾರದೆಂದು ಕಾಂಗ್ರೆಸ್ ಸರ್ಕಾರ ಯೋಜನೆ ರೂಪಿಸಿದೆ ಶಿಕ್ಷಕರಿಗೆ ಯಾವ ದೇಶದಲ್ಲಿ ಗೌರವ ಸಿಗುತ್ತದೆಯೋ ಆ ದೇಶ ಪ್ರಗತಿ ಹೊಂದುತ್ತದೆ. ಅತಿಥಿ ಶಿಕ್ಷಕರು ಹೊರ ಸಂಪನ್ಮೂಲ ಶಿಕ್ಷಕರಿಗೆ ನೀಡುವ ಹತ್ತು ಸಾವಿರ ರೂ.ವೇತನ ನೀಡಿ ಶೋಷಣೆ ಮಾಡಲಾಗುತ್ತಿದೆ ಇದು ಹೋಗಬೇಕು ಕಾಂಗ್ರೆಸ್ ಪಕ್ಷ ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ಕೊಡಲಾಗುವುದೆಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಮಾಲಿ,ಅಬ್ದುಲ್ ಬಾಷೀದ್,ಅಜೀತ ಪಾಟೀಲ,ಶೈಲೇಶ ಹುಲಿ,ಲಕ್ಷ್ಮಣ ಆವುಂಟಿ,ಶರಣುಪಾಟೀಲ್,ಲಕ್ಷ್ಮಿದೇವಿ ಕೊರವಿ,ಪ್ರವೀಣ ಟಿಟಿ,ಸಂತೋಷ ಗುತ್ತೇದಾರ,ಅನಂದಕುಮಾರ ಟೈಗರ್,ಶಬ್ಬೀರ ಅಹೇಮದ್,ಆರ್.ಗಣಪತರಾವ,ಮಹ್ಮದ್ ನಾಯ್ಕೋಡಿ,ಮತೀನ್ ಸೌದಾಗಾರ,ರಾಜು ರಾಠೋಡ,ವಿಶ್ವ ಬೀರನಳ್ಳಿ,ಅನೇಕರಿದ್ದರು.

ಖಾಸಮಠದಲ್ಲಿ ಶ್ರದ್ಧಾ ಭಕ್ತಿಯಿಂದ ಬನ್ನಿ ಮುಡಿಯುವ ಹಬ್ಬ ಆಚರಣೆ

ಉದಯವಾಹಿನಿ, ಗುರುಮಠಕಲ್

ವಿಜಯದಶಮಿ ಹಾಗೂ ದಸರ ಮಹೋತ್ಸವದ ಶುಭ ಸಂದರ್ಭದಲ್ಲಿ ನಗರದ ವೀರಶೈವ ಸಮಾಜದ ವತಿಯಿಂದ ಐತಿಹಾಸಿಕ ಮತ್ತು ಪವಿತ್ರ ಕ್ಷೇತ್ರವಾದ ಶ್ರೀ ಖಾಸಮಠದಲ್ಲಿ ಶ್ರದ್ಧಾ–ಭಕ್ತಿಯಿಂದ ಬನ್ನಿ ಮುಡಿಯುವ ಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ವೀರಶೈವ ಸಮಾಜದ ಅಧ್ಯಕ್ಷ ಶಿವಾನಂದ ಬೂದಿ ಅವರು, "ದಸರಾ ಮಹೋತ್ಸವವು ಅಧರ್ಮದ ಮೇಲೆ ಧರ್ಮದ ವಿಜಯವನ್ನು ಸಾರುವ ಪವಿತ್ರ ಪರ್ವಕಾಲವಾಗಿದೆ. ಸನಾತನ ಸಂಸ್ಕೃತಿಯಲ್ಲಿ ಬನ್ನಿ ಅಂದರೆ ಶಮಿ ವೃಕ್ಷಕ್ಕೆ ಅತ್ಯಂತ ಪವಿತ್ರ ಸ್ಥಾನವಿದೆ. ಮಹಾಭಾರತದ ಕಾಲದಲ್ಲಿ ಪಾಂಡವರು ತಮ್ಮ ಅಜ್ಞಾತವಾಸದ ಅವಧಿಯಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಶಮಿ ವೃಕ್ಷದಲ್ಲಿ ಬಚ್ಚಿಟ್ಟು ನಂತರ ವಿಜಯ ಸಾಧಿಸಿದ್ದರು ಎಂಬ ನಂಬಿಕೆಯಿದೆ. ಬನ್ನಿ ಪತ್ರೆಯನ್ನು ಬಂಗಾರದ ಸಂಕೇತವೆಂದು ಭಾವಿಸಿ ಪರಸ್ಪರ ಹಂಚಿಕೊಳ್ಳುವುದರಿಂದ ಸಮಾಜದಲ್ಲಿ ಪ್ರೀತಿ, ಸೌಹಾರ್ದತೆ, ಸಾಮರಸ್ಯ ಮತ್ತು ಸಮೃದ್ಧಿ ಹೆಚ್ಚಾಗುತ್ತದೆ. ನಮ್ಮ ಸಂಸ್ಕೃತಿ ಮತ್ತು ಆಚಾರ–ವಿಚಾರಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ

ಉದಯವಾಹಿನಿ ಚಿತ್ರ

ಇಂತಹ ಆಚರಣೆಗಳು ಪ್ರಮುಖ ಪಾತ್ರ ವಹಿಸುತ್ತವೆ" ಎಂದು ತಿಳಿಸಿದರು.

ನಂತರ ಸಮಾಜದ ಪ್ರಮುಖರು ಹಾಗೂ ಸದ್ಭಕ್ತರು ಮಠದ ಮುಂಭಾಗದಲ್ಲಿರುವ ಬನ್ನಿ ವೃಕ್ಷಕ್ಕೆ ವಿಶೇಷ ಪೂಜೆ ಸಲ್ಲಿಸಿ, ಬನ್ನಿ ಪತ್ರೆಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಮೂಲಕ ದಸರಾ ಹಬ್ಬವನ್ನು ವೈಭವದಿಂದ ಆಚರಿಸಿದರು.

ಈ ಪವಿತ್ರ ಕಾರ್ಯಕ್ರಮದಲ್ಲಿ ವೀರಶೈವ ಸಮಾಜದ ಗಣ್ಯರು, ಹಿರಿಯರು ಹಾಗೂ ಗುರುಮಠಕಲ್ ನಗರದ ಅಪಾರ ಸಂಖ್ಯೆಯ ಸಾರ್ವಜನಿಕರು ಭಾಗವಹಿಸಿ ಬನ್ನಿ ಮುಡಿದು ಶುಭಾಶಯ ವಿನಿಮಯ ಮಾಡಿಕೊಂಡು ದಸರಾ ಸಂಭ್ರಮವನ್ನು ಇಮ್ಮಡಿಗೊಳಿಸಿದರು.

ಜಗನ್ಮಾತೆ ಭಗಲಾಂಬಿಕೆ ದೇವಿ ದರ್ಶನ ಪಡೆದ ಮಹೇಶರಡ್ಡಿ ಮುದ್ನಾಳ

ಉದಯವಾಹಿನಿ, ಯಾದಗಿರಿ

ದಸರಾ ಹಬ್ಬದ ನವರಾತ್ರಿ ಉತ್ಸವದ ಅಂಗವಾಗಿ ಅಕ್ಟೋಬರ್ 19ರಂದು ಸುಕ್ಷೇತ್ರ ಅಬ್ಬೆತುಮಕೂರಿನ ವಿಶ್ವಾರಾಧ್ಯ ಸಿದ್ಧಸಂಸ್ಥಾನ ಮಠದಲ್ಲಿ ಆಯೋಜಿಸಲಾಗಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಯುವ ಮುಖಂಡ ಮಹೇಶರಡ್ಡಿ ಮುದ್ನಾಳ ಅವರು ಪಾಲ್ಗೊಂಡು ಜಗನ್ಮಾತೆ ಭಗಲಾಂಬಿಕೆ ದೇವಿಯ ದರ್ಶನ ಪಡೆದು ನಾಡಿನ ಒಳಿತಿಗಾಗಿ ಪ್ರಾರ್ಥಿಸಿದರು.

ಉದಯವಾಹಿನಿ ಚಿತ್ರ

ಮಠದ ಜಗನ್ಮಾತೆ ಭಗಲಾಂಬಿಕೆ ದೇವಾಲಯದಲ್ಲಿ ನಡೆದ ದೇವಿ ಪಾರಾಯಣ, ದೇವಿ ಪುರಾಣ ಹಾಗೂ ಪಂಚಮಹಾ ಮಂಗಳಾರತಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿ ಭಕ್ತಿ ಸಮರ್ಪಿಸಿದರು.

ಬಳಿಕ ಮಠಕ್ಕೆ ಭೇಟಿ ನೀಡಿದ ಮಹೇಶರಡ್ಡಿ ಮುದ್ನಾಳ ಅವರು ವಿಶ್ವಾರಾಧ್ಯರ ಗದ್ದುಗೆ ದರ್ಶನ ಪಡೆದು, ಮಠದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಡಾ. ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಕಿರಿಯ ಪೂಜ್ಯರಾದ ಶ್ರೀ ಶಿವಶೇಖರ ಮಹಾಸ್ವಾಮಿಗಳ ದರ್ಶನ ಪಡೆದು ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಶರಣಬೋಪಾಲರಡ್ಡಿ ಗೋಸ್ವಾಮಿ, ರುದ್ರಗೌಡ ಪಾಟೀಲ, ವೆಂಕಟರಡ್ಡಿ ಮಾಲಿ ಪಾಟೀಲ ಅಬ್ಬೆತುಮಕೂರು, ವಿಲಾಸ್ ಪಾಟೀಲ್, ವೆಂಕಟರಡ್ಡಿ ಅಬ್ಬೆತುಮಕೂರು, ಸ್ವಾಮಿದೇವ ದಾಸನಕೇರಿ, ಮಾರುತಿ ಕಲಾಲ್, ನಾಗರಾಜಗೌಡ ಮಾನಸಗಲ್, ರಮೇಶ ದೊಡ್ಡಮನಿ, ಲಕ್ಷ್ಮೀಪುತ್ರ ಮಾಲಿ ಪಾಟೀಲ, ಶರಣಗೌಡ ಕ್ಯಾತನಾಳ, ನಾನು ರಾಠೋಡ, ಶ್ರೀನಾಥ್ ಜೈನ್, ಬಸಣ್ಣಗೌಡ ನಾಯ್ಕಲ್, ಮಲ್ಲು ಸ್ವಾಮಿ ಗುರಸಣಗಿ, ಸಿದ್ದು ಪೂಜಾರಿ, ಸೂಗುರೇಶ ಚಾಮಾ, ಶಿವು ಗುತ್ತೇದಾರ, ವೀರೇಶ ರಾಮಸಮುದ್ರ, ಪವನ್ ಮಡಿವಾಳ, ಲಕ್ಷ್ಮಣ ಹಾಗೂ ಮಾರುತಿ ಮುದ್ನಾಳ ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ಕೊಳ್ಳೂರಲ್ಲಿ ಸಂಭ್ರಮದ ದಸರಾ ಆಚರಣೆ

ಉದಯವಾಹಿನಿ, ಔರಾದ್

ತಾಲ್ಲೂಕಿನ ಕೊಳ್ಳೂರ ಗ್ರಾಮದಲ್ಲಿ ದಸರಾ ಹಬ್ಬವನ್ನು ಪರಸ್ಪರ ಬನ್ನಿ ವಿನಿಮಯ ಮಾಡಿಕೊಂಡು ಶುಭ ಕೋರಿ ಸಂಭ್ರಮಿಸಿದರು.

ಗ್ರಾಮದ ಹನುಮಾನ ಮಂದಿರ ಹತ್ತಿರದಿಂದ ಗ್ರಾಮದ ಹಿರಿಯರು, ಚಿಣ್ಣರ ಎಲ್ಲರೂ ಒಟ್ಟಾಗಿ ಸೇರಿ ಗ್ರಾಮದ ಹೋರವಲದಲ್ಲಿರುವ ಅಂಬಾ ಭವಾನಿ ಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ದಸರಾ ಮಹೋತ್ಸವಕ್ಕೆ ಚಾಲನೆ ನೀಡಿ ಬನ್ನಿ ವಿನಿಮಯ ಮಾಡಿಕೊಂಡರು. ಗ್ರಾಮದ ಪ್ರತಿ ಮನೆಗೆ ತೆರಳಿ ದೇವರ ಜಗಲಿ ಮೇಲೆ ಕೂಡಿಸಿರುವ ಘಟ್ಟಕಕ್ಕೆ ಬಂಗಾರ ಬೆಳ್ಳಿಯನ್ನು ಅರ್ಪಿಸಿ ನಂತರ ಹಿರಿಯರಿಗೆ ನೀಡಿ ಆಶೀರ್ವಾದ ಪಡೆದುಕೊಂಡ ದೃಶ್ಯ ಸಾಮಾನ್ಯವಾಗಿ ಕಂಡುಬಂತು. ಈ ಸಂದರ್ಭದಲ್ಲಿ ಹಿರಿಯ ಮುಖಂಡ ಚಂದ್ರಕಾಂತ್ ಪಾಟೀಲ್, ಪ್ರಥಮ ದರ್ಜೆ ಗುತ್ತಿಗೆದಾರ ಗುರುನಾಥ ಕೊಳ್ಳೂರ, ಅವಿನಾಶ ಪಾಟೀಲ, ಸಾಗರ ಪಾಟೀಲ, ಸಚಿನ ಗುರುನಾಥ ಕೊಳ್ಳೂರ, ಸಹಬಾಳ್ವೆ ಸಂಸ್ಥೆಯ ಅಧ್ಯಕ್ಷ ವಿಶ್ವನಾಥ ಸ್ವಾಮಿ, ಸುರ್ಯಕಾಂತ ಮಜಗೆ, ಕಾಶಿನಾಥ ಧಬಾಡೆ, ಶಿವಲಿಂಗಯ್ಯ ಸ್ವಾಮಿ, ಶಿವರಾಜ ಹೋನ್ನಶಟ್ಟೆ, ಹಣಮಂತರಾವ ಪಾಟೀಲ, ಸೋಮನಾಥ ಸ್ವಾಮಿ, ಬಸವರಾಜ ಖಂಡೆ, ರಾಜಕುಮಾರ ದೇಗಲವಾಡೆ, ಸುರ್ಯಕಾಂತ ರ್‍ಯಾಕಲೆ, ಅಶೋಕ ಕೊಳ್ಳೂರ, ಸಂಜುಕುಮಾರ ಅತನುರೆ, ಕಾಶಿನಾಥ ಸ್ವಾಮಿ, ನಾಗೇಶ ದೇಗಲವಾಡೆ, ಸಿದ್ದಪ್ಪ ಕಂಗಟೆ, ಗಜಾನಂದ ಸ್ವಾಮಿ, ಸಚ್ಚಿದಾನಂದ ಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

24ರಿಂದ 'ಕಲ್ಯಾಣ ಪರ್ವ' ರಜತ ಮಹೋತ್ಸವ

ಉದಯವಾಹಿನಿ, ಬೀದರ್

ವಿಶ್ವಗುರು ಬಸವಣ್ಣನವರ ತತ್ವ–ಸಿದ್ಧಾಂತಗಳು, ವಚನ ಸಾಹಿತ್ಯದ ಸಂದೇಶ ಹಾಗೂ ಶರಣರ ಸಮಾನತೆಯ ಆಶಯಗಳನ್ನು ವಿಶ್ವದೆಲ್ಲೆಡೆ ಪಸರಿಸುವ ಉದ್ದೇಶದಿಂದ ಬಸವ ಧರ್ಮ ಪೀಠ ಹಾಗೂ ಕಲ್ಯಾಣ ಪರ್ವ ಉತ್ಸವ ಸಮಿತಿ ವತಿಯಿಂದ ಅಕ್ಟೋಬರ್ 24ರಿಂದ 26ರವರೆಗೆ ಬಸವಕಲ್ಯಾಣದಲ್ಲಿ 25ನೇ ವರ್ಷದ 'ಕಲ್ಯಾಣ ಪರ್ವ' ರಜತ ಮಹೋತ್ಸವವನ್ನು ಅದ್ದೂರಿಯಾಗಿ ಆಯೋಜಿಸಲಾಗಿದೆ ಎಂದು ಬಸವಕಲ್ಯಾಣದ ಅಲ್ಲಮಪ್ರಭು ಶೂನ್ಯ ಪೀಠದ ಪೂಜ್ಯ ಸಿದ್ಧರಾಮೇಶ್ವರ ಸ್ವಾಮೀಜಿ ನುಡಿದರು. ಸೋಮವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಬಸವಕಲ್ಯಾಣದ 108 ಅಡಿ ಎತ್ತರದ ಬಸವಣ್ಣನವರ ಪ್ರತಿಮೆ ಇರುವ ಬಸವ ಮಹಾಮನೆ ಆವರಣದಲ್ಲಿ ಮೂರು ದಿನಗಳ ಕಾಲ ರಾಷ್ಟ್ರಮಟ್ಟದ ಧಾರ್ಮಿಕ, ಸಾಮಾಜಿಕ, ವೈಚಾರಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು. ಲಿಂಗೈಕ್ಯ ಡಾ. ಮಾತೆ ಮಹಾದೇವಿ ಅವರ ನೇತೃತ್ವದಲ್ಲಿ 2001ರಲ್ಲಿ ಆರಂಭವಾದ ಕಲ್ಯಾಣ ಪರ್ವವು 24 ವರ್ಷಗಳನ್ನು ಪೂರೈಸಿ ರಜತ ಮಹೋತ್ಸವದ ಸಂಭ್ರಮದಲ್ಲಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲದೆ ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಗುಜರಾತ್ ಸೇರಿದಂತೆ ವಿವಿಧ ರಾಜ್ಯಗಳಿಂದ ಸಾವಿರಾರು ಶರಣರು, ಬಸವಾಭಿಮಾನಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಪಡಿತರ ಅಕ್ಕಿ ಅಕ್ರಮ ದಾಸ್ತಾನು ಪತ್ತೆ: 15 ಲಕ್ಷ ಮೌಲ್ಯದ ಅಕ್ಕಿ, ಜೋಳ ವಶಕ್ಕೆ!

ಉದಯವಾಹಿನಿ, ಯಾದಗಿರಿ

ಬಡವರ ಹಸಿವು ನೀಗಿಸಲು ಸರ್ಕಾರ ಜಾರಿಗೆ ತಂದಿರುವ ಅನ್ನಭಾಗ್ಯ ಯೋಜನೆಯ ಪಡಿತರ ಅಕ್ಕಿ ಅಕ್ರಮವಾಗಿ ಸಂಗ್ರಹಿಸಿರುವ ಪ್ರಕರಣ ಯಾದಗಿರಿ ನಗರದಲ್ಲಿ ಬೆಳಕಿಗೆ ಬಂದಿದೆ. ನಗರದ ಗಂಜ್ ಪ್ರದೇಶದಲ್ಲಿರುವ ಗೋಡೌನ್‌ವೊಂದರಲ್ಲಿ ವಾಹನಗಳಿಗೆ ಅಕ್ಕಿ ಲೋಡ್ ಮಾಡುತ್ತಿದ್ದ ಸಂದರ್ಭದಲ್ಲಿ ಪೊಲೀಸರು ದಾಳಿ ನಡೆಸಿದ್ದು, ಸುಮಾರು 15 ಲಕ್ಷ ಮೌಲ್ಯದ 330 ಕ್ವಿಂಟಲ್ ಅಕ್ಕಿ ಹಾಗೂ 83 ಕ್ವಿಂಟಲ್ ಜೋಳವನ್ನು ವಶಪಡಿಸಿಕೊಂಡಿದ್ದಾರೆ. ಅಕ್ರಮ ಸಾಗಣೆಗೆ ಬಳಸಲಾಗುತ್ತಿದೆ ಎನ್ನಲಾದ ನಾಲ್ಕು ವಾಹನಗಳನ್ನೂ ಜಪ್ತಿ ಮಾಡಲಾಗಿದೆ. ಪೊಲೀಸರ 112 ತುರ್ತು ಸ್ಪಂದನಾ ತಂಡ ನಡೆಸಿದ ದಾಳಿಯಿಂದ ಪಡಿತರ ಧಾನ್ಯಗಳ ಅಕ್ರಮ ದಾಸ್ತಾನು ಪ್ರಕರಣ ಬೆಳಕಿಗೆ ಬಂದಿದೆ. ಈ ಸಂಬಂಧ ಯಾದಗಿರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಹಾಗೂ ಆಹಾರ ಇಲಾಖೆ ಅಧಿಕಾರಿಗಳು ತನಿಖೆ ಕೈಗೊಂಡಿದ್ದಾರೆ.

ಪಡಿತರ ಧಾನ್ಯಗಳು ಗೋಡೌನ್‌ಗೆ ಬಂದಿದ್ದು ಹೇಗೆ? ಸರ್ಕಾರ ಬಡ

ಉದಯವಾಹಿನಿ ಚಿತ್ರ

ಕುಟುಂಬಗಳಿಗೆ ವಿತರಿಸಲು ನೀಡುವ ಪಡಿತರ ಅಕ್ಕಿ ಮತ್ತು ಜೋಳ ಅಕ್ರಮವಾಗಿ ಗೋಡೌನ್‌ನಲ್ಲಿ ಸಂಗ್ರಹವಾಗಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈ ಧಾನ್ಯಗಳು ಯಾವ ನ್ಯಾಯಬೆಲೆ ಅಂಗಡಿಗಳಿಂದ ಬಂದಿವೆ? ಅಕ್ರಮ ದಾಸ್ತಾನಿನ ಹಿಂದೆ ಯಾರಿದ್ದಾರೆ? ಧಾನ್ಯಗಳನ್ನು ಎಲ್ಲಿಗೆ ಸಾಗಿಸಲು ಸಿದ್ಧತೆ ನಡೆಸಲಾಗಿತ್ತು? ಎಂಬ ಪ್ರಶ್ನೆಗಳಿಗೆ ತನಿಖೆಯಿಂದ ಉತ್ತರ ಸಿಗಬೇಕಿದೆ.

ವಿದೇಶಗಳಿಗೆ ರಫ್ತು ಮಾಡುವ ಜಾಲದ ಶಂಕೆ!: ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಆಂಧ್ರಪ್ರದೇಶ ಹಾಗೂ ತೆಲಂಗಾಣ ಮಾರ್ಗವಾಗಿ ವಿಶಾಖಪಟ್ಟಣಂ ಬಂದರಿಗೆ ಸಾಗಿಸಿ, ಅಲ್ಲಿಂದ ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಆದರೆ, ಯಾದಗಿರಿಯಲ್ಲಿ ಪತ್ತೆಯಾದ ಧಾನ್ಯಗಳಿಗೂ ಇಂತಹ ರಫ್ತು ಜಾಲಕ್ಕೂ ನೇರ ಸಂಬಂಧವಿದೆಯೇ ಎಂಬುದು ತನಿಖೆಯಿಂದ ದೃಢಪಡಬೇಕಿದೆ.

ಅಸಲಿ ಸೂತ್ರಧಾರಿಗಳ ಪತ್ತೆಗೆ ಆಗ್ರಹ: ಜಿಲ್ಲೆಯಲ್ಲಿ ಪಡಿತರ ಧಾನ್ಯಗಳ ಅಕ್ರಮ ಸಾಗಣೆ ಹಾಗೂ ದಾಸ್ತಾನು ಪ್ರಕರಣಗಳು ಮರುಕಳಿಸುತ್ತಿರುವ ಹಿನ್ನೆಲೆಯಲ್ಲಿ, ಕೇವಲ ವಾಹನಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲಿಸುವುದಕ್ಕೆ ಸೀಮಿತವಾಗದೆ, ಅಕ್ರಮದ ಮೂಲವನ್ನು ಪತ್ತೆಹಚ್ಚಬೇಕೆಂಬ ಆಗ್ರಹ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ.

ಈ ಧಾನ್ಯಗಳು ಯಾವ ಮೂಲದಿಂದ ಬಂದಿವೆ, ಸಾಗಣೆಯಲ್ಲಿ ಯಾರ ಪಾತ್ರವಿದೆ ಹಾಗೂ ಅಕ್ರಮ ವಹಿವಾಟಿನ ಹಿಂದೆ ಸಂಘಟಿತ ಜಾಲವಿದೆಯೇ ಎಂಬುದನ್ನು ಅಧಿಕಾರಿಗಳು ಸಮಗ್ರವಾಗಿ ತನಿಖೆ ನಡೆಸಬೇಕಿದೆ. ತಪ್ಪಿತಸ್ಥರು ಕಂಡುಬಂದಲ್ಲಿ ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು. ಬಡವರಿಗೆ ತಲುಪಬೇಕಾದ ಪಡಿತರ ಧಾನ್ಯಗಳ ಸೋರಿಕೆಗೆ ಶಾಶ್ವತ ಕಡಿವಾಣ ಹಾಕಬೇಕೆಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ಪ್ರತಿ ದಿನ ಮುನ್ನುಗ್ಗುವ ಧೈರ್ಯ, ಒಳ್ಳೆಯ ದಾರಿಯಲ್ಲಿ ನಡೆಯಲು ವಿವೇಕ ಹಾಗೂ ಇನ್ನೊಬ್ಬರ ಕಷ್ಟ ಅರಿಯುವ ಮನಸ್ಸು ಕೊಡಿ ಎಂದು ಕೇಳಿಕೊಳ್ಳುತ್ತೇನೆ

ಭಕ್ತಿಪ್ರಧಾನ ಗೀತೆ ರಚಿಸಿ, ಪ್ರದರ್ಶಿಸಿದ ನಟ ರವಿಚಂದ್ರನ್

ಉದಯವಾಹಿನಿ, ಶಿವಮೊಗ್ಗ

ಮಹಾನಗರ ಪಾಲಿಕೆ ವತಿಯಿಂದ ನಡೆಯುವ ದಸರಾದಲ್ಲಿ ಯುವ ದಸರಾ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ ನಟ, ನಿರ್ದೇಶಕ, ನಿರ್ಮಾಪಕ, ಸಂಗೀತ ನಿರ್ದೇಶಕ, ವಿತರಕ ಕ್ರೇಜಿಸ್ಟಾರ್ ವಿ.ರವಿಚಂದ್ರನ್ ಅವರು ಶಿವಮೊಗ್ಗ ದಸರಾಗಾಗಿಯೇ ಒಂದು ಭಕ್ತಿಪ್ರಧಾನ ಗೀತೆ ರಚನೆ ಮಾಡಿ, ವೇದಿಕೆಯಲ್ಲಿಯೇ ಅದನ್ನು ಪ್ರದರ್ಶನ ಮಾಡಿಸಿದರು.

1. ಈ ವರ್ಷ ನನ್ನ ಮೇಲೆ ಕಣ್ಣು ಬಿಟ್ಟಿದ್ದಾಳೆ
2. ಇದರಿಂದ ನಾನು ರಾಜ್ಯವನ್ನು ಸುತ್ತುತ್ತಿದ್ದೇನೆ
3. ಎಲ್ಲರೂ ವಿಜೃಂಭಣೆಯಿಂದ ಆಚರಿಸೋಣ

ನಗರದ ಅಲ್ಲಮ ಪ್ರಭು ಮೈದಾನದಲ್ಲಿ ಮಹಾನಗರ ಪಾಲಿಕೆಯ ದಸರಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಮಂಗಳವಾರ ನಡೆದ ಯುವ ದಸರಾ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದ ಅವರು, ನಾಡ ದೇವತೆ ಚಾಮುಂಡೇಶ್ವರಿ ಈ ವರ್ಷ ನನ್ನ ಮೇಲೆ ಕಣ್ಣು ಬಿಟ್ಟಿದ್ದಾಳೆ. ಇದರಿಂದ ನಾನು ರಾಜ್ಯವನ್ನು ಸುತ್ತುತ್ತಿದ್ದೇನೆ. ದಸರಾವನ್ನು ಎಲ್ಲರೂ ಸೇರಿ ವಿಜೃಂಭಣೆಯಿಂದ ಆಚರಿಸೋಣ. ಮನೆಯಲ್ಲಿ ಪ್ರತಿ ದಿನ ಹೆಣ್ಣು ಮಕ್ಕಳು ಲವಲವಿಕೆಯಿಂದ ಓಡಾಡುತ್ತಿದ್ದರೆ, ನಿಮ್ಮ ಮನೆಯ ಹೆಣ್ಣು ಮಕ್ಕಳಿಗೆ ಗೌರವ ನೀಡಿದರೆ ಅದೇ ಹಬ್ಬ ಎಂದರು.

ನಾನು ದೇವರ ಬಳಿ ಪ್ರತಿ ದಿನ ಮುನ್ನುಗ್ಗುವ ಧೈರ್ಯ, ಒಳ್ಳೆಯ ದಾರಿಯಲ್ಲಿ ನಡೆಯಲು ವಿವೇಕ ಹಾಗೂ ಇನ್ನೊಬ್ಬರ ಕಷ್ಟ ಅರಿಯುವ ಮನಸ್ಸು ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಇಂದು ನಾನು ನಿಮ್ಮ ಮುಂದೆ

ಉದಯವಾಹಿನಿ ಚಿತ್ರ

ನಿಂತುಕೊಳ್ಳಲು ನಮ್ಮಪ್ಪನೇ ಕಾರಣ. ನಾನು ಪ್ರತಿ ದಿನ ನಮ್ಮಪ್ಪ, ನಮ್ಮಮ್ಮನನ್ನು ನೆನಪಿಸಿಕೊಳ್ಳುತ್ತಿರುತ್ತೇನೆ. ರಣಧೀರ ನಮ್ಮಪ್ಪ, ಪ್ರೀತಿ ಹೇಳಿಕೊಟ್ಟಿದ್ದು ನಮ್ಮಮ್ಮ. ರಾಜ್ಯದ ಜನತೆಯ ಮುಖದಲ್ಲಿ ಪ್ರೀತಿ, ನಗು ನೋಡಿದಾಗ ನಮ್ಮ ತಂದೆ ತಾಯಿ ನೆನಪಾಗುತ್ತಾರೆ. ಸಂತೋಷ ಅಂದರೆ ನಮ್ಮ ಮುಖದಲ್ಲಿ ಬರುವ ನಗು ಅಲ್ಲ, ನಮ್ಮಿಂದ ಇನ್ನೊಬ್ಬರ ಮುಖದಲ್ಲಿ ಬರುವ ನಗು ಎಂದು ನಮ್ಮಪ್ಪ ಹೇಳಿ ಕೊಟ್ಟಿದ್ದರು. ಒಂದು ಊರಿಗೆ ಇತಿಹಾಸ ಇದ್ದರೆ ಮಾತ್ರ ಅದು ಒಂದು ಶಿವಮೊಗ್ಗ ಆಗಲು ಸಾಧ್ಯ ಎಂದು ಬಣ್ಣಿಸಿದರು.

ನಾನು 'ಶಾಂತಿ ಕ್ರಾಂತಿ' ಸಿನಿಮಾ ಮಾಡಿ ಅದು ಕಲೆಕ್ಷನ್ ಕಡಿಮೆ ಮಾಡುವಾಗ ಅಂದು ಸಿಎಂ ಆಗಿದ್ದ ಬಂಗಾರಪ್ಪನವರ ಬಳಿ ಹೋಗಿ ಶೇ.100ರಷ್ಟು ಟಾಕ್ಸ್ ಫ್ರೀ ಕೊಡಿ ಎಂದು ಕೇಳಿದ್ದೆ. ಅವರು ಯಾಕೆ ಫ್ರೀ ಕೊಡಬೇಕು ಎಂದು ಕೇಳಿದಾಗ, ನಾನು ಚಿತ್ರವನ್ನು ಮಕ್ಕಳಿಗಾಗಿಯೇ ಮಾಡಿದ್ದು ಎಂದು ಬೆಳಗ್ಗೆ ಹೇಳಿದೆ, ಅವರು ಮಧ್ಯಾಹ್ನದ ವೇಳೆಗಾಗಲೇ ಟಾಕ್ಸ್ ಫ್ರೀ ಮಾಡಿಸಿ ಕೊಟ್ಟರು ಎಂದು ಬಂಗಾರಪ್ಪನವರನ್ನು ರವಿಚಂದ್ರನ್ ನೆನಪಿಸಿಕೊಂಡರು.

ಸಾಧು ಕೋಕಿಲ ಸಂಗೀತ ಕಾರ್ಯಕ್ರಮ: ಯುವ ದಸರಾ ಅಂಗವಾಗಿ ಬಹುಮುಖ ಪ್ರತಿಭೆ ಸಾಧು ಕೋಕಿಲ ಅವರ ಸಂಗೀತ ಸಂಜೆ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಅವರು ವೇದಿಕೆಗೆ ಬರುವ ಮುನ್ನ ಹಾಡುಗಾರ ಚನ್ನಪ್ಪ ಸೇರಿದಂತೆ ಇತರರು ತಮ್ಮ ಕಲೆಯನ್ನು ಪ್ರದರ್ಶಿಸಿದರು. ನಂತರ ಎಂಟ್ರಿ ಕೊಟ್ಟ ಸಾಧು ಅವರು 'ರಕ್ತಕಣ್ಣೀರು' ಚಿತ್ರದ ಡೇಂಜರ್ ಎನ್ನುವ ಹಾಡನ್ನು ಹಾಡುತ್ತಾ ವೇದಿಕೆಗೆ ಆಗಮಿಸಿದರು.

> ಅದೇ ರೀತಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರು ಸಹ ಎಲ್ಲಿಯೇ ಕಂಡರೂ ಸಹ ಪ್ರೀತಿಯಿಂದ ಮಾತನಾಡಿಸುತ್ತಾರೆ. ನಮ್ಮ ತಾಯಿ ತೀರಿ ಹೋದಾಗ ಅವರೇ ಮೊದಲು ಫೋನ್ ಮಾಡಿ ಏನಾದರೂ ಸಹಾಯ ಬೇಕೇ ಎಂದು ಕೇಳಿದ್ದರು .
> – ಕ್ರೇಜಿಸ್ಟಾರ್ ವಿ.ರವಿಚಂದ್ರನ್

ವೇದಿಕೆಯಲ್ಲಿ ಪ್ರದರ್ಶನ

ಬಳಿಕ ದಸರಾಗಾಗಿ ದುರ್ಗೆಯರ ಗೀತೆಯನ್ನು ರಚನೆ ಮಾಡಿ ಅದಕ್ಕೆ ಸಂಗೀತ ನೀಡಿ, ಅದನ್ನು ವೇದಿಕೆಯಲ್ಲಿ ಪ್ರದರ್ಶನವನ್ನು ಮಾಡಿಸಿದರು. ಇತ್ತೀಚೆಗಷ್ಟೆ ಖಾಸಗಿ ಚಾನೆಲ್‌ನ ರಿಯಾಲಿಟಿ ಶೋದಲ್ಲಿ ಭಾಗಿಯಾಗಿದ್ದ ಭದ್ರಾವತಿಯ ಇಂಚರ ಎಂಬ ಬಾಲಕಿಯನ್ನು ನನ್ನ ಮಗಳು ಎಂದು ಹೇಳುತ್ತಾ ಆಕೆಯ ನೃತ್ಯಕ್ಕೆ ಭೇಷ್ ಎಂದರು.

ಉದಯ ವಾಹಿನಿ
ಗುರುವಾರ
22 ಅಕ್ಟೋಬರ್ 2026 07



ವ್ಯಾಪಾರ ಒಪ್ಪಂದದ ಸನಿಹದಲ್ಲಿ ಭಾರತ–ಅಮೆರಿಕ– ಎರಡನೇ ಬಾರಿಗೆ ಭಾರತಕ್ಕೆ ಭೇಟಿ ನೀಡಿರುವ ರೂಬಿಯೊ

ಇಂಧನ, ಹೂಡಿಕೆ ಸಂಬಂಧ ಬಲಪಡಿಸುವತ್ತ ಯುಎಸ್ ಚಿತ್ತ

ನವದೆಹಲಿ: ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರ ಭಾರತ ಭೇಟಿಯು, ಉಭಯ ದೇಶಗಳು ವ್ಯಾಪಾರ ಒಪ್ಪಂದ ಮಾಡಿಕೊಳ್ಳುವತ್ತ ಸಾಗುತ್ತಿರುವ ಹಿನ್ನೆಲೆಯಲ್ಲಿ, ಇಂಧನ ಮತ್ತು ವಾಣಿಜ್ಯ ಒಪ್ಪಂದಗಳನ್ನು ಭದ್ರಪಡಿಸಿಕೊಳ್ಳುವಲ್ಲಿ ಅಮೆರಿಕದ ಹೆಚ್ಚುತ್ತಿರುವ ಆಸಕ್ತಿಯನ್ನು ಎತ್ತಿ ತೋರಿಸಿದೆ.

1. ಇಂಧನ, ವಾಣಿಜ್ಯ ಒಪ್ಪಂದ ಭದ್ರಪಡಿಸುವತ್ತ..
2. ಎಸ್.ಜೈಶಂಕರ್ ಅವರೊಂದಿಗೆ ಮಾತುಕತೆ
3. ಪ್ರಮುಖವಾಗಿ ವಾಣಿಜ್ಯ ವಿಷಯಗಳಿಗೆ ಒತ್ತು ನೀಡಿದೆ.

ಈ ವರ್ಷ ಎರಡನೇ ಬಾರಿಗೆ ಭಾರತಕ್ಕೆ ಭೇಟಿ ನೀಡಿರುವ ರೂಬಿಯೊ, ಮುಂಬೈನಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಿದರು. ಮೂರು ದಿನಗಳ ಈ ಭೇಟಿಯು ಪ್ರಮುಖವಾಗಿ ವಾಣಿಜ್ಯ ವಿಷಯಗಳಿಗೆ ಒತ್ತು ನೀಡಿದೆ. ಇದರಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ಗೆ ಸೇರಿದ, ವಿಶ್ವದ ಅತಿದೊಡ್ಡ ಏಕ–ಸ್ಥಳೀಯ ತೈಲ ಸಂಸ್ಕರಣಾಗಾರವಿರುವ ಜಾಮ್‌ನಗರಕ್ಕೆ ಭೇಟಿ ನೀಡುವುದೂ ಸೇರಿದೆ. 'ಭಾರತವು ನಮಗೆ ಅತ್ಯಂತ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ' ಎಂದು ರೂಬಿಯೊ ಮಾಧ್ಯಮಗಳ ಮುಂದೆ ಹೇಳಿದ್ದಾರೆ.

ವ್ಯಾಪಾರ ಮಾತುಕತೆಗಳಲ್ಲಿ ಪ್ರಗತಿ ಕಂಡುಬರುತ್ತಿರುವ ಬೆನ್ನಲ್ಲೇ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಸೇರಿದಂತೆ ರಷ್ಯಾದ ತೈಲವನ್ನು ಖರೀದಿಸುವ ಇತರ ದೇಶಗಳ ಮೇಲಿನ ನಿರ್ಬಂಧಗಳನ್ನು ಸಡಿಲಿಸಲು ನಿರ್ಧರಿಸಿದ್ದಾರೆ. ಈ ಬೆಳವಣಿಗೆಯು, ಉಭಯ ದೇಶಗಳ ಸಂಬಂಧದ ದೃಷ್ಟಿಯಿಂದ ಕಷ್ಟಕರವಾಗಿದ್ದ ಈ ವರ್ಷದಲ್ಲಿ ಸ್ವಲ್ಪ ಸಕಾರಾತ್ಮಕ ವಾತಾವರಣವನ್ನು ಮೂಡಿಸಿದೆ.

ವ್ಯಾಪಾರ ಮಾತುಕತೆಗಳ ಕುರಿತು ಮಾತನಾಡಿದ ರೂಬಿಯೊ, "ನಾವು ಒಪ್ಪಂದಕ್ಕೆ ಅತ್ಯಂತ ಹತ್ತಿರದಲ್ಲಿದ್ದೇವೆ. ಅಂತಿಮವಾಗಿ ಸಹಿ ಹಾಕುವ ಹಂತಕ್ಕೆ ಬರುವಷ್ಟು ಸಮೀಪದಲ್ಲಿದ್ದೇವೆ. ಇನ್ನು ಕೆಲವೇ ಕೆಲವು ವಿಷಯಗಳನ್ನು ಅಂತಿಮಗೊಳಿಸಬೇಕಿದೆ, ಅದು ಶೀಘ್ರದಲ್ಲೇ ನಡೆಯಲಿದೆ ಎಂದು ನಾನು ಭಾವಿಸುತ್ತೇನೆ" ಎಂದಿದ್ದಾರೆ. ಅಲ್ಲದೆ, ಭಾರತೀಯ ಅಧಿಕಾರಿಗಳು ಕೂಡ ಉಭಯ ದೇಶಗಳು ವ್ಯಾಪಾರ ಒಪ್ಪಂದಕ್ಕೆ ಹತ್ತಿರದಲ್ಲಿವೆ ಎಂದು ದೃಢಪಡಿಸಿದ್ದಾರೆ.

ಭಾರತದೊಂದಿಗೆ ಆರ್ಥಿಕ ಸಂಬಂಧಗಳನ್ನು ವೃದ್ಧಿಸಲು ಟ್ರಂಪ್ ಆಸಕ್ತಿ ಹೊಂದಿದ್ದಾರೆ. ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯನ್ನು ಹೊಂದಿರುವ ಭಾರತವು, ಅಮೆರಿಕದ ಕಂಪನಿಗಳಿಗೆ ದೊಡ್ಡ ಮಾರುಕಟ್ಟೆಯನ್ನು ಒದಗಿಸುತ್ತದೆ. ಅದೇ ರೀತಿ, ಅಮೆರಿಕವು ವಿದೇಶಿ ಹೂಡಿಕೆಗಳನ್ನು ಆಕರ್ಷಿಸಲು ಪ್ರಯತ್ನಿಸುತ್ತಿದ್ದರೆ, ಭಾರತೀಯ ಕಂಪನಿಗಳು ವಿದೇಶಗಳಲ್ಲಿ ತಮ್ಮ ವಿಸ್ತರಣೆಯನ್ನು ಮುಂದುವರೆಸಿವೆ. ಈ ಪ್ರಕ್ರಿಯೆಯು ಎರಡೂ ಕಡೆಯವರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಿದೆ ಎಂದು ಪರಿಗಣಿಸಲಾಗಿದೆ.

ರಿಲಯನ್ಸ್ ಸಂಸ್ಥೆಯು ಟೆಕ್ಸಾಸ್‌ನಲ್ಲಿ, ಕಳೆದ 50 ವರ್ಷಗಳಲ್ಲಿ ಅಮೆರಿಕದಲ್ಲಿ ನಿರ್ಮಾಣವಾಗುತ್ತಿರುವ ಮೊದಲ ತೈಲ ಸಂಸ್ಕರಣಾಗಾರದಲ್ಲಿ ಹೂಡಿಕೆ ಮಾಡುತ್ತಿದೆ. ಅಲ್ಲದೆ, ಅಮೆರಿಕದ ಹೊರಗೆ ವೆನೆಜುವೆಲಾದ ಕಚ್ಚಾ ತೈಲವನ್ನು ಖರೀದಿಸುವ ಅತಿದೊಡ್ಡ ಸಂಸ್ಥೆಗಳಲ್ಲಿ ಇದೂ ಒಂದಾಗಿದೆ.

26/11 ಸ್ಮಾರಕಕ್ಕೆ ಪುಷ್ಪ ನಮನ

ಜೈಶಂಕರ್ ಮತ್ತು ರೂಬಿಯೊ ಮುಂಬೈನ ತಾಜ್ ಹೋಟೆಲ್‌ನಲ್ಲಿರುವ 26/11 ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದರು. "ಭಯೋತ್ಪಾದನೆಯನ್ನು ಅದರ ಎಲ್ಲಾ ರೂಪಗಳು ಮತ್ತು ಆಯಾಮಗಳಲ್ಲಿ ಎದುರಿಸಲು ನಾವು ನಮ್ಮ ಬಲವಾದ ಪಾಲುದಾರಿಕೆಯನ್ನು ಮುಂದುವರೆಸಬೇಕು" ಎಂದು ಜೈಶಂಕರ್ ಎಕ್ಸ್ ಸಾಮಾಜಿಕ ಜಾಲತಾಣದಲ್ಲಿನ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ರಾಮರಾಜ್ಯವೆಂದರೆ ತಾರತಮ್ಯವಿಲ್ಲದ ಆಡಳಿತ ವ್ಯವಸ್ಥೆ: ಪ್ರಧಾನಿ ನರೇಂದ್ರ ಮೋದಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ದೆಹಲಿಯ ಐಪಿ ಎಕ್ಸ್‌ಟೆನ್ಶನ್‌ನಲ್ಲಿರುವ ಡಿಡಿಎ ಉತ್ಸವ ಮೈದಾನದಲ್ಲಿ ನಡೆದ ವಿಜಯದಶಮಿ ಆಚರಣೆಯಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ, ಕೆಟ್ಟದ್ದರ ವಿರುದ್ಧ ಒಳ್ಳೆಯದರ ವಿಜಯವನ್ನು ಸಂಕೇತಿಸುವ ಹಬ್ಬದ ಅಂಗವಾಗಿ, ರಾವಣನ ಪ್ರತಿಕೃತಿಯನ್ನು ದಹಿಸುವ ಸಾಂಪ್ರದಾಯಿಕ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಭಾಗಿಯಾದರು.

ದಸರಾ ಆಚರಣೆ ವೇಳೆ ಮಾತನಾಡಿದ ಪ್ರಧಾನಿ ಮೋದಿ, "ರಾಮರಾಜ್ಯವೆಂದರೆ ತಾರತಮ್ಯವಿಲ್ಲದ ಆಡಳಿತ ವ್ಯವಸ್ಥೆ. ಇಲ್ಲಿ ನ್ಯಾಯ ನೆಲೆಸಿರುತ್ತದೆ ಮತ್ತು ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳು ಸಿಗುತ್ತವೆ. ಇಂತಹ ವ್ಯವಸ್ಥೆಯಲ್ಲಿ, ಅಧಿಕಾರದ ಉದ್ದೇಶ ಕೇವಲ ಆಳ್ವಿಕೆ ನಡೆಸುವುದಲ್ಲ, ಬದಲಾಗಿ ಜನರ ಕಲ್ಯಾಣವನ್ನು ಖಚಿತಪಡಿಸುವುದಾಗಿದೆ," ಎಂದು ಹೇಳಿದರು.

"ಬಡವರು ಮತ್ತು ಸಮಾಜದ ಕಡೆಯ ಅಂಚಿನಲ್ಲಿರುವವರಿಗೆ ಸೇವೆ ಸಲ್ಲಿಸುವುದು ನಮ್ಮ ಅತ್ಯುನ್ನತ ಆದ್ಯತೆಯಾಗಬೇಕು. ಭಗವಾನ್ ಶ್ರೀರಾಮನ ಜೀವನ ನಮಗೆ ಒಂದು ಮಹತ್ವದ ಪಾಠವನ್ನು ಕಲಿಸುತ್ತದೆ. ಬಿಕ್ಕಟ್ಟು ಎಷ್ಟೇ ದೊಡ್ಡದಾಗಿರಲಿ ಅಥವಾ ಸವಾಲು ಎಷ್ಟೇ ಕಠಿಣವಾಗಿರಲಿ, ನಾವು ಇತರರ ಮೇಲೆ ಅವಲಂಬಿತರಾಗಬಾರದು. ನಾವು ನಮ್ಮ ಸ್ವಂತ ಸಾಮರ್ಥ್ಯವನ್ನು ಗುರುತಿಸಿಕೊಳ್ಳಬೇಕು, ನಮ್ಮ ಸಂಪನ್ಮೂಲಗಳ ಮೇಲೆ ನಂಬಿಕೆ ಇಡಬೇಕು, ನಮ್ಮ ದೃಢ ನಿಶ್ಚಯವನ್ನು ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳಬೇಕು ಮತ್ತು ನಮ್ಮ ಕಠಿಣ ಪರಿಶ್ರಮದ ಮೂಲಕ ಪರಿಹಾರಗಳನ್ನು ಕಂಡುಕೊಳ್ಳಬೇಕು. ಇಂದು ನಾವೂ ಕೂಡ ಇದೇ ಮಂತ್ರವನ್ನು ಅನುಸರಿಸಿ ಮುನ್ನಡೆಯಬೇಕು. 'ವಿಕಸಿತ ಭಾರತ' ಮತ್ತು 'ಆತ್ಮನಿರ್ಭರ ಭಾರತ'ದ ಗುರಿಗಳನ್ನು ನಾವು ನಮ್ಮ ಮುಂದೆ ಇಟ್ಟುಕೊಂಡಿದ್ದೇವೆ," ಎಂದು ಪ್ರಧಾನಿ ತಿಳಿಸಿದರು.

ಇದಕ್ಕೂ ಮುನ್ನ, ಪ್ರಧಾನಿ ಮೋದಿ ದೇಶದ ಜನರಿಗೆ ವಿಜಯದಶಮಿಯ ಶುಭಾಶಯ ಕೋರಿದರು ಮತ್ತು ಎಲ್ಲರಿಗೂ ಸಂತೋಷ, ಸಮೃದ್ಧಿ ಹಾಗೂ ಯಶಸ್ಸು ಸಿಗಲಿ ಎಂದು ಹಾರೈಸಿದ್ದಾರೆ. 'ಎಕ್ಸ್' ಪೋಸ್ಟ್ ಮಾಡಿರುವ ಅವರು, "ನಿಮ್ಮೆಲ್ಲರಿಗೂ ವಿಜಯದಶಮಿಯ ಹೃತ್ಪೂರ್ವಕ ಶುಭಾಶಯಗಳು. ಸಂತೋಷ ಮತ್ತು ನಂಬಿಕೆಯಿಂದ ತುಂಬಿರುವ ಈ ವಿಜಯದ ಹಬ್ಬವು, ಪ್ರತಿಯೊಬ್ಬರ ಸಂಕಲ್ಪಕ್ಕೂ ಹೊಸ ಶಕ್ತಿಯನ್ನು ತುಂಬಲಿ. ಪ್ರತಿಯೊಬ್ಬರ ಜೀವನವು ಸಂತೋಷ, ಸಮೃದ್ಧಿ ಮತ್ತು ಯಶಸ್ಸಿನಿಂದ ಸಮೃದ್ಧವಾಗಲಿ – ಇದೇ ನನ್ನ ಹಾರೈಕೆ," ಎಂದು ಬರೆದಿದ್ದಾರೆ.

ಇದೇ ವೇಳೆ, ರಾಷ್ಟ್ರ ರಾಜಧಾನಿಯ ದ್ವಾರಕಾ ಸೆಕ್ಟರ್ 10ರಲ್ಲಿ ನಡೆದ ದಸರಾ ಆಚರಣೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಭ್ರಷ್ಟಾಚಾರ, ಮಾದಕವಸ್ತು ವ್ಯಸನ, ಅಪರಾಧ, ತಾರತಮ್ಯ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳಂತಹ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನೆ ಮಾಡಲು ಭಗವಾನ್ ಶ್ರೀರಾಮನ ಆದರ್ಶಗಳನ್ನು ಅನುಸರಿಸುವಂತೆ ಜನರಿಗೆ ಕರೆ ನೀಡಿದರು. ದೆಹಲಿಯ ರಾಮಲೀಲಾ ಆಚರಣೆಗಳಲ್ಲಿ ನೆರೆದಿದ್ದ ಜನರನ್ನು ಉದ್ದೇಶಿಸಿ ಮಾತನಾಡಿದ ಗುಪ್ತಾ, ವಿಜಯದಶಮಿಯು ಕೇವಲ ರಾವಣನ ವಿರುದ್ಧ ಶ್ರೀರಾಮನ ವಿಜಯದ ಸಂಭ್ರಮಾಚರಣೆಯಷ್ಟೇ ಅಲ್ಲ, ಬದಲಾಗಿ ಅಸತ್ಯದ ಮೇಲೆ ಸತ್ಯ, ಅಧರ್ಮದ ಮೇಲೆ ಧರ್ಮ ಮತ್ತು ಅನ್ಯಾಯದ ಮೇಲೆ ನ್ಯಾಯವು ಜಯಗಳಿಸುತ್ತದೆ ಎಂಬುದನ್ನು ನೆನಪಿಸುವ ದಿನವಾಗಿದೆ ಎಂದು ಹೇಳಿದರು.

ಡೀಲ್ ಬಹುತೇಕ ಅಂತಿಮ ಹಂತದಲ್ಲಿದೆ ಎಂದ ಟ್ರಂಪ್

ವಾಷಿಂಗ್ಟನ್: ಭಾರತದೊಂದಿಗಿನ ವ್ಯಾಪಾರ ಮಾತುಕತೆಗಳಲ್ಲಿ ಪ್ರಗತಿಯಾಗಿದೆ ಎಂದು ಸ್ವತಃ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಳಿವು ನೀಡಿದ್ದು, ಉಭಯ ದೇಶಗಳು ಒಪ್ಪಂದವೊಂದಕ್ಕೆ ಬರುವ ಹಂತಕ್ಕೆ ಬಹಳ ಹತ್ತಿರದಲ್ಲಿವೆ ಎಂದು ಹೇಳಿದ್ದಾರೆ. ಆದರೆ, ಈ ಪ್ರಸ್ತಾವಿತ ಒಪ್ಪಂದವು ಹಿಂದಿನ ವ್ಯಾಪಾರ ಒಪ್ಪಂದಗಳಿಗಿಂತ ಭಿನ್ನವಾಗಿರಲಿದೆ ಎಂದಿರುವ ಅವರು, ಅದರಲ್ಲಿ ಏನೆಲ್ಲಾ ಬದಲಾವಣೆಗಳಿರಲಿವೆ ಎಂಬುದನ್ನು ಬಹಿರಂಗಪಡಿಸಿಲ್ಲ. ಯುಎಸ್ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರೊಂದಿಗೆ 'ಓವಲ್ ಆಫೀಸ್'ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತ, ವಾಷಿಂಗ್ಟನ್ ಮತ್ತು ನವದೆಹಲಿ ಒಪ್ಪಂದವೊಂದರತ್ತ ಸಾಗುತ್ತಿವೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಟ್ರಂಪ್, ಅವರು(ಭಾರತ) ಒಪ್ಪಂದ ಮಾಡಿಕೊಳ್ಳಲು ಬಯಸುತ್ತಿದ್ದಾರೆ. ನಾವು ಒಪ್ಪಂದ ಮಾಡಿಕೊಳ್ಳುವ ಹಂತಕ್ಕೆ ಬಹಳ ಹತ್ತಿರದಲ್ಲಿದ್ದೇವೆ. ಇದು ನಾವು ಈ ಹಿಂದೆ ಮಾಡಿಕೊಂಡಿದ್ದ ಒಪ್ಪಂದಗಳಿಗಿಂತ ಸಾಕಷ್ಟು ಭಿನ್ನವಾದ ಒಪ್ಪಂದವಾಗಲಿದೆ ಎಂದು ತಿಳಿಸಿದ್ದಾರೆ. ಆದರೆ, ಮಾತುಕತೆಗಳನ್ನು ಪೂರ್ಣಗೊಳಿಸಲು ಯಾವುದೇ ನಿರ್ದಿಷ್ಟ ದಿನಾಂಕವನ್ನು ಟ್ರಂಪ್ ಘೋಷಿಸಲಿಲ್ಲ. ಅಲ್ಲದೆ, ಅಂತಿಮ ಒಪ್ಪಂದಕ್ಕೆ ಅಡ್ಡಿಯಾಗಿರುವ ಬಾಕಿ ಉಳಿದಿರುವ ವಿಷಯಗಳೇನು ಎಂಬುದನ್ನು ಸಹ ಅವರು ಬಹಿರಂಗ ಮಾಡಿಲ್ಲ. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರ ಭಾರತ ಭೇಟಿಯ ಮಧ್ಯೆ ಟ್ರಂಪ್ ಈ ಹೇಳಿಕೆ ನೀಡಿದ್ದು, ಒಪ್ಪಂದಕ್ಕೆ ಸಹಿ ಹಾಕುವ ಮುಂದಿನ ಹಂತಗಳ ಕುರಿತು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೊಂದಿಗೆ ರೂಬಿಯೊ ಚರ್ಚೆ ನಡೆಸುತ್ತಿದ್ದಾರೆ. ಮಾರುಕಟ್ಟೆ ಪ್ರವೇಶವನ್ನು ವಿಸ್ತರಿಸುವ ಮತ್ತು ಸುಂಕಗಳು, ಕೃಷಿ ಉತ್ಪನ್ನಗಳು, ಕೈಗಾರಿಕಾ ಸರಕುಗಳು ಮತ್ತು ನಿಯಂತ್ರಕ ಅಡೆತಡೆಗಳ ಮೇಲಿನ ದೀರ್ಘಕಾಲದ ಭಿನ್ನಾಭಿಪ್ರಾಯಗಳನ್ನು ಪರಿಹರಿಸುವ ಗುರಿಯನ್ನು ಹೊಂದಿರುವ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತು ಭಾರತ ಮತ್ತು ಅಮೆರಿಕ ಮಾತುಕತೆ ನಡೆಸುತ್ತಿವೆ. ಟ್ರಂಪ್ ಅವರ ಎರಡನೇ ಅವಧಿಯ ಆಡಳಿತದಲ್ಲಿ ವ್ಯಾಪಾರ ಮಾತುಕತೆಗಳು ಹೆಚ್ಚುವರಿ ಮಹತ್ವವನ್ನು ಪಡೆದುಕೊಂಡಿವೆ. ಈ ಸಂದರ್ಭದಲ್ಲಿ ಸುಂಕಗಳು ಮತ್ತು ಪರಸ್ಪರ ಮಾರುಕಟ್ಟೆ ಪ್ರವೇಶವು ಅಮೆರಿಕದ ಆರ್ಥಿಕ ನೀತಿಯ ಪ್ರಮುಖ ಅಂಶಗಳಾಗಿವೆ. ಅಮೆರಿಕದ ರಫ್ತುಗಳ ಮೇಲೆ ಪರಿಣಾಮ ಬೀರುವ ಅಡೆತಡೆಗಳನ್ನು ಕಡಿಮೆ ಮಾಡುವಾಗ ವ್ಯಾಪಾರ ಪಾಲುದಾರರು ಅಮೆರಿಕದ ವ್ಯವಹಾರಗಳಿಗೆ ತಮ್ಮ ಮಾರುಕಟ್ಟೆಗಳಿಗೆ ಹೆಚ್ಚಿನ ಪ್ರವೇಶವನ್ನು ನೀಡಬೇಕು ಎಂದು ಟ್ರಂಪ್ ಸರ್ಕಾರ ವಾದಿಸಿದೆ.

ಚಂದ್ರನ ಮೇಲಿನ ಮಣ್ಣಿನ ಮಾದರಿ ತರಲು ಬಾಹ್ಯಾಕಾಶ ನೌಕೆ ಉಡಾವಣೆ ಮಾಡಿದ ಜಪಾನ್

ಟೋಕಿಯೋ: ಜಪಾನ್‌ನ ಬಾಹ್ಯಾಕಾಶ ನೌಕೆಯೊಂದು ನಭಕ್ಕೆ ಪ್ರಯಾಣ ಬೆಳೆಸಿದ್ದು, ಅಲ್ಲಿರುವ ಚಂದ್ರನ ಅನ್ವೇಷಣೆ ಮತ್ತು ಅಲ್ಲಿನ ಮಾದರಿಗಳನ್ನು ಹೊತ್ತು ತರುವುದು ಈ ಬಾಹ್ಯಾಕಾಶಯಾನದ ಉದ್ದೇಶವಾಗಿದೆ.

ಐದು ವರ್ಷಗಳ ಈ ಕಾರ್ಯಾಚರಣೆಗೆ ವಿಶ್ವದ ಐದು ಬಾಹ್ಯಾಕಾಶ ಸಂಸ್ಥೆಗಳು ಜೊತೆಯಾಗಿದ್ದು, ಮಂಗಳನ ಎರಡು ಚಂದ್ರನಲ್ಲಿ ಒಂದಾಗಿರುವ ಫೋಬೋಸ್ ಮೇಲೆ ರೋಬೋಟಿಕ್ ಪರಿಶೋಧಕ ಹಾಗೂ ರೋವರ್ ಒಂದನ್ನು ಇಳಿಸುವ ಪ್ರಯತ್ನ ನಡೆಯಲಿದೆ. ಜಪಾನ್ ಬಾಹ್ಯಾಕಾಶ ಅನ್ವೇಷಣಾ ಏಜೆನ್ಸಿ ಈ ಪ್ರಯತ್ನ ನಡೆಸಿದ್ದು, ತನೆಗಾಶಿಮಾ ದ್ವೀಪದಲ್ಲಿರುವ ದೇಶದ ಮುಖ್ಯ ಬಾಹ್ಯಾಕಾಶ ನಿಲ್ದಾಣದಿಂದ ಬಾಹ್ಯಾಕಾಶ ನೌಕೆಯನ್ನು ಉಡಾವಣೆ ಮಾಡಿದೆ.

ಉಡಾವಣೆಗೊಂಡ ಒಂದು ಗಂಟೆಯ ನಂತರ ಬಾಹ್ಯಾಕಾಶ ನೌಕೆಯು ಯೋಜಿಸಿದಂತೆ ರಾಕೆಟ್‌ನ ಮೇಲಿನ ಹಂತದಿಂದ ಬೇರ್ಪಟ್ಟಿದ್ದು, ಈ ಯಶಸ್ಸು ಬಾಹ್ಯಾಕಾಶ ವಿಜ್ಞಾನಿಗಳ ಸಂತಸಕ್ಕೆ ಕಾರಣವಾಗಿದೆ. ಮಂಗಳನಲ್ಲಿರುವ ಚಂದ್ರನ ಮಾದರಿ ತರುವ ಪ್ರಯತ್ನವಾಗಿ ಈ ಹಿಂದೆ ನಾಸಾ ಕಳೆದ 50 ವರ್ಷದಲ್ಲಿ ಯಶಸ್ವಿಯಾಗಿ 9 ಬಾಹ್ಯಕಾಶ ನೌಕೆಗಳನ್ನು ಯಶಸ್ವಿಯಾಗಿ ಕಳಿಸಿತ್ತು. ಚೀನಾ 2021ರಲ್ಲಿ ತನ್ನ ನೌಕೆ ಇಳಿಸಿದೆ. ಆದರೆ, ಯಾರೂ ಕೂಡ ಅದರ ಉಪಗ್ರಹವಾಗಿರುವ ಫೋಬೋಸ್ ಅಥವಾ ಡೀಮೋಸ್ ಮೇಲೆ ಇಳಿಯುವ ಪ್ರಯತ್ನ ಮಾಡಿಲ್ಲ. ಈ ಪ್ರಯತ್ನ ಯಶಸ್ವಿಯಾದಲ್ಲಿ 2031ರ ವೇಳೆ ಫೋಬೋಸ್‌ನಿಂದ ಧೂಳು, ಮಣ್ಣು ಮತ್ತು ಕಲ್ಲನ್ನು ಭೂಮಿಗೆ ಹೊತ್ತು ತರಲಾಗುವುದು. ಇದೊಂದು ರೋಚಕ ಪ್ರಯಾಣವಾಗಿದೆ ಎಂದು ಈ ಯೋಜನೆಯಲ್ಲಿ ಸಕ್ರಿಯವಾಗಿರುವ ನಾಸಾ ಖಭೌತವಿಜ್ಞಾನಿ ಟಾಮ್ ಸ್ಟ್ಯಾಟ್ಲರ್ ತಿಳಿಸಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಪ್ರಜಾಪ್ರಭುತ್ವ ನಕಾರಾತ್ಮಕವಾಗಿ ಬಿಂಬಿಸುವ ಪ್ರಯತ್ನಕ್ಕೆ ವಿರೋಧ

ನವದೆಹಲಿ: ದೆಹಲಿಯಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನೆಗಳ ಬಗ್ಗೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಾರ್ಯಕರ್ತರು ಕಳವಳ ವ್ಯಕ್ತಪಡಿಸಿದ ಕುರಿತಂತೆ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಪ್ರತಿಕ್ರಿಯಿಸಿರುವ ಭಾರತ, ಮಾನವ ಹಕ್ಕುಗಳನ್ನು ರಾಜಕೀಯ ಒತ್ತಡದ ಸಾಧನವಾಗಿ ಅಥವಾ ದೇಶದ ಆಯ್ದ ಗುರಿಯನ್ನಾಗಿ ಬಳಸಬಾರದು ಎಂದು ಪ್ರತಿಪಾದಿಸಿತು. ಆರೋಪಗಳು ಮತ್ತು ಅಪೂರ್ಣ ಅಂಕಿ–ಅಂಶಗಳ ಮೂಲಕ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವನ್ನು ಋಣಾತ್ಮಕವಾಗಿ ಬಿಂಬಿಸುವ ಪ್ರಯತ್ನಗಳನ್ನು ಭಾರತವು ತೀವ್ರವಾಗಿ ವಿರೋಧಿಸಿತು. ಭಾರತವು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಕಾರ್ಯವಿಧಾನಗಳೊಂದಿಗೆ ತೊಡಗಿಸಿಕೊಂಡಿದೆ, ಆದರೆ ಅದು ಸಂವಾದ, ಸಮಾಲೋಚನೆ, ಆಯ್ಕೆ ಮಾಡದಿರುವಿಕೆ ಮತ್ತು ಪಾರದರ್ಶಕತೆಯೊಂದಿಗೆ ಮಾರ್ಗದರ್ಶಿ ತತ್ವಗಳೊಂದಿಗೆ ಸಹಕಾರವನ್ನು ಆಧರಿಸಿರಬೇಕು ಎಂದು ವಿದೇಶಾಂಗ ಸಚಿವಾಲಯದ ಉಪ ಕಾರ್ಯದರ್ಶಿ ಬರ್ಖಾ ತಾಮ್ರಕರ್ ಮಂಗಳವಾರ ಹೇಳಿದರು. ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ 'Working Group on Enforced Disappearances' ಕುರಿತಾದ ಯುಎನ್‌ಜಿಎಯ ಮೂರನೇ ಸಮಿತಿಯ ಕಾರ್ಯಸೂಚಿಯ ವಿಷಯದ ಕುರಿತು ತಾಮ್ರಕರ್ ಭಾರತದ ಪರ ಹೇಳಿಕೆ ನೀಡಿದರು. ಮಾನವ ಹಕ್ಕುಗಳನ್ನು ರಾಜಕೀಯ ಒತ್ತಡದ ಸಾಧನವಾಗಿ ಅಥವಾ ದೇಶಗಳ ಆಯ್ದ ಗುರಿಯಾಗಿ ಬಳಸಬಾರದು ಎಂದು ಅವರು ಒತ್ತಿ ಹೇಳಿದರು. ನಾವು ವರದಿಯನ್ನು ನಿಷ್ಠೆಯಿಂದ ಉಲ್ಲೇಖಿಸಲು ನಿಯೋಗಗಳಿಗೆ ಕರೆ ನೀಡುತ್ತೇವೆ. ಮಾನವೀಯ ಸಂವಹನವೊಂದನ್ನು ತೀರ್ಪಿನ ಮಟ್ಟಕ್ಕೆ ಹಿಗ್ಗಿಸಬಾರದು. ಪ್ರಕರಣಗಳ ಬಗ್ಗೆ ಸ್ಪಷ್ಟಪಡಿಸಲು ಭಾರತ ಸಿದ್ಧವಾಗಿದೆ. ಆದರೆ ಪರಿಶೀಲಿಸದ ಆರೋಪಗಳು, ಅಪೂರ್ಣ ಅಂಕಿ–ಅಂಶಗಳು ಅಥವಾ ವರದಿಯ ಮೂಲಕ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವನ್ನು ನಕಾರಾತ್ಮಕವಾಗಿ ಬಿಂಬಿಸುವ ಯಾವುದೇ ಪ್ರಯತ್ನವನ್ನು ಔಪಚಾರಿಕವಾಗಿ ವಿರೋಧಿಸುತ್ತದೆ ಎಂದು ತಾಮ್ರಕರ್ ಸ್ಪಷ್ಟಪಡಿಸಿದರು.

ವಿದೇಶದಿಂದ ಕಾರ್ಯಾಚರಣೆ ನಡೆಸುತ್ತಿರುವ ಗ್ಯಾಂಗ್‌ಸ್ಟರ್ ಅನಿಲ್ ಪಂಡಿತ್ ಎಂಬಾತನ ಸೂಚನೆಯ ಮೇರೆಗೆ ಇವರು ಈ ಕೃತ್ಯ ಎಸಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಟೈಗರ್ ಶ್ರಾಫ್ ಮೇಲೆ ಗುಂಡಿನ ದಾಳಿ ಪ್ರಕರಣ: ಇನ್ನೂ ನಾಲ್ವರ ಬಂಧನ; 11ನೇ ತರಗತಿ ವಿದ್ಯಾರ್ಥಿ ವಶಕ್ಕೆ

ನವದೆಹಲಿ: ಬಾಲಿವುಡ್ ನಟ ಟೈಗರ್ ಶ್ರಾಫ್ ಕಾರಿನ ಮೇಲೆ ನಡೆದ ಗುಂಡಿನ ದಾಳಿ ಪ್ರಕರಣವು ಹೊಸ ತಿರುವು ಪಡೆದುಕೊಂಡಿದೆ. ದೆಹಲಿ ಪೊಲೀಸರ ವಿಶೇಷ ಘಟಕವು ಇಬ್ಬರು ಮಹಿಳೆಯರು ಸೇರಿದಂತೆ ನಾಲ್ವರನ್ನು ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

1. ಗುಂಡಿನ ದಾಳಿ ಪ್ರಕರಣವು ಹೊಸ ತಿರುವು ಪಡೆದುಕೊಂಡಿದೆ
2. ಬಂಧಿತರು ಹರಿಯಾಣದ ಸೋನಿಪತ್ ಜಿಲ್ಲೆಯ ನಿವಾಸಿಗಳು
3. ಹಲವು ಕವಲುಗಳಲ್ಲಿ ಆರೋಪಿಗಳ ಕುರಿತು ತನಿಖೆ ನಡೆಯುತ್ತಿದೆ

ವಿದೇಶದಿಂದ ಕಾರ್ಯಾಚರಣೆ ನಡೆಸುತ್ತಿರುವ ಗ್ಯಾಂಗ್‌ಸ್ಟರ್ ಅನಿಲ್ ಪಂಡಿತ್ ಎಂಬಾತನ ಸೂಚನೆಯ ಮೇರೆಗೆ ಇವರು ಈ ಕೃತ್ಯ ಎಸಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಬಂಧಿತ ಆರೋಪಿಗಳನ್ನು ಹರಿಯಾಣದ ಸೋನಿಪತ್ ಜಿಲ್ಲೆಯ ನಿವಾಸಿಗಳಾದ ಕುನಾಲ್ (21) ಮತ್ತು ಸುಮಿತ್ (19), ಹಾಗೂ ಉತ್ತರ ಪ್ರದೇಶದ ರಾಧಾ (23) ಮತ್ತು ಬಬಿತಾ (23) ಎಂದು ಗುರುತಿಸಲಾಗಿದೆ.

"ನಾಲ್ವರೂ ಆರೋಪಿಗಳನ್ನು ಆರಂಭದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ'ಯ ಸೆಕ್ಷನ್ 35(1)(ಬಿ) ಅಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನಂತರ, ಮುಂಬೈ ಪೊಲೀಸರ ಅಪರಾಧ ತನಿಖಾ ವಿಭಾಗವು ಇವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವ ಸಂಬಂಧ ಔಪಚಾರಿಕವಾಗಿ ಬಂಧಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿತು. ನ್ಯಾಯಾಲಯವು ಈ ಮನವಿಯನ್ನು ಪುರಸ್ಕರಿಸಿ, ಮುಂಬೈ ಪೊಲೀಸ್ ತಂಡಕ್ಕೆ ಮೂರು ದಿನಗಳ ಟ್ರಾನ್ಸಿಟ್ ರಿಮಾಂಡ್ (ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕರೆದೊಯ್ಯಲು ಅನುಮತಿ) ನೀಡಿದೆ" ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಮೃತಸರದಿಂದ ಮುಂಬೈಗೆ ಪಿಸ್ತೂಲ್ ಮತ್ತು ಮದ್ದುಗುಂಡುಗಳನ್ನು ಸಾಗಿಸಿರುವ ಆರೋಪ, ಶಸ್ತ್ರಾಸ್ತ್ರವನ್ನು ತಲುಪಿಸುವಲ್ಲಿ ಮಧ್ಯವರ್ತಿಗಳ ಪಾತ್ರ ಹಾಗೂ ಘಟನೆಯ ನಂತರ ಗುಂಡು ಹಾರಿಸಿದವರು ನಗರದಿಂದ ಪರಾರಿಯಾಗಲು ಸಹಾಯ ಮಾಡಿದ ಪ್ರಯತ್ನಗಳ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ತಿಳಿದುಬಂದಿದೆ.

ದೆಹಲಿ ಪೊಲೀಸರ ವಿಶೇಷ ಘಟಕವು ನೀಡಿರುವ ಮಾಹಿತಿಯ ಪ್ರಕಾರ, ಕುನಾಲ್ ಇತ್ತೀಚೆಗಷ್ಟೇ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದ. ಹರ್ಸಾನಾ ಗ್ರಾಮದ ಸ್ನೇಹಿತನೊಬ್ಬ ಅವನನ್ನು ಅನಿಲ್ ಪಂಡಿತ್ ಎಂಬಾತನಿಗೆ ಪರಿಚಯಿಸಿದ್ದ. ಪಂಡಿತ್ 32 ವರ್ಷದ ಗ್ಯಾಂಗ್‌ಸ್ಟರ್ ಆಗಿದ್ದು, ಅಮೆರಿಕದಿಂದ ಕಾರ್ಯಾಚರಣೆ ನಡೆಸುತ್ತಿದ್ದಾನೆ ಮತ್ತು ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಸಹಚರನೆಂದು ಹೇಳಲಾಗಿದೆ. ಕುನಾಲ್ ನಂತರ ಎನ್‌ಕ್ರಿಪ್ಟ್ ಮಾಡಿದ (ಸುರಕ್ಷಿತ) ಮೆಸೇಜಿಂಗ್ ಅಪ್ಲಿಕೇಶನ್ ಮೂಲಕ ಪಂಡಿತ್‌ನೊಂದಿಗೆ ಸಂಪರ್ಕದಲ್ಲಿದ್ದ ಎಂದು ಅಧಿಕಾರಿ ಹೇಳಿದ್ದಾರೆ.

ಪಂಡಿತ್‌ನ ಸೂಚನೆಯ ಮೇರೆಗೆ, ಕುನಾಲ್ ಮತ್ತು ಅವನ ಸಹಚರ ಸುಮಿತ್ ಅಮೃತಸರದಿಂದ ಒಂದು ಪಿಸ್ತೂಲ್ ಮತ್ತು 20 ಸುತ್ತು ಮದ್ದುಗುಂಡುಗಳನ್ನು ಖರೀದಿಸಿದ್ದರು. ಸುಮಾರು ಎರಡು ತಿಂಗಳ ಹಿಂದೆ, ಕುನಾಲ್ ರಾಧಾ ಎಂಬಾಕೆಯನ್ನು ಭೇಟಿಯಾಗಿ ಆಕೆಯೊಂದಿಗೆ ಸಂಬಂಧ ಬೆಳೆಸಿದ್ದಾನೆ. ನಂತರ ಆತ ತನ್ನ ಚಟುವಟಿಕೆಗಳ ಬಗ್ಗೆ ಆಕೆಗೆ ತಿಳಿಸಿ, ಶಸ್ತ್ರಾಸ್ತ್ರವೊಂದನ್ನು ತೆಗೆದುಕೊಂಡು ಮುಂಬೈಗೆ ಹೋಗುವಂತೆ ಆಕೆಯನ್ನು ಒಪ್ಪಿಸಿದ್ದ ಎಂದು ಅಧಿಕಾರಿ ತಿಳಿಸಿದ್ದಾರೆ.

ಅಕ್ಟೋಬರ್ 15ರಂದು, ಕುನಾಲ್ ರಾಧಾ ಮತ್ತು ಆಕೆಯ ಸಹಚರಿ ಬಬಿತಾಳನ್ನು ನವದೆಹಲಿ ರೈಲು ನಿಲ್ದಾಣದಲ್ಲಿ ಬಿಟ್ಟಿದ್ದಾನೆ. ಪಿಸ್ತೂಲ್ ಅನ್ನು ರಾಧಾಳ ಬ್ಯಾಗ್‌ನಲ್ಲಿ ಅಡಗಿಸಿಡಲಾಗಿತ್ತು. ಪ್ರಯಾಣದುದ್ದಕ್ಕೂ ಕುನಾಲ್ ಅವರೊಂದಿಗೆ ಎನ್‌ಕ್ರಿಪ್ಟ್ ಮಾಡಿದ ಮೆಸೇಜಿಂಗ್ ಆಪ್ ಮೂಲಕ ಸಂಪರ್ಕದಲ್ಲಿದ್ದು, ಪಂಡಿತ್ ನೀಡಿದ ಸೂಚನೆಗಳನ್ನು ಅವರಿಗೆ ತಲುಪಿಸುತ್ತಿದ್ದ ಎಂದು ಅಧಿಕಾರಿ ವಿವರಿಸಿದ್ದಾರೆ. ಈ ಇಬ್ಬರು ಮಹಿಳೆಯರು ಅಕ್ಟೋಬರ್ 17ರಂದು ಮುಂಬೈ ತಲುಪಿದರು. ದಾದರ್‌ನಲ್ಲಿ ರೈಲಿನಿಂದ ಇಳಿದ ನಂತರ, ಅವರು ಹೋಟೆಲ್‌ಒಂದರಲ್ಲಿ ತಂಗಿದರು. ಬೆಳಗ್ಗೆ 11 ಗಂಟೆ ಸುಮಾರಿಗೆ, ಅಪ್ರಾಪ್ತ ಬಾಲಕನೊಬ್ಬ ಅವರ ಹೋಟೆಲ್ ಬಳಿ ರಾಧಾಳಿಂದ ಬ್ಯಾಗ್ ಅನ್ನು ಪಡೆದುಕೊಂಡನೆಂದು ಆರೋಪಿಸಲಾಗಿದೆ.

ಮರುದಿನ ಸಂಜೆ 7 ಗಂಟೆ ಸುಮಾರಿಗೆ, ಶ್ರಾಫ್ ಅವರ ಕಾರಿನ ಮೇಲೆ ಗುಂಡಿನ ದಾಳಿ ನಡೆದಿದೆ ಎಂಬ ಮಾಹಿತಿ ಸಿಕ್ಕಿತು. ದಾಳಿಕೋರರು ಮುಂಬೈನಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಪಂಡಿತ್ ಕುನಾಲ್‌ಗೆ ತಿಳಿಸಿ, ಅವರು ಅಲ್ಲಿಂದ ತಪ್ಪಿಸಿಕೊಳ್ಳಲು ವ್ಯವಸ್ಥೆ ಮಾಡುವಂತೆ ಹೇಳಿದ್ದಾನೆ. ಅಕ್ಟೋಬರ್ 18ರಂದು ರಾಧಾ ಮತ್ತು ಬಬಿತಾ 'ದಾದರ್–ಹರಿದ್ವಾರ ಎಕ್ಸ್‌ಪ್ರೆಸ್' ರೈಲಿನಲ್ಲಿ ಮುಂಬೈನಿಂದ ದೆಹಲಿಗೆ ಪ್ರಯಾಣ ಬೆಳೆಸಿದರು ಎಂದು ಅಧಿಕಾರಿ ತಿಳಿಸಿದ್ದಾರೆ.



11ನೇ ತರಗತಿ ವಿದ್ಯಾರ್ಥಿ ವಶಕ್ಕೆ

ಇನ್ನೊಂದೆಡೆ, ಪ್ರಕರಣ ಸಂಬಂಧ ಹರಿಯಾಣದ ಸೋನಿಪತ್‌ನಲ್ಲಿ 11ನೇ ತರಗತಿ ವಿದ್ಯಾರ್ಥಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈತ, ಈ ಹಿಂದೆ ನೇಪಾಳಕ್ಕೆ ಪರಾರಿಯಾಗಲು ಯತ್ನಿಸುತ್ತಿದ್ದಾಗ ಬಂಧಿಸಲ್ಪಟ್ಟಿದ್ದ ರೆಹಾನ್ ಅಲಿಯಾಸ್ ಸುಕ್ಕಾ ಎಂಬಾತನ ಬಾಲ್ಯದ ಸ್ನೇಹಿತನಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ, ತಮ್ಮ ಮಗ ನಿರಪರಾಧಿ ಎಂದು ಬಂಧಿತನ ಕುಟುಂಬ ಹೇಳಿಕೊಂಡಿದೆ. ಆತ ಅನಾರೋಗ್ಯದಿಂದ ಬಳಲುತ್ತಿರುವುದನ್ನು ಉಲ್ಲೇಖಿಸಿರುವ ತಾಯಿ, ತಮ್ಮ ಮಗನಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿದ್ದಾರೆ. ಜೈಲಿನಿಂದ ಬಿಡುಗಡೆಯಾದ ನಂತರ ಮಗ, ರೆಹಾನ್‌ನನ್ನು ಭೇಟಿಯಾಗಿಲ್ಲ ಎಂದು ಕುಟುಂಬವು ಪ್ರತಿಪಾದಿಸಿದೆ.

5.84 ಕೋಟಿ ಮೌಲ್ಯದ ಚಿನ್ನ, ವಿದೇಶಿ ಕರೆನ್ಸಿ ವಶಕ್ಕೆ

ವಿಜಯವಾಡ: ಚಿನ್ನ ಮತ್ತು ವಿದೇಶಿ ಕರೆನ್ಸಿಯ ಬೃಹತ್ ಕಳ್ಳಸಾಗಣೆ ಜಾಲವನ್ನು ಪತ್ತೆಹಚ್ಚಲಾಗಿದೆ. ಖಚಿತ ಮಾಹಿತಿಯ ಮೇರೆಗೆ, ಡೈರೆಕ್ಟರೇಟ್ ಆಫ್ ರೆವೆನ್ಯೂ ಇಂಟೆಲಿಜೆನ್ಸ್ (ಡಿಆರ್‌ಐ) ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಭಾರಿ ಪ್ರಮಾಣದ ವಿದೇಶಿ ಕರೆನ್ಸಿ ಮತ್ತು ಅಕ್ರಮ ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ. ಬಾಂಗ್ಲಾದೇಶದಿಂದ ಕೋಲ್ಕತ್ತಾ ಮಾರ್ಗವಾಗಿ ಹೈದರಾಬಾದ್‌ಗೆ ಈ ಕಳ್ಳಸಾಗಣೆ ನಡೆಸಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ಪಡೆದ ಅಧಿಕಾರಿಗಳು ದಾಳಿ ನಡೆಸಿ, 5.84 ಕೋಟಿ ರೂಪಾಯಿ ಮೌಲ್ಯದ ಚಿನ್ನ ಮತ್ತು ವಿದೇಶಿ ಕರೆನ್ಸಿಯನ್ನು ಜಪ್ತಿ ಮಾಡಿದ್ದಾರೆ. ಈ ಕಾರ್ಯಾಚರಣೆಯ ಭಾಗವಾಗಿ, ಕಳ್ಳಸಾಗಣೆ ಜಾಲಕ್ಕೆ ಸಂಬಂಧಿಸಿದ ಎರಡು ಪ್ರತ್ಯೇಕ ಗುಂಪುಗಳನ್ನು ಅಧಿಕಾರಿಗಳು ಸೆರೆಹಿಡಿದಿದ್ದಾರೆ. ವಿಜಯವಾಡದ ಹೊರವಲಯದಲ್ಲಿ, ಅನುಮಾನಾಸ್ಪದವಾಗಿ ಕಂಡುಬಂದ ಸ್ಕಾರ್ಪಿಯೋ ವಾಹನವೊಂದನ್ನು ತಡೆದು ಅಧಿಕಾರಿಗಳು ಪರಿಶೀಲನೆ ನಡೆಸಿದರು. ಈ ವೇಳೆ, ಯಾರ ಕಣ್ಣಿಗೂ ಬೀಳದಂತೆ ವಾಹನದೊಳಗೆ ರೂಪಿಸಲಾಗಿದ್ದ ರಹಸ್ಯ ಸ್ಥಳದಲ್ಲಿ ಚಿನ್ನ, ವಿದೇಶಿ ಕರೆನ್ಸಿ ಇಡಲಾಗಿತ್ತು. ಅದನ್ನು ಪತ್ತೆ ಮಾಡಿ ತೆರೆದಾಗ, 60,000 ಅಮೆರಿಕನ್ ಡಾಲರ್ ಮತ್ತು 21,500 ಯುರೋಗಳು ಸಿಕ್ಕಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಶಿವ ಶರ್ಮಾ ಕೊಲೆ ಪ್ರಕರಣ: ಮೂವರ ಬಂಧನ

ನೋಯ್ಡಾ: ಉದ್ಯಮಿ ಶಿವ ಶರ್ಮಾ ಅಸಹಜ ಸಾವು ಪ್ರಕರಣವು ಕೊಲೆಯಾಗಿ ತಿರುವು ಪಡೆದುಕೊಂಡಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲೆ ಆರೋಪದ ಹಿನ್ನೆಲೆಯಲ್ಲಿ ಪ್ರಮುಖ ಆರೋಪಿ, ಸೋಶಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ ಶ್ರದ್ಧಾ ದುಬೆ, ಆಕೆಯ ಸಹೋದರಿ ರಶ್ಮಿ ಹಾಗೂ ಅವರ ಕಾರು ಚಾಲಕ ದಾನಿಶ್ ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಉತ್ತರ ಪ್ರದೇಶ ವಿಶೇಷ ಕಾರ್ಯಪಡೆ ಮತ್ತು ಲಕ್ನೋ ಪೊಲೀಸರು, ಮಂಗಳವಾರ ನಾಗಪುರದಲ್ಲಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅ. 9ರಂದು ಹಜರತ್‌ಗಂಜ್ ಪ್ರದೇಶದ ಬಾಲೂ ಅಡ್ಡಾ ಬಳಿ ಇರುವ ಅವಧ್ ಗ್ರೀನ್ ಅಪಾರ್ಟ್‌ಮೆಂಟ್'ನ ನಾಲ್ಕನೇ ಮಹಡಿಯಿಂದ ಬಿದ್ದು ಶಿವ ಶರ್ಮಾ ಸಾವನ್ನಪ್ಪಿದ್ದರು. ಈ ಘಟನೆ ಬಳಿಕ ಶರ್ಮಾ ಅವರೊಂದಿಗೆ ಸಹಜೀವನ ನಡೆಸುತ್ತಿದ್ದಳು ಎನ್ನಲಾದ ಶ್ರದ್ಧಾ ದುಬೆ ತಲೆಮರೆಸಿಕೊಂಡಿದ್ದಳು. ಶಿವ ಶರ್ಮಾ ಸಾವಿನ ಬಳಿಕ ಅವರ ತಾಯಿ ರಂಜನಾ ಶರ್ಮಾ ಅವರು, ದುಬೆ, ಆಕೆಯ ಸಹೋದರಿ ರಶ್ಮಿ ಮತ್ತು ಇತರರು ತಮ್ಮ ಮಗನ ಮೇಲೆ ಹಲ್ಲೆ ನಡೆಸಿ, ಕಿರುಕುಳ ನೀಡಿ, ಅವನನ್ನು ಅಪಾರ್ಟ್‌ಮೆಂಟ್ ಕಟ್ಟಡದಿಂದ ಕೆಳಗೆ ತಳ್ಳಿದ್ದಾರೆ ಎಂದು ಆರೋಪಿಸಿ ದೂರು ನೀಡಿದ್ದರು. ಈ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಕಲಿ ವಿಡಿಯೋ ಹರಡುವವರಿಗೆ ಕಾನೂನು ಕ್ರಮ

ಮುಂಬೈ: ಬಾಲಿವುಡ್ ನಟ ಟೈಗರ್ ಶ್ರಾಫ್ ಅವರಿಗೆ ಸಂಬಂಧಿಸಿದ ಗುಂಡಿನ ದಾಳಿಯು ನಾಗರಿಕರ ಸುರಕ್ಷತೆಯ ಕುರಿತು ಸಾಕಷ್ಟು ಆತಂಕಗಳನ್ನು ಹುಟ್ಟುಹಾಕಿದೆ. ಪ್ರಕರಣದ ತನಿಖೆ ಸಾಗಿದ್ದು, ಮಂಗಳವಾರದಂದು ನಟನ ತಂಡವು ತಮ್ಮ ಮೊದಲ ಹೇಳಿಕೆಯನ್ನು ಬಿಡುಗಡೆ ಮಾಡಿದೆ. ಟೈಗರ್ ಶ್ರಾಫ್‌ಗೆ ಸಂಬಂಧಿಸಿದಂತೆ ಕೃತಕ ಬುದ್ಧಿಮತ್ತೆ (ಎಐ) ಬಳಸಿ ಮಾಡಿದ ಕಂಟೆಂಟ್, ನಕಲಿ ವಿಷಯ ಹರಡುವ ಎಲ್ಲರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದೆ. ಭಾನುವಾರ ಸಂಜೆ ನಡೆದ ದುರದೃಷ್ಟಕರ ಘಟನೆಗೆ ಸಂಬಂಧಿಸಿದಂತೆ ಟೈಗರ್ ಶ್ರಾಫ್ ಯಾವುದೇ ಸಾರ್ವಜನಿಕ ಹೇಳಿಕೆ ನೀಡಿಲ್ಲ ಅಥವಾ ಯಾವುದೇ ವಿಡಿಯೋಗಳನ್ನು ಬಿಡುಗಡೆ ಮಾಡಿಲ್ಲ ಎಂದು ಅವರ ತಂಡ ತಿಳಿಸಿದೆ. ಇಂತಹ ದಾರಿತಪ್ಪಿಸುವ ವಿಷಯಗಳನ್ನು ಹರಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದೂ ಎಚ್ಚರಿಸಿದ್ದಾರೆ. ತಂಡ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ, "ಇತ್ತೀಚಿನ ಘಟನೆ ಅಥವಾ ಅದಕ್ಕೆ ಸಂಬಂಧಿಸಿದ ಬೆಳವಣಿಗೆಗಳ ಕುರಿತು ಟೈಗರ್ ಶ್ರಾಫ್ ಯಾವುದೇ ಹೇಳಿಕೆಗಳನ್ನು ನೀಡಿಲ್ಲ, ಯಾವುದೇ ವಿಡಿಯೋಗಳನ್ನು ಬಿಡುಗಡೆ ಮಾಡಿಲ್ಲ ಮತ್ತು ಯಾವುದೇ ಸಂವಹನಕ್ಕೆ ಅನುಮತಿಯನ್ನೂ ನೀಡಿಲ್ಲ ಎಂಬುದನ್ನು ನಾವು ಸ್ಪಷ್ಟವಾಗಿ ಹಾಗೂ ಖಚಿತವಾಗಿ ತಿಳಿಸಲು ಬಯಸುತ್ತೇವೆ" ಎಂದು ಬರೆದುಕೊಳ್ಳಲಾಗಿದೆ.

ಗುಂಡಿನ ದಾಳಿ ಪ್ರಕರಣ

ಮೋಹನ್ ಭಾಗವತ್ ಹೇಳಿಕೆಗೆ ಅಣ್ಣಾಮಲೈ ಫಿದಾ

ನವದೆಹಲಿ: ಹಿಂದೂ ರಾಷ್ಟ್ರ ಎಂದರೆ ಮುಸ್ಲಿಮರನ್ನು ಹೊರಗಿಡುವುದಲ್ಲ, ಭಾರತ ಎಲ್ಲಾ ಧರ್ಮದವರಿಗೂ ಸೇರಿದ್ದು ಎಂಬ ಮಾತನ್ನು 'ವಿ ದಿ ಲೀಡರ್ಸ್ ಫೌಂಡೇಶನ್' ಮುಖ್ಯಸ್ಥ ಕೆ. ಅಣ್ಣಾಮಲೈ ಬೆಂಬಲಿಸಿದ್ದಾರೆ. ಭಾರತವು ಎಲ್ಲ ಸಮುದಾಯಗಳಿಗೂ ಸೇರಿದ್ದು, ಮುಸ್ಲಿಮರು ಹಾಗೂ ಇತರ ಧರ್ಮದವರಿಗೆ ದೇಶದಲ್ಲಿ ಸ್ಥಾನವಿಲ್ಲ ಎನ್ನುವ ಹಿಂದೂಗಳ ಅಭಿಪ್ರಾಯ ತಪ್ಪು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ನೀಡಿದ್ದ ಹೇಳಿಕೆಯನ್ನು ಕೆ. ಅಣ್ಣಾಮಲೈ ಸ್ವಾಗತಿಸಿದ್ದಾರೆ. ಅಮೆರಿಕ ಪ್ರವಾಸದ ವೇಳೆ ಭಾಗವತ್ ನೀಡಿದ್ದ ಈ ಹೇಳಿಕೆಯಿಂದ ತಮಗೆ ತುಂಬಾ ಸಂತೋಷವಾಗಿದೆ ಎಂದು ಅವರು ಹೇಳಿದ್ದಾರೆ. ಮಂಗಳವಾರ ಮಾತನಾಡಿದ ಅಣ್ಣಾಮಲೈ, ಮೋಹನ್ ಭಾಗವತ್ ಅವರ ವಿಜಯದಶಮಿ ಭಾಷಣವನ್ನು ಅನೇಕರು ಕುತೂಹಲದಿಂದ ಗಮನಿಸುತ್ತಾರೆ ಎಂದರು. “ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ವಿಜಯದಶಮಿ ಭಾಷಣವನ್ನು ಬಹಳಷ್ಟು ಜನರು ಸೂಕ್ಷ್ಮವಾಗಿ ಗಮನಿಸುತ್ತಾರೆ. ಅಮೆರಿಕ ಪ್ರವಾಸದ ವೇಳೆ ಭಾರತವು ಎಲ್ಲಾ ಸಮುದಾಯಗಳಿಗೂ ಸೇರಿದ್ದು, ಮುಸ್ಲಿಮರು ಮತ್ತು ಇತರ ಧರ್ಮದವರಿಗೆ ಭಾರತದಲ್ಲಿ ಸ್ಥಾನವಿಲ್ಲ ಎಂದು ಹೇಳುವ ಯಾವುದೇ ಹಿಂದೂ ಸಂಪೂರ್ಣವಾಗಿ ತಪ್ಪು ಮಾಡುತ್ತಿದ್ದಾನೆ ಎಂದು ಅವರು ಹೇಳಿದಾಗ ನನಗೆ ತುಂಬಾ ಸಂತೋಷವಾಯಿತು. ಅವರ ಹೇಳಿಕೆಯನ್ನು ನಾನು ಸ್ವಾಗತಿಸುತ್ತೇನೆ” ಎಂದು ಅಣ್ಣಾಮಲೈ ತಿಳಿಸಿದ್ದಾರೆ.

ಮಾಲಿಯಲ್ಲಿ ಐಸಿಸ್ ಉಗ್ರರ ನರಮೇಧ

ಬಮಾಕೊ: ಪಶ್ಚಿಮ ಆಫ್ರಿಕಾದ ಮಾಲಿಯಲ್ಲಿ ಇಸ್ಲಾಮಿಕ್ ಸ್ಟೇಟ್ (ಐಸಿಸ್) ಸಂಘಟನೆಯೊಂದಿಗೆ ನಂಟು ಹೊಂದಿರುವ ಉಗ್ರರು ಭೀಕರ ದಾಳಿ ನಡೆಸಿದ್ದು, ಸುಮಾರು 70 ನಾಗರಿಕರನ್ನು ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ. ಈ ಕುರಿತು ಡೈಲಿ ಮೇಲ್ ವರದಿ ಮಾಡಿದ್ದು, ಮೃತರಲ್ಲಿ ಕೆಲವರನ್ನು ಜೀವಂತವಾಗಿಯೇ ಸುಟ್ಟಿರುವ ಆರೋಪ ಕೇಳಿಬಂದಿದೆ. ಅಲ್‌ಖೈದಾ ನಂಟಿನ ಉಗ್ರರೊಂದಿಗೆ ಸಂಘರ್ಷ ತೀವ್ರಗೊಂಡಿರುವ ಸಂದರ್ಭದಲ್ಲೇ ಈ ಹಿಂಸಾಚಾರ ನಡೆದಿದೆ. ಮೂಲಗಳ ಪ್ರಕಾರ ಮಾಲಿಯ ಪೂರ್ವ ಭಾಗದ ಮೆನಾಕಾ ಪ್ರದೇಶದಲ್ಲಿ ವಾರಾಂತ್ಯದಲ್ಲಿ ಈ ದಾಳಿಗಳು ನಡೆದಿವೆ. ಸರ್ಕಾರದ ಪರವಾಗಿರುವ ಪಡೆಗಳು ಐಸಿಸ್‌ಗೆ ಮಾಹಿತಿ ನೀಡುತ್ತಿದ್ದಾರೆಂದು ಶಂಕಿಸಲಾದ ವ್ಯಕ್ತಿಗಳ ಮೇಲೆ ದಾಳಿ ನಡೆಸಿದ ಹಿನ್ನೆಲೆಯಲ್ಲಿ, ಪ್ರತೀಕಾರವಾಗಿ ಉಗ್ರರು ಈ ಕೃತ್ಯ ಎಸಗಿರಬಹುದು ಎಂದು ಭದ್ರತಾ ಮೂಲಗಳು ಮತ್ತು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಐದು ಪ್ರದೇಶಗಳಲ್ಲಿ ದಾಳಿ: ಇಸ್ಲಾಮಿಕ್ ಸ್ಟೇಟ್ ಸಾಹೆಲ್ ಪ್ರಾಂತ್ಯ ಸಂಘಟನೆಯ ಉಗ್ರರು ಮೆನಾಕಾ ಪ್ರದೇಶದ ಕನಿಷ್ಠ ಐದು ಸ್ಥಳಗಳಲ್ಲಿ ದಾಳಿ ನಡೆಸಿದ್ದು, ಮಂಗಳವಾರದ ವೇಳೆಗೆ ಸಾವಿನ ನಿಖರ ಸಂಖ್ಯೆ ಇನ್ನೂ ದೃಢಪಟ್ಟಿರಲಿಲ್ಲ. ವಿವಿಧ ಮೂಲಗಳ ಪ್ರಕಾರ, ಮೃತಪಟ್ಟವರ ಸಂಖ್ಯೆ 48ರಿಂದ 70ಕ್ಕೂ ಅಧಿಕ ಇರಬಹುದು. ಭಾನುವಾರ ನಡೆದ ಪ್ರತೀಕಾರದ ದಾಳಿಗಳ ವೇಳೆ ಉಗ್ರರು ಮನೆಗಳಿಗೆ ಬೆಂಕಿ ಹಚ್ಚಿ, ಜಾನುವಾರುಗಳನ್ನು ಕದ್ದಿದ್ದಾರೆ. ಇದರಿಂದ ನೂರಾರು ನಾಗರಿಕರು ತಮ್ಮ ಮನೆಗಳನ್ನು ತೊರೆದು ಮೆನಾಕಾ ಪಟ್ಟಣಕ್ಕೆ ಪಲಾಯನ ಮಾಡಿದ್ದಾರೆ. ಕೆಲವರು ಬೆಂಕಿಯಲ್ಲಿ ಸಿಲುಕಿ ಮೃತಪಟ್ಟಿದ್ದರೆ, ಇತರರನ್ನು ಗುಂಡಿಕ್ಕಿ ಕೊಲ್ಲಲಾಗಿದೆ ಎಂದು ಮೂಲಗಳು ತಿಳಿಸಿವೆ.

ಟೈಗರ್ ಶ್ರಾಫ್ ಕಾರಿನ ಮೇಲೆ ಶೂಟೌಟ್ ಬಳಿಕ ಬಾಲಿವುಡ್ ನಟರ ನಿವಾಸಗಳಿಗಿದ್ದ ಭದ್ರತೆ ಹೆಚ್ಚಳ

ಬಾಲಿವುಡ್ ನಟ ಟೈಗರ್ ಶ್ರಾಫ್ ಕಾರಿನ ಮೇಲೆ ನಡೆದ ಗುಂಡಿನ ದಾಳಿ ಪ್ರಕರಣದ ಬಳಿಕ ಬಾಲಿವುಡ್ ನಟರ ಮನೆಗಳಿಗೆ ನೀಡಲಾಗಿದ್ದ ಭದ್ರತೆಯನ್ನು ಹೆಚ್ಚಿಸಲಾಗಿದೆ. ಮುಂಬೈ ಪೊಲೀಸರು ಜುಹು ಮತ್ತು ಬಾಂದ್ರಾ ಪ್ರದೇಶಗಳಲ್ಲಿರುವ ಹಲವಾರು ಬಾಲಿವುಡ್ ನಟರ ಮನೆಗಳ ಬಳಿ ಭದ್ರತೆಯನ್ನು ಹೆಚ್ಚಿಸಿದ್ದಾರೆ. ಜೊತೆಗೆ ಅಕ್ಷಯ್ ಕುಮಾರ್ ಸೇರಿದಂತೆ ಇತರ ನಟರು ತಮ್ಮ ಸುರಕ್ಷತೆಗಾಗಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಈ ಪ್ರಕರಣ ಸಂಬಂಧ ದೆಹಲಿ ಪೊಲೀಸರು ಇಬ್ಬರು ಮಹಿಳೆಯರು ಸೇರಿದಂತೆ ಮತ್ತೆ ನಾಲ್ವರನ್ನು ಬಂಧಿಸಿದ್ದಾರೆ, ಸದ್ಯ ಆರೋಪಿಗಳನ್ನು ಮುಂಬೈ ಪೊಲೀಸರಿಗೆ ಹಸ್ತಾಂತರಿಸಲಾಗಿದ್ದು, ತನಿಖೆ ಮುಂದುವರಿದಿದೆ. ಅ.18ರಂದು ಮುಂಬೈನ ಜುಹು ಪ್ರದೇಶದಲ್ಲಿ ಬಾಲಿವುಡ್ ನಟ ಟೈಗರ್ ಶ್ರಾಫ್ ಅವರು ತಮ್ಮ ಕಾರಿನಲ್ಲಿ ಹೊರಟಿದ್ದರು.

ಅವರನ್ನು ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಜನ ಆಗಮಿಸಿದ್ದರು. ಈ ವೇಳೆ ಅವರ ಕಾರನ್ನು ಗುರಿಯಾಗಿಸಿ ಮೂವರು ದುಷ್ಕರ್ಮಿಗಳು ಏಳು ಸುತ್ತು ಗುಂಡುಗಳನ್ನು ಹಾರಿಸಲಾಗಿದೆ. ಅದೃಷ್ಟವಶಾತ್ ಟೈಗರ್ ಶ್ರಾಫ್ ಸುರಕ್ಷಿತವಾಗಿದ್ದು, ಯಾವುದೇ ಗಾಯಗಳಾಗಿಲ್ಲ, ಆದರೆ ಕಾರು ಚಾಲಕರು ಗಾಯಗೊಂಡಿದ್ದಾರೆ.

ಬಂಧಿತ ಆರೋಪಿಯನ್ನು ಅಂಕಿತ ಎಂದು ಗುರುತಿಸಲಾಗಿದೆ. ಗುಂಡಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದ್ದು, ಗೊಹಾನಾ ಪೊಲೀಸರು ಮತ್ತು ಮುಂಬೈ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿದ್ದಾರೆ. ಸದ್ಯ ಆರೋಪಿಯನ್ನು ಹರಿಯಾಣದ ಗೊಹಾನಾ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ಹೆಚ್ಚಿನ ತನಿಖೆಗಾಗಿ ಮುಂಬೈಗೆ ಕರೆತರಲು ಮುಂಬೈ ಪೊಲೀಸರು ಅನುಮತಿ ಪಡೆದಿದ್ದಾರೆ.

ಬಂಧಿತ ಆರೋಪಿಯು ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಸಹಚರನೆಂದು ಹೇಳಲಾದ ಅನಿಲ್ ಪಂಡಿತ್ ಜೊತೆ ಆರ್ಥಿಕ ನಂಟು ಹೊಂದಿರುವ ಶಂಕೆಯ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ.

ರಚಿತಾ ರಾಮ್ ಹೆಗಲ ಮೇಲೆ ಕೈ ಹಾಕಿ ಸೆಲ್ಫಿಗೆ ಯತ್ನ

ದಸರಾ ಕಾರ್ಯಕ್ರಮದಲ್ಲಿ ನಟಿ ರಚಿತಾ ರಾಮ್ ಅವರ ಜೊತೆ ಸೆಲ್ಫಿ ತೆಗೆದುಕೊಳ್ಳಲು ಬಂದ ಅಭಿಮಾನಿಯೊಬ್ಬರು ಅತಿರೇಕದ ವರ್ತನೆ ತೋರಿದ್ದಾನೆ. ರ್‍ಯಾಂಪ್ ವಾಕ್ ಮಾಡುತ್ತಿದ್ದ ರಚಿತಾ ರಾಮ್ ಅವರ ಬಳಿ ಬಂದ ವ್ಯಕ್ತಿ, ಅವರ ಹೆಗಲ ಮೇಲೆ ಕೈ ಹಾಕಿ ಮೊಬೈಲ್‌ನಲ್ಲಿ ಸೆಲ್ಫಿ ತೆಗೆದುಕೊಳ್ಳಲು ಯತ್ನಿಸಿದ್ದಾರೆ. ಈ ವೇಳೆ ನಟಿಯನ್ನು ಎಳೆದಾಡಿದ್ದು, ತಕ್ಷಣ ಪೊಲೀಸರು ಮಧ್ಯಪ್ರವೇಶಿಸಿ ಆತನನ್ನು ಹಿಡಿದಿದ್ದಾರೆ. ತುಮಕೂರು ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ನಿನ್ನೆ ರಾತ್ರಿ ದಸರಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಟಿ ರಚಿತಾ ರಾಮ್ ಭಾಗವಹಿಸಿದ್ದರು. ಈ ವೇಳೆ ತುಮಕೂರು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಅಶ್ವಿಜಾ ಅವರ ಜೊತೆ ರಚಿತಾ ರಾಮ್ ರ್‍ಯಾಂಪ್ ವಾಕ್ ಮಾಡುತ್ತಿದ್ದರು. ಅಭಿಮಾನಿಗಳ ನಡುವೆ ನಿರ್ಮಿಸಿದ್ದ ರ್‍ಯಾಂಪ್ ವಾಕ್ ಟ್ರ್ಯಾಕ್‌ನಲ್ಲಿ ನಟಿ ಹೆಜ್ಜೆ ಹಾಕುತ್ತಿದ್ದಾಗ, ಅಭಿಮಾನಿಯೊಬ್ಬ ಏಕಾಏಕಿ ಸ್ಟೇಜ್ ಮೇಲೆ ಬಂದಿದ್ದಾನೆ. ರಚಿತಾ ರಾಮ್ ಅವರ ಹೆಗಲ ಮೇಲೆ ಕೈ ಹಾಕಿ ಸೆಲ್ಫಿ ತೆಗೆದುಕೊಳ್ಳಲು ಯತ್ನಿಸಿದ್ದಾರೆ.

ಧುರಂಧರ್’ ಚಿತ್ರಕ್ಕೆ ಶಶಿ ತರೂರ್ ವಿಮರ್ಶೆ: ಹಿಂಸಾಚಾರ, ಪ್ರೊಪಗಾಂಡ ಬಗ್ಗೆ ಅಸಮಾಧಾನ

ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ರಣವೀರ್ ಸಿಂಗ್ ಅಭಿನಯದ ಬಹುಚರ್ಚಿತ ಸ್ಪೈ ಥ್ರಿಲ್ಲರ್ ‘ಧುರಂಧರ್’ ಸಿನಿಮಾಗಳ ಮೇಕಿಂಗ್ ಹಾಗೂ ನಟನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಆದರೆ, ಚಿತ್ರದಲ್ಲಿರುವ ಅತಿರೇಕದ ಹಿಂಸಾಚಾರ ಮತ್ತು ಪ್ರೊಪಗಾಂಡ ಕುರಿತು ಅವರು ಕೆಲವು ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ. ಆದಿತ್ಯ ಧರ್ ನಿರ್ದೇಶನದ ಈ ಎರಡು ಭಾಗಗಳ ಸಿನಿಮಾಗಳನ್ನು ವೀಕ್ಷಿಸಿರುವ ಶಶಿ ತರೂರ್, ಮೊದಲ ಭಾಗಕ್ಕಿಂತ ಎರಡನೇ ಭಾಗವಾದ **‘ಧುರಂಧರ್:** ದಿ ರಿವೆಂಜ್’ ಚಿತ್ರ ತಮಗೆ ಹೆಚ್ಚು ಇಷ್ಟವಾಯಿತು ಎಂದು ಅಭಿಪ್ರಾಯಪಟ್ಟಿದ್ದಾರೆ. 2025ರ ಡಿಸೆಂಬರ್ ಹಾಗೂ 2026ರ ಮಾರ್ಚ್‌ನಲ್ಲಿ ಬಿಡುಗಡೆಯಾದ ಈ ಎರಡು ಚಿತ್ರಗಳು ವಿಶ್ವದಾದ್ಯಂತ 3,100 ಕೋಟಿ ರೂ.ಗಳಿಗೂ ಅಧಿಕ ಹಣ ಗಳಿಕೆ ಮಾಡಿವೆ. ‘ಧುರಂಧರ್’ ಚಿತ್ರದಲ್ಲಿ ತೋರಿಸಲಾಗಿರುವ ಹಿಂಸಾಚಾರದ ಬಗ್ಗೆ ಕಟುವಾಗಿ ಟೀಕಿಸಿರುವ ಶಶಿ ತರೂರ್ ಅವರು, ನಿರ್ದೇಶಕರು ಇಷ್ಟು ಪ್ರಮಾಣದ ಹಿಂಸೆಯ ದೃಶ್ಯಗಳಿಲ್ಲದೆಯೂ ಕಥೆಯನ್ನು ಹೇಳಬಹುದಿತ್ತು ಎಂದಿದ್ದಾರೆ. ‘ಚಿತ್ರದಲ್ಲಿ ಅತಿ ಹೆಚ್ಚಿನ ಪ್ರಮಾಣದ ರಕ್ತಪಾತ, ಕ್ರೌರ್ಯ ಹಾಗೂ ಭಾರತೀಯ ಸಿನಿಮಾದಲ್ಲೇ ಎಂದೂ ಕಾಣದಂತಹ ಅಸಹ್ಯಕರ ದೃಶ್ಯಗಳಿವೆ.

ಇದರ ಯಾವುದೇ ಅಗತ್ಯವಿರಲಿಲ್ಲ’ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಭಾರತ–ಪಾಕಿಸ್ತಾನ ಸಂಬಂಧಗಳ ಚಿತ್ರಣ ಮತ್ತು ಸಿನಿಮಾದಲ್ಲಿ ಅಡಕವಾಗಿರುವ ಪ್ರೊಪಗಾಂಡ ಬಗ್ಗೆಯೂ ಶಶಿ ತರೂರ್ ಮಾತನಾಡಿದ್ದಾರೆ. ಪಾಕಿಸ್ತಾನ ಮತ್ತು ಕೆಲವು ಗಲ್ಫ್ ರಾಷ್ಟ್ರಗಳಲ್ಲಿ ಈ ಚಿತ್ರವನ್ನು ನಿಷೇಧಿಸಿರುವುದನ್ನು ಉಲ್ಲೇಖಿಸಿರುವ ಅವರು, ಇದು ಭಾರತೀಯರು ಮತ್ತು ಪಾಕಿಸ್ತಾನಿಗಳ ನಡುವೆ ಅನಗತ್ಯ ದ್ವೇಷವನ್ನು ಸೃಷ್ಟಿಸಬಹುದು ಎಂಬ ಆತಂಕವಿರುವುದರಿಂದ ಆ ದೇಶಗಳ ನಿಲುವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ’ ಎಂದಿದ್ದಾರೆ.

ಅಲ್ಲದೆ, ರಣವೀರ್ ಸಿಂಗ್ ನಿರ್ವಹಿಸಿರುವ ಜಸ್ಕೀರತ್ ಸಿಂಗ್ ರಂಗಿ ಅಲಿಯಾಸ್ ಹಮ್ಜಾ ಅಲಿ ಮಜಾರಿ ಪಾತ್ರದ ಬಗ್ಗೆ ಮಾತನಾಡುತ್ತಾ, ತಮ್ಮ ನೈಜ ಜೀವನದ ಗುಪ್ತಚರ ಅಧಿಕಾರಿಗಳ ಭೇಟಿಗೂ ಸಿನಿಮಾದಲ್ಲಿ ತೋರಿಸಿರುವ ರಹಸ್ಯ ಕಾರ್ಯಾಚರಣೆಗಳಿಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರಿಂದ ಪ್ರೇರಿತರಾಗಿರುವ ಆರ್. ಮಾಧವನ್ ಅವರ ಪಾತ್ರದ ಕಾಲಮಿತಿಯ ಬಗ್ಗೆಯೂ ಅವರು ಕೆಲವು ತಾರ್ಕಿಕ ಪ್ರಶ್ನೆಗಳನ್ನು ಎತ್ತಿದ್ದಾರೆ.



ಪಶ್ಚಿಮ ಬಂಗಾಳದಲ್ಲಿ ‘ರಾಮಾಯಣ’ ಚಿತ್ರಕ್ಕೆ ತೆರಿಗೆ ವಿನಾಯಿತಿ

ಬಾಲಿವುಡ್‌ನ ಬಹುನಿರೀಕ್ಷಿತ ಹಾಗೂ ಬೃಹತ್ ಬಜೆಟ್‌ನ ‘ರಾಮಾಯಣ’ ಚಿತ್ರಕ್ಕೆ ಪಶ್ಚಿಮ ಬಂಗಾಳ ಸರ್ಕಾರವು ತೆರಿಗೆ ವಿನಾಯಿತಿ ಘೋಷಿಸಿದೆ. ವಿಜಯದಶಮಿ ಹಬ್ಬದ ಶುಭ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂಧು ಅಧಿಕಾರಿ ಈ ಪ್ರಮುಖ ನಿರ್ಧಾರವನ್ನು ಪ್ರಕಟಿಸಿದ್ದಾರೆ. ನಿತೇಶ್ ತಿವಾರಿ ನಿರ್ದೇಶನದ ಈ ಚಿತ್ರವು ದೀಪಾವಳಿ ಹಬ್ಬದ ಪ್ರಯುಕ್ತ ನವೆಂಬರ್ 5ರಂದು ಜಗತ್ತಿನಾದ್ಯಂತ ಚಿತ್ರಮಂದಿರಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ವಿಜಯದಶಮಿಯಂದು ಸುದ್ದಿ ಸಂಸ್ಥೆ ‘ಎಎನ್‌ಐ’ ಜೊತೆ ಮಾತನಾಡಿದ ಸಿಎಂ ಸುವೇಂಧು ಅಧಿಕಾರಿ, ‘ರಾಮಾಯಣ ಸಿನಿಮಾಗೆ ತೆರಿಗೆ ವಿನಾಯಿತಿ ನೀಡಲಾಗಿದೆ. ಈ ಹಿಂದೆ ದಿ ಕೇರಳ ಸ್ಟೋರಿ, ದಿ ಕಾಶ್ಮೀರ್ ಫೈಲ್ಸ್ ಮತ್ತು ದಿ ಬೆಂಗಾಲ್ ಫೈಲ್ಸ್ ಚಿತ್ರಗಳಿಗೆ ತೆರಿಗೆ ವಿನಾಯಿತಿ ನೀಡಿದಂತೆಯೇ, ರಾಮಾಯಣ ಚಿತ್ರಕ್ಕೂ ಇದು ಅನ್ವಯಿಸಲಿದೆ. ಮುಂಬರುವ ದಿನಗಳಲ್ಲಿ ಶ್ರೀಕೃಷ್ಣ, ಅರ್ಜುನ ಹಾಗೂ ಮಹಾಭಾರತಕ್ಕೆ ಸಂಬಂಧಿಸಿದ ಇನ್ನಷ್ಟು ಪೌರಾಣಿಕ ಸಿನಿಮಾಗಳನ್ನು ನಾವು ನೋಡಲಿದ್ದೇವೆ’ ಎಂದರು. ಇದೇ ಸಂದರ್ಭದಲ್ಲಿ ಕೋಲ್ಕತ್ತಾದ ಚೋರ್‌ಬಗಾನ್ ಪ್ರದೇಶದ ದುರ್ಗಾಪೂಜಾ ಪಂಡಾಲ್‌ನಲ್ಲಿ ನಡೆದ ದುರಂತ ಘಟನೆಗೆ ಸಂತಾಪ ಸೂಚಿಸಿದ ಸಿಎಂ, ದುರಂತದಲ್ಲಿ ಸಂತ್ರಸ್ತರಾದ ಕುಟುಂಬಸ್ಥರಿಗೆ ಶ್ರದ್ಧಾಂಜಲಿ ಸಲ್ಲಿಸಿ, ಒಂದು ನಿಮಿಷ ಮೌನ ಆಚರಿಸಿದರು.ಸುಮಾರು 4,000 ಕೋಟಿ ರೂಪಾಯಿ ಬೃಹತ್ ವೆಚ್ಚದಲ್ಲಿ ಎರಡು ಭಾಗಗಳಾಗಿ ನಿರ್ಮಾಣವಾಗುತ್ತಿರುವ ಪೌರಾಣಿಕ ಕಥಾಹಂದರದ ‘ರಾಮಾಯಣ’ ಸಿನಿಮಾದಲ್ಲಿ ಶ್ರೀರಾಮನಾಗಿ ರಣಬೀರ್ ಕಪೂರ್, ರಾವಣನಾಗಿ ರಾಕಿಂಗ್ ಸ್ಟಾರ್ ಯಶ್, ಸೀತೆಯಾಗಿ ಸಾಯಿ ಪಲ್ಲವಿ, ಲಕ್ಷ್ಮಣನಾಗಿ ರವಿ ದುಬೆ, ಹನುಮಂತನಾಗಿ ಸನ್ನಿ ಡಿಯೋಲ್ ಅವರು ಅಭಿನಯಿಸಿದ್ದಾರೆ.

ಇದಲ್ಲದೆ ರಕುಲ್ ಪ್ರೀತ್ ಸಿಂಗ್, ವಿವೇಕ್ ಒಬೆರಾಯ್, ಅರುಣ್ ಗೋವಿಲ್, ಲಾರಾ ದತ್ತಾ, ಶೋಭನಾ, ಶೀಬಾ ಚಡ್ಡಾ, ಫೈಸಲ್ ಮಲಿಕ್ ಸೇರಿದಂತೆ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ. ನಮಿತ್ ಮಲ್ಹೋತ್ರಾ ಅವರ ‘ಪ್ರೈಮ್ ಫೋಕಸ್ ಸ್ಟುಡಿಯೋಸ್’, ಯಶ್ ಅವರ ‘ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್’ ಮತ್ತು ‘’ ಸಂಸ್ಥೆಗಳು ಜಂಟಿಯಾಗಿ ಈ ಚಿತ್ರವನ್ನು ನಿರ್ಮಿಸುತ್ತಿವೆ. ಸಿನಿಮಾದ ಫಸ್ಟ್ ಲುಕ್ ಬಿಡುಗಡೆಯಾದಾಗ ವಿಎಫ್‌ಎಕ್ಸ್ ಮತ್ತು ಪಾತ್ರವರ್ಗದ ಬಗ್ಗೆ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗಿತ್ತಾದರೂ, ನಂತರ ಬಿಡುಗಡೆಯಾದ ಟ್ರೇಲರ್ ಪ್ರೇಕ್ಷಕರಿಂದ ಉತ್ತಮ ಮೆಚ್ಚುಗೆ ಪಡೆದುಕೊಂಡಿದೆ. ಸಿದ್ಧಾರ್ಥ್ ಕನ್ನನ್ ಜೊತೆಗಿನ ಸಂಭಾಷಣೆಯಲ್ಲಿ ಸ್ನೇಹ್ ಜಾಲ ಮಾತನಾಡಿದ್ದಾರೆ. ‘ಅರ್ಜುನ್ ಕಪೂರ್ ಚಿತ್ರರಂಗದ ಅತ್ಯಂತ ದಯಾಪರ ವ್ಯಕ್ತಿಗಳಲ್ಲಿ ಒಬ್ಬರು ಎಂದು ಅವರು ಬಣ್ಣಿಸಿದ್ದಾರೆ. ಅರ್ಜುನ್ ಕೆಲವೊಮ್ಮೆ ಕೋಪಗೊಂಡರೂ ತಕ್ಷಣ ಕ್ಷಮೆ ಕೇಳುತ್ತಾರೆ. ಸೂಕ್ತವಲ್ಲದ ಸ್ಥಳದ ಬಗ್ಗೆ ಫೋಟೋಗ್ರಾಫರ್‌ಗಳಿಗೆ ಪ್ರೀತಿಯಿಂದ ವಿವರಿಸುತ್ತಾರೆ’ ಎಂದಿದ್ದಾರೆ.ಅರ್ಜುನ್ ಕಪೂರ್ ಸೆಲೆಬ್ರಿಟಿಗಳು ಮತ್ತು ಫೋಟೋಗ್ರಾಫರ್‌ಗಳ ಬಾಂಧವ್ಯವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ತಮ್ಮ ಸಹೋದರಿ ಅಂಶುಲಾ ಕಪೂರ್ ಮದುವೆಯಲ್ಲೂ ಮಾಧ್ಯಮಗಳಿಗೆ ಉತ್ತಮ ವ್ಯವಸ್ಥೆ ಮಾಡಿದ್ದರು. ಕ್ಯಾಮೆರಾ ಕೊಳ್ಳಲು ಹಣವಿಲ್ಲದ ಕೆಲವು ಫೋಟೋಗ್ರಾಫರ್‌ಗಳಿಗೆ ಅರ್ಜುನ್ ಸ್ವತಃ ಕ್ಯಾಮೆರಾ ಖರೀದಿಸಿ ಕೊಟ್ಟಿದ್ದಾರೆ. ಅವರು ನಿಜವಾಗಲೂ ರತ್ನದಂತಹ ವ್ಯಕ್ತಿ ಎಂದು ಸ್ನೇಹ್ ಹೇಳಿದ್ದಾರೆ.

ಮಗಳಿಗೆ ‘ದೇವಿ ಹೆಸರಿಟ್ಟ ದೀಪಿಕಾ ರಣವೀರ್

ಬಾಲಿವುಡ್‌ನ ಜನಪ್ರಿಯ ತಾರಾ ದಂಪತಿ ದೀಪಿಕಾ ಪಡುಕೋಣೆ ಮತ್ತು ರಣವೀರ್ ಸಿಂಗ್ ವಿಜಯದಶಮಿಯ ಶುಭ ಸಂದರ್ಭದಲ್ಲಿ ತಮ್ಮ ಎರಡನೇ ಹೆಣ್ಣು ಮಗುವಿನ ಹೆಸರನ್ನು ಅಧಿಕೃತವಾಗಿ ಬಹಿರಂಗಪಡಿಸಿದ್ದಾರೆ. ತಮ್ಮ ಮುದ್ದಾದ ಮಗಳಿಗೆ ದೇವಿ ಪಡುಕೋಣೆ ಸಿಂಗ್ ಎಂದು ನಾಮಕರಣ ಮಾಡಿದ್ದಾರೆ. ಎರಡನೇ ಮಗುವಿನ ಆಗಮನದ ನಂತರ ಮೊದಲ ಬಾರಿಗೆ ಇಡೀ ಕುಟುಂಬದ ಮೊದಲ ಚಿತ್ರವನ್ನು ದಂಪತಿ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಇನ್‌ಸ್ಟಾಗ್ರಾಮ್‌ನಲ್ಲಿ ಈ ಅಪರೂಪದ ಫೋಟೋವನ್ನು ಹಂಚಿಕೊಂಡಿರುವ ದೀಪಿಕಾ, ‘‘ಪ್ರೀತಿ ಮತ್ತು ಸಮೃದ್ಧಿ ದೇವಿ ಪಡುಕೋಣೆ ಸಿಂಗ್ ಎಂದು ಪ್ರೀತಿಯ ಶೀರ್ಷಿಕೆ ನೀಡಿದ್ದಾರೆ. ಹಂಚಿಕೊಳ್ಳಲಾದ ಫೋಟೋದಲ್ಲಿ ರಣವೀರ್ ಸಿಂಗ್, ದೀಪಿಕಾ ಪಡುಕೋಣೆ, ಅವರ ಮೊದಲ ಮಗಳು ದುವಾ ಹಾಗೂ ಪುಟ್ಟ ಕಂದಮ್ಮ ದೇವಿ ನಾಲ್ವರೂ ಒಂದೇ ರೀತಿಯ ಬಂಗಾರದ ಬಣ್ಣದ ಸಾಂಪ್ರದಾಯಿಕ ಉಡುಪಿನಲ್ಲಿ ಮಿಂಚಿದ್ದಾರೆ.

ರಣವೀರ್ ತಮ್ಮ ಹಿರಿಯ ಪುತ್ರಿ ದುವಾಳನ್ನು ಎತ್ತಿಕೊಂಡಿದ್ದು, ಆಕೆ ಪುಟ್ಟ ತಂಗಿಗೆ ಮುತ್ತಿಡುತ್ತಿರುವುದು ಮತ್ತು ದೀಪಿಕಾ ಮಗು ದೇವಿಯನ್ನು ಪ್ರೀತಿಯಿಂದ ಎದೆಯಪ್ಪಿಕೊಂಡಿರುವುದು ಚಿತ್ರದಲ್ಲಿ ಸೆರೆಯಾಗಿದೆ.

ಈ ಮುದ್ದಾದ ಕುಟುಂಬದ ಚಿತ್ರಕ್ಕೆ ಬಾಲಿವುಡ್ ಚಿತ್ರರಂಗದ ಶರ್ವರಿ, ಮೃಣಾಲ್ ಠಾಕೂರ್, ಭೂಮಿ ಪೆಡ್ನೇಕರ್, ಪ್ರಜ್ಞಾ ಜೈಸ್ವಾಲ್, ಹರ್ಷದೀಪ್ ಕೌರ್ ಸೇರಿದಂತೆ ಗಣ್ಯರು ಅಭಿಮಾನಿಗಳು ಹಾರೈಸಿ ಶುಭ ಕೋರಿದ್ದಾರೆ. ದೀಪಿಕಾ–ರಣವೀರ್ ದಂಪತಿ 2026ರ ಸೆಪ್ಟೆಂಬರ್ 19 ರಂದು ಎರಡನೇ ಮಗುವನ್ನು ಸ್ವಾಗತಿಸಿದ್ದರು.

ಗುಜರಾತ್ ಟೈಟಾನ್ಸ್ ತಂಡದಿಂದ ಇಬ್ಬರು ಸ್ಟಾರ್ ಆಟಗಾರರು ಔಟ್?

ಐಪಿಎಲ್ 2027ರ ಮಿನಿ ಹರಾಜಿಗೂ ಮುನ್ನ ಗುಜರಾತ್ ಟೈಟಾನ್ಸ್ ತಂಡದಲ್ಲಿ ಭಾರಿ ಬದಲಾವಣೆಗಳಾಗುವ ಮುನ್ಸೂಚನೆ ಸಿಕ್ಕಿದೆ. ಕಳೆದ ಸೀಸನ್‌ನಲ್ಲಿ ಕಳಪೆ ಪ್ರದರ್ಶನ ನೀಡಿದ ಇಬ್ಬರು ಪ್ರಮುಖ ಆಟಗಾರರನ್ನು ಬಿಡುಗಡೆ ಮಾಡಲು ಗುಜರಾತ್ ಟೈಟಾನ್ಸ್ ಫ್ರಾಂಚೈಸಿ ನಿರ್ಧರಿಸಿದೆ ಎಂದು ವರದಿಯಾಗಿದೆ. ಆ ಆಟಗಾರರು ಯಾರೆಂದರೆ... **ಶಾರುಖ್ ಖಾನ್:** ಗುಜರಾತ್ ಟೈಟಾನ್ಸ್ ತಂಡದಲ್ಲಿರುವ ಹೊಡಿಬಡಿ ದಾಂಡಿಗ ಶಾರುಖ್ ಖಾನ್ ಅವರನ್ನು ರಿಲೀಸ್ ಮಾಡಲು ಫ್ರಾಂಚೈಸಿ ನಿರ್ಧರಿಸಿದೆ. ಇದಕ್ಕೆ ಮುಖ್ಯ ಕಾರಣ ಕಳಪೆ ಪ್ರದರ್ಶನ. 2024ರ ಸೀಸನ್‌ನಿಂದ ಟೈಟಾನ್ಸ್ ತಂಡದ ಭಾಗವಾಗಿರುವ ಶಾರುಖ್, ಮೊದಲ ವರ್ಷ ಕೇವಲ 20ರ ಸರಾಸರಿಯಲ್ಲಿ ಕಲೆಹಾಕಿದ್ದರು. ಆ ಬಳಿಕ 2025 ರ ಆವೃತ್ತಿಯಲ್ಲಿ 15 ಪಂದ್ಯಗಳನ್ನಾಡಿ ಗಳಿಸಿದ್ದು ಕೇವಲ 179 ರನ್ ಮಾತ್ರ. ಇನ್ನು ಕಳೆದ ಸೀಸನ್‌ನಲ್ಲಿ ಆಡಿದ 9 ಪಂದ್ಯಗಳಿಂದ ಕೇವಲ 43 ರನ್ ಗಳಿಸಲಷ್ಟೇ ಶಕ್ತರಾಗಿದ್ದರು. ಇದೀಗ 4 ಕೋಟಿ ರೂ. ಬೆಲೆಯ ಆಟಗಾರನನ್ನು ರಿಲೀಸ್ ಮಾಡಲು ಗುಜರಾತ್ ಟೈಟಾನ್ಸ್ ನಿರ್ಧರಿಸಿದೆ ಎಂದು ತಿಳಿದು ಬಂದಿದೆ. **ಗ್ಲೆನ್ ಫಿಲಿಪ್ಸ್:** ನ್ಯೂಝಿಲೆಂಡ್ ಆಲ್‌ರೌಂಡರ್ ಗ್ಲೆನ್ ಫಿಲಿಪ್ಸ್ ಕಳೆದ ಎರಡು ಸೀಸನ್‌ಗಳಿಂದ ಗುಜರಾತ್ ಟೈಟಾನ್ಸ್ ತಂಡದಲ್ಲಿ ಕಾಣಿಸಿಕೊಂಡಿದ್ದರೂ ಆಡಿರುವುದು ಕೇವಲ 6 ಮ್ಯಾಚ್‌ಗಳು ಮಾತ್ರ. ಇದರಲ್ಲಿ 5 ಪಂದ್ಯಗಳಲ್ಲಿ 124ರ ಸ್ಟ್ರೈಕ್ ರೇಟ್‌ನಲ್ಲಿ ಕೇವಲ 67 ರನ್ ಗಳಿಸಲಷ್ಟೇ ಶಕ್ತರಾಗಿದ್ದರು. ಇದೀಗ 2 ಕೋಟಿ ರೂ. ಬೆಲೆಯ ಗ್ಲೆನ್ ಫಿಲಿಪ್ಸ್ ಅವರನ್ನು ಬಿಡುಗಡೆ ಮಾಡಿ ಪರ್ಸ್ ಮೊತ್ತ ಹೆಚ್ಚಿಸಲು ಗುಜರಾತ್ ಟೈಟಾನ್ಸ್ ಮುಂದಾಗಿದೆ. **ಕಾನರ್ ಎಸ್ಟರ್‌ಹ್ಯೂಝೆನ್:** ಶಾರುಖ್ ಖಾನ್ ಹಾಗೂ ಗ್ಲೆನ್ ಫಿಲಿಪ್ಸ್ ಅವರನ್ನು ರಿಲೀಸ್ ಮಾಡಲು ಮುಂದಾಗಿರುವ ಗುಜರಾತ್ ಟೈಟಾನ್ಸ್ ಫ್ರಾಂಚೈಸಿಯು ಸೌತ್ ಆಫ್ರಿಕಾದ ಯುವ ಪ್ರತಿಭಾವಂತ ವಿಕೆಟ್ ಕೀಪರ್–ಬ್ಯಾಟರ್ ಕಾನರ್ ಎಸ್ಟರ್‌ಹ್ಯೂಝೆನ್ ಅವರನ್ನು ಮಾತ್ರ ತಂಡದಲ್ಲೇ ಉಳಿಸಿಕೊಳ್ಳಲು ಫ್ರಾಂಚೈಸಿ ಒಲವು ತೋರಿದೆ ಎಂದು ಪಿಟಿಐ ವರದಿ ಮಾಡಿದೆ. ಹೀಗಾಗಿ ಕಾನರ್ ಮುಂದಿನ ವರ್ಷ ಕೂಡ ಗುಜರಾತ್ ಟೈಟಾನ್ಸ್ ತಂಡದಲ್ಲಿ ಮುಂದುವರೆಯುವುದನ್ನು ಎದುರು ನೋಡಬಹುದು. **ಗುಜರಾತ್ ಟೈಟಾನ್ಸ್ ತಂಡ (2026):** ಶುಭ್‌ಮನ್ ಗಿಲ್ (ನಾಯಕ), ಸಾಯಿ ಸುದರ್ಶನ್, ಕುಮಾರ್ ಕುಶಾಗ್ರಾ, ಅನೂಜ್ ರಾವತ್, ಜೋಸ್ ಬಟ್ಲರ್, ನಿಶಾಂತ್ ಸಿಂಧು, ವಾಷಿಂಗ್ಟನ್ ಸುಂದರ್, ಅರ್ಷದ್ ಖಾನ್, ರಾಹುಲ್ ತೆವಾಟಿಯಾ, ಕಗಿಸೊ ರಬಾಡ, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ, ಇಶಾಂತ್ ಶರ್ಮಾ, ಗುರ್ನೂರ್ ಸಿಂಗ್ ಬ್ರಾರ್, ರಶೀದ್ ಖಾನ್, ಮಾನವ್ ಸುತಾರ್, ಸಾಯಿ ಕಿಶೋರ್, ಜಯಂತ್ ಯಾದವ್, ಅಶೋಕ್ ಶರ್ಮಾ, ಜೇಸನ್ ಹೋಲ್ಡರ್, ಕಾನರ್ ಎಸ್ಟರ್‌ಹ್ಯೂಝೆನ್, ಪೃಥ್ವಿರಾಜ್ ಯಾರ್ರಾ, ಲ್ಯೂಕ್ ವುಡ್, ಗ್ಲೆನ್ ಫಿಲಿಪ್ಸ್, ಶಾರುಖ್ ಖಾನ್

ವೈಭವ್‌ಗೆ ವಿಶೇಷ ರಣತಂತ್ರ ರೆಡಿ ಇದೆ: ಮಿಚೆಲ್ ಸ್ಯಾಂಟ್ನರ್ ಎಚ್ಚರಿಕೆ!

ಭಾರತ ಹಾಗೂ ನ್ಯೂಝಿಲೆಂಡ್ ನಡುವಿನ 5 ಪಂದ್ಯಗಳ ಬಹುನಿರೀಕ್ಷಿತ ಟಿ20 ಸರಣಿಯು ಅಕ್ಟೋಬರ್ 22, 2026 ರಿಂದ ಕ್ರೈಸ್ಟ್‌ಚರ್ಚ್‌ನಲ್ಲಿ ಆರಂಭಗೊಳ್ಳುತ್ತಿದೆ. ಈ ಸರಣಿಯ ಆರಂಭಕ್ಕೂ ಮುನ್ನ ನಡೆದ ಪತ್ರಿಕಾಗೋಷ್ಠಿಯಲ್ಲಿ ಕಿವೀಸ್ ನಾಯಕ ಮಿಚೆಲ್ ಸ್ಯಾಂಟ್ನರ್, ಭಾರತದ 15 ವರ್ಷದ ಉದಯೋನ್ಮುಖ ಬ್ಯಾಟಿಂಗ್ ಸೆನ್ಸೇಷನ್ ವೈಭವ್ ಸೂರ್ಯವಂಶಿ ಅವರ ಬಗ್ಗೆ ಮುಕ್ತವಾಗಿ ಮಾತನಾಡಿದ್ದಾರೆ. ಇತ್ತೀಚಿನ ವೆಸ್ಟ್ ಇಂಡೀಸ್ ಸರಣಿಯಲ್ಲಿ ವೈಭವ್ ಸೂರ್ಯವಂಶಿಗೆ ಅವರಿಗೆ ಒಂದೂ ಪಂದ್ಯದಲ್ಲಿ ಆಡುವ ಅವಕಾಶ ನೀಡದೆ ಬೆಂಚ್ ಕಾಯಿಸಿದ ಭಾರತ ತಂಡದ ಮ್ಯಾನೇಜ್‌ಮೆಂಟ್ ನಿರ್ಧಾರದ ಬಗ್ಗೆ ಸ್ಯಾಂಟ್ನರ್ ತಮ್ಮದೇ ಆದ ವಿಶ್ಲೇಷಣೆ ನೀಡಿದ್ದಾರೆ.

ವೆಸ್ಟ್ ಇಂಡೀಸ್ ವಿರುದ್ಧದ ಸರಣಿಯಲ್ಲಿ ವೈಭವ್ ಸೂರ್ಯವಂಶಿ ಅವರಿಗೆ ಆಡುವ ಹನ್ನೊಂದರ ಬಳಗದಲ್ಲಿ ಸ್ಥಾನ ಸಿಗದೇ ಇದ್ದಿದ್ದರ ಬಗ್ಗೆ ಪ್ರತಿಕ್ರಿಯಿಸಿದ ಸ್ಯಾಂಟ್ನರ್, ಭಾರತ ತಂಡದ ಅಗ್ರ ಕ್ರಮಾಂಕದ ಬ್ಯಾಟಿಂಗ್ ಆಳವೇ ಇದಕ್ಕೆ ಮುಖ್ಯ ಕಾರಣ ಎಂದಿದ್ದಾರೆ. ‘‘ಭಾರತ ತಂಡದ ಬ್ಯಾಟಿಂಗ್ ಲೈನ್‌ಅಪ್ ಹಾಗೂ ಅವರ ಕಳೆದ ಸರಣಿಯನ್ನು ಗಮನಿಸಿದರೆ, ವೈಭವ್ ಅವರಿಗೆ ಆಡಲು ಅವಕಾಶ ಸಿಗಲಿಲ್ಲ ನಿಜ. ಆದರೆ, ಪ್ರಸ್ತುತ ಭಾರತದ ಪರ ಆರಂಭಿಕರಾಗಿ ಕಣಕ್ಕಿಳಿಯುತ್ತಿರುವ ಸಂಜು ಸ್ಯಾಮ್ಸನ್ ಮತ್ತು ಅಭಿಷೇಕ್ ಶರ್ಮಾ ಅದ್ಭುತ ಪ್ರದರ್ಶನ ನೀಡುತ್ತಿದ್ದಾರೆ. ಇಂತಹ ಪ್ರಬಲ ಆಟಗಾರರಿರುವಾಗ ತಂಡದಲ್ಲಿ ಸ್ಥಾನ ಪಡೆಯುವುದು ಸುಲಭವಲ್ಲ’’ ಎಂದು ಸ್ಯಾಂಟ್ನರ್ ಭಾರತದ ಬ್ಯಾಟಿಂಗ್ ಶಕ್ತಿಯನ್ನು ಕೊಂಡಾಡಿದ್ದಾರೆ. ವೈಭವ್ ಸೂರ್ಯವಂಶಿ ಅವರ ಬ್ಯಾಟಿಂಗ್ ಪ್ರತಿಭೆಯನ್ನು ಐಪಿಎಲ್ ನಲ್ಲಿ ಹತ್ತಿರದಿಂದ ನೋಡಿರುವುದಾಗಿ ನೆನಪಿಸಿಕೊಂಡ ನ್ಯೂಝಿಲೆಂಡ್ ನಾಯಕ, ಈ ಹದಿಹರೆಯದ ಆಟಗಾರನ ಸಾಮರ್ಥ್ಯದ ಬಗ್ಗೆ ಭಾರಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ‘‘ವೈಭವ್ ಎಷ್ಟು ಅಪಾಯಕಾರಿ ಮತ್ತು ಪ್ರತಿಭಾವಂತ ಆಟಗಾರ ಎಂಬುದು ನಮಗೆ ಚೆನ್ನಾಗಿ ತಿಳಿದಿದೆ. ಈ ಸರಣಿಯಲ್ಲಿ ಅವರು ಆಡಲಿ ಅಥವಾ ಬಿಡಲಿ, ಮುಂಬರುವ ದಿನಗಳಲ್ಲಿ ಭಾರತೀಯ ಕ್ರಿಕೆಟ್‌ನಲ್ಲಿ ಅವರು ಸುದೀರ್ಘ ಹಾಗೂ ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದು ಭವಿಷ್ಯ ನುಡಿದಿದ್ದಾರೆ. ವೈಭವ್ ಸೂರ್ಯವಂಶಿ ಅವರು ನ್ಯೂಝಿಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಭಾರತದ ಪರ ಕಣಕ್ಕಿಳಿಯುತ್ತಾರೋ, ಇಲ್ಲವೋ ಎಂಬುದು ಇನ್ನೂ ಕುತೂಹಲದ ಸಂಗತಿಯಾಗಿದೆ. ಆದರೆ ಕಿವೀಸ್ ಪಡೆ ಮಾತ್ರ ಈ ಯುವ ಆಟಗಾರನನ್ನು ಯಾವುದೇ ಕಾರಣಕ್ಕೂ ಲಘುವಾಗಿ ಪರಿಗಣಿಸುತ್ತಿಲ್ಲ. ಒಂದು ವೇಳೆ ವೈಭವ್ ಸೂರ್ಯವಂಶಿ ಈ ಸರಣಿಯಲ್ಲಿ ಆಡುವ ಹನ್ನೊಂದರ ಬಳಗಕ್ಕೆ ಆಯ್ಕೆಯಾದರೆ, ಅವರನ್ನು ಕಟ್ಟಿಹಾಕಲು ನಮ್ಮ ತಂಡ ಈಗಾಗಲೇ ವಿಶೇಷ ರಣತಂತ್ರ ಹಾಗೂ ಯೋಜನೆಗಳನ್ನು ಸಿದ್ಧಪಡಿಸಿಕೊಂಡಿದೆ ಎಂದು ಸ್ಯಾಂಟ್ನರ್ ಸ್ಪಷ್ಟಪಡಿಸಿದ್ದಾರೆ. ಒಟ್ಟಾರೆಯಾಗಿ, 15ರ ಹರೆಯದ ವೈಭವ್ ಸೂರ್ಯವಂಶಿ ಅವರ ಬ್ಯಾಟಿಂಗ್ ಪ್ರತಿಭೆ ಈಗಾಗಲೇ ಜಾಗತಿಕ ಕ್ರಿಕೆಟ್‌ನ ಗಮನ ಸೆಳೆದಿದೆ ಎಂಬುದಕ್ಕೆ ಕಿವೀಸ್ ನಾಯಕನ ಮಾತುಗಳೇ ಸಾಕ್ಷಿ. ಬಲಿಷ್ಠ ಭಾರತೀಯ ಬ್ಯಾಟಿಂಗ್ ಲೈನಪ್‌ನಲ್ಲಿ ವೈಭವ್‌ಗೆ ಸ್ಥಾನ ಸಿಗುತ್ತದೆಯೇ? ಒಂದು ವೇಳೆ ಸಿಕ್ಕರೆ, ಸ್ಯಾಂಟ್ನರ್ ಪಡೆಯ ‘ವಿಶೇಷ ರಣತಂತ್ರ’ವನ್ನು ಮೆಟ್ಟಿ ನಿಂತು ಈ ಯುವ ಸೆನ್ಸೇಷನ್ ಅಬ್ಬರಿಸುತ್ತಾರಾ? ಎಂಬುದನ್ನು ಕಾದುನೋಡಬೇಕಿದೆ.

ಭುವಿ’ ಕಂಬ್ಯಾಕ್: 4 ವರ್ಷಗಳ ಬಳಿಕ ಅವಕಾಶ ನೀಡಿದ ರಹಸ್ಯ ಬಿಚ್ಚಿಟ್ಟ ಅಯ್ಯರ್!



ನ್ಯೂಝಿಲೆಂಡ್ ಪ್ರವಾಸದ ಟಿ20 ಸರಣಿಗೂ ಮುನ್ನ ಟೀಮ್ ಇಂಡಿಯಾ ಭಾರಿ ಚರ್ಚೆಗೆ ಕಾರಣವಾಗಿರುವುದು ಹಿರಿಯ ವೇಗಿ ಭುವನೇಶ್ವರ್ ಕುಮಾರ್ ಅವರ ಅನಿರೀಕ್ಷಿತ ಪುನರಾಗಮನ. ಸುಮಾರು ನಾಲ್ಕು ವರ್ಷಗಳ ಕಾಲ ರಾಷ್ಟ್ರೀಯ ತಂಡದಿಂದ ಹೊರಗುಳಿದಿದ್ದ 36 ವರ್ಷದ ಸ್ವಿಂಗ್ ಮಾಂತ್ರಿಕನನ್ನು ಮತ್ತೆ ತಂಡಕ್ಕೆ ಆಯ್ಕೆ ಮಾಡಲು ಪ್ರಮುಖ ಕಾರಣ ಏನೆಂಬುದನ್ನು ಭಾರತದ ಟಿ20 ನಾಯಕ ಶ್ರೇಯಸ್ ಅಯ್ಯರ್ ಅಧಿಕೃತವಾಗಿ ಬಹಿರಂಗಪಡಿಸಿದ್ದಾರೆ. ಕ್ರೈಸ್ಟ್‌ಚರ್ಚ್‌ನಲ್ಲಿ ನಡೆಯಲಿರುವ ಮೊದಲ ಟಿ20 ಪಂದ್ಯಕ್ಕೂ ಮುನ್ನ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಯ್ಯರ್, ತಂಡದ ಬೌಲಿಂಗ್ ವಿಭಾಗದಲ್ಲಿ ‘‘ಅನುಭವದ ಕೊರತೆ’’ ಎದ್ದು ಕಾಣುತ್ತಿದ್ದರಿಂದ ಭುವನೇಶ್ವರ್ ಕುಮಾರ್ ಅವರನ್ನು ಮರಳಿ ತಂಡಕ್ಕೆ ಕರೆಯಿಸಿಕೊಳ್ಳಲಾಯಿತು ಎಂದು ಸ್ಪಷ್ಟಪಡಿಸಿದ್ದಾರೆ. ತಂಡದ ಬೌಲಿಂಗ್ ಲೈನ್‌ಅಪ್ ಬಗ್ಗೆ ಮಾತನಾಡಿದ ನಾಯಕ ಶ್ರೇಯಸ್ ಅಯ್ಯರ್, ಭುವಿ (ಭುವನೇಶ್ವರ್) ತಂಡಕ್ಕೆ ಅಪಾರ ಅನುಭವವನ್ನು ತರುತ್ತಾರೆ. ವಿಶೇಷವಾಗಿ ಐಪಿಎಲ್ ಮುಗಿದ ನಂತರ ನಮ್ಮ ಬೌಲಿಂಗ್ ವಿಭಾಗದಲ್ಲಿ ಆ ಅನುಭವದ ಕೊರತೆ ಇತ್ತು. ತಂಡದಲ್ಲಿ ಸಾಕಷ್ಟು ಹೊಸ ಬೌಲರ್‌ಗಳಿದ್ದರು ಎಂದು ಒಪ್ಪಿಕೊಂಡಿದ್ದಾರೆ. ಕಳೆದ ಕೆಲವು ಸರಣಿಗಳಲ್ಲಿ ಭಾರತೀಯ ಬೌಲಿಂಗ್ ಯುವ ಆಟಗಾರರಿಂದ ಕೂಡಿತ್ತು.

ಜಸ್‌ಪ್ರೀತ್ ಬುಮ್ರಾ ಮತ್ತು ಹಾರ್ದಿಕ್ ಪಾಂಡ್ಯ ಅವರಂತಹ ಹಿರಿಯ ಆಟಗಾರರ ಗೈರುಹಾಜರಿಯಲ್ಲಿ, ನ್ಯೂಝಿಲೆಂಡ್‌ನ ಕಠಿಣ ಪರಿಸ್ಥಿತಿಯನ್ನು ಎದುರಿಸಲು ಒಬ್ಬ ಅನುಭವಿ ಬೌಲರ್‌ನ ಅಗತ್ಯ ತಂಡಕ್ಕೆ ಇತ್ತು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪರವಾಗಿ ಐಪಿಎಲ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ್ದ ಭುವನೇಶ್ವರ್ ಕುಮಾರ್, ಟೂರ್ನಿಯಲ್ಲಿ ಬರೋಬ್ಬರಿ 28 ವಿಕೆಟ್ ಕಬಳಿಸುವ ಮೂಲಕ ಪರ್ಪಲ್ ಕ್ಯಾಪ್ ರೇಸ್‌ನಲ್ಲಿ ಎರಡನೇ ಸ್ಥಾನ ಪಡೆದಿದ್ದರು.

ಸುಳ್ಳು ಹೇಳುವ ಅಗತ್ಯವೇ ಇಲ್ಲ: ಮೊಹಮ್ಮದ್ ಶಮಿ ಖಡಕ್ ಮಾತು

ನ್ಯೂಝಿಲೆಂಡ್ ಪ್ರವಾಸದ ಭಾರತ ತಂಡದಿಂದ ಕೈಬಿಟ್ಟ ಬೆನ್ನಲ್ಲೇ ತೀವ್ರ ಚರ್ಚೆಗೆ ಒಳಗಾಗಿದ್ದ ವೇಗದ ಬೌಲರ್ ಮೊಹಮ್ಮದ್ ಶಮಿ, ತಮ್ಮ ನಿವೃತ್ತಿಯ ವದಂತಿಗಳಿಗೆ ಪೂರ್ಣವಿರಾಮ ಇಟ್ಟಿದ್ದಾರೆ. ಬಂಗಾಳ ತಂಡದ ಪರ ರಣಜಿ ಟ್ರೋಫಿ ಪಂದ್ಯದಲ್ಲಿ ಸುದೀರ್ಘ ಸ್ಪೆಲ್ ಬೌಲಿಂಗ್ ಮಾಡಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ 36 ವರ್ಷದ ಹಿರಿಯ ವೇಗಿ, ‘‘ಸರ್, ನಾನು ಇಂದಿಗೂ ನನ್ನ ಫಾರ್ಮ್‌ನ ತುತ್ತತುದಿಯಲ್ಲೇ ಇದ್ದೇನೆ. ಸುಳ್ಳು ಹೇಳುವ ಅಗತ್ಯವಿಲ್ಲ, ನಾನು ಹೇಗಿದ್ದೆನೋ ಹಾಗೇ ಅತ್ಯುತ್ತಮ ಲಯದಲ್ಲೇ ಇದ್ದೇನೆ’’ ಎಂದು ವಿಶ್ವಾಸದಿಂದ ನುಡಿದಿದ್ದಾರೆ. ರಣಜಿ ಟ್ರೋಫಿಯ ಮೊದಲ ಪಂದ್ಯದಲ್ಲೇ ದೆಹಲಿ ವಿರುದ್ಧ 5 ವಿಕೆಟ್ ಕಬಳಸಿ ಮಿಂಚಿದ್ದರೂ ಪ್ರಗ್ಯಾನ್ ಓಜಾ ನೇತೃತ್ವದ ಆಯ್ಕೆ ಸಮಿತಿ ಮೊಹಮ್ಮದ್ ಶಮಿ ಅವರನ್ನು ಏಕದಿನ ಹಾಗೂ ಟೆಸ್ಟ್ ಸರಣಿ ಎರಡರಿಂದಲೂ ಹೊರಗಿಟ್ಟಿದೆ. ಇದೇ ವೇಳೆ ಅವರ ಸಮಕಾಲೀನ ಹಿರಿಯ ಬೌಲರ್ ಭುವನೇಶ್ವರ್ ಕುಮಾರ್ ಸುಮಾರು 4 ವರ್ಷಗಳ ನಂತರ ಟಿ20 ತಂಡಕ್ಕೆ ಪುನರಾಗಮನ ಮಾಡಿರುವುದು ಗಮನಾರ್ಹ. ಇತ್ತೀಚೆಗೆ ರಾಷ್ಟ್ರೀಯ ಆಯ್ಕೆಗಾರರು ನಿಮ್ಮೊಂದಿಗೆ ಮಾತನಾಡಿದ್ದಾರೆಯೇ ಎಂಬ ನೇರ ಪ್ರಶ್ನೆಗೆ ಉತ್ತರಿಸಿದ ಶಮಿ, ‘‘ಸರ್, ನಾನು ಸದ್ಯ ಭಾರತ ತಂಡದಲ್ಲಿಲ್ಲ, ನನ್ನೊಂದಿಗೆ ಯಾರು ಮಾತನಾಡುತ್ತಾರೆ? ಮತ್ತು ಅವರು ನನ್ನೊಂದಿಗೆ ಯಾಕೆ ಮಾತನಾಡಬೇಕು ಎಂದು ಮುಕ್ತವಾಗಿ ಹೇಳಿದ್ದಾರೆ. ದೇಶಿ ಕ್ರಿಕೆಟ್‌ನಲ್ಲಿ ಅವರು ಕಡಿಮೆ ಓವರ್‌ಗಳ ಸ್ಪೆಲ್ ಎಸೆಯುತ್ತಿದ್ದಾರೆ ಎಂದು ಟೀಕಿಸಿದವರಿಗೆ ಮೊಹಮ್ಮದ್ ಶಮಿ ತಕ್ಕ ಉತ್ತರ ನೀಡಿದ್ದಾರೆ. ‘‘ನಾನು ಒಂದೇ ಪಂದ್ಯದಲ್ಲಿ 35 ಕ್ಕೂ ಹೆಚ್ಚು ಓವರ್‌ಗಳನ್ನು ಬೌಲಿಂಗ್ ಮಾಡಿದ್ದೇನೆ ಎಂಬುದಕ್ಕೆ ಬೇಕಿದ್ದರೆ ಸ್ಕೋರ್‌ಕಾರ್ಡ್‌ಗಳ ಸ್ಕ್ರೀನ್‌ಶಾಟ್ ಹಂಚಬಲ್ಲೆ’’ ಎಂದು ಹೊರಗಿನ ಟೀಕೆಗಳನ್ನು ತಳ್ಳಿಹಾಕಿದ್ದಾರೆ. ಮಾರ್ಚ್ 2025 ರ ಚಾಂಪಿಯನ್ಸ್ ಟ್ರೋಫಿ ವಿಜೇತ ಭಾರತ ತಂಡದ ಭಾಗವಾಗಿದ್ದ ಮೊಹಮ್ಮದ್ ಶಮಿ, ತಮ್ಮ ಕೊನೆಯ ಅಂತಾರಾಷ್ಟ್ರೀಯ ಪಂದ್ಯವನ್ನು ಆಡಿದ್ದರು. ಭಾರತಕ್ಕೆ ಏಕದಿನ ವಿಶ್ವಕಪ್ ಗೆದ್ದುಕೊಡುವುದೇ ತಮ್ಮ ಅಂತಿಮ ಗುರಿ ಎಂದಿರುವ ಅವರು, ಬಂಗಾಳ ತಂಡದ ಪರ ದೇಶಿ ಕ್ರಿಕೆಟ್‌ನಲ್ಲಿ ಸತತ ಶ್ರಮ ವಹಿಸಿ ಮತ್ತೆ ಭಾರತ ತಂಡಕ್ಕೆ ಕಂಬ್ಯಾಕ್ ಮಾಡುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ, ಮೊಹಮ್ಮದ್ ಶಮಿ ಅವರ ಈ ಹೇಳಿಕೆಗಳು ಅವರೊಳಗಿನ ಕ್ರಿಕೆಟ್ ಹಸಿವು ಇನ್ನೂ ಆರಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತವೆ. ವಯಸ್ಸು ಮತ್ತು ತಂಡದಿಂದ ಹೊರಗಿಟ್ಟಿರುವುದು ಕೇವಲ ಅಂಕಿ–ಅಂಶಗಳಷ್ಟೇ, ತಮ್ಮ ಬೌಲಿಂಗ್ ಚತುರತೆ ಮತ್ತು ಫಿಟ್‌ನೆಸ್ ಇನ್ನೂ ಅಂತರರಾಷ್ಟ್ರೀಯ ಮಟ್ಟದಲ್ಲೇ ಇದೆ ಎಂಬುದನ್ನು ಅವರು ಸಾಬೀತುಪಡಿಸಲು ಸಜ್ಜಾಗಿದ್ದಾರೆ.

ಬಿಸಿಸಿಐ ಆಯ್ಕೆಗಾರರ ನಿರ್ಧಾರ ಏನೇ ಇರಲಿ, ದೇಶಿ ಕ್ರಿಕೆಟ್ ಅಂಗಳದಲ್ಲಿ ಬಂಗಾಳ ಪರ ಕಠಿಣ ಶ್ರಮ ಪಡುತ್ತಿರುವ ಶಮಿ, ಮತ್ತೊಮ್ಮೆ ಟೀಮ್ ಇಂಡಿಯಾದ ನೀಲಿ ಜೆರ್ಸಿ ತೊಟ್ಟು ವಿಶ್ವಕಪ್ ಗೆಲ್ಲುವ ತಮ್ಮ ಕನಸನ್ನು ನನಸು ಮಾಡಿಕೊಳ್ಳಲು ಸಂಪೂರ್ಣ ಛಲ ಬಿಡದೆ ಮುನ್ನುಗ್ಗುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಅವರ ಈ ಹೋರಾಟ ಯಾವ ತಿರುವು ಪಡೆದುಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966